
ಕರ್ನಾಟಕ ಸರ್ಕಾರ

ವಯಸ್ಸು
4 ರಿಂದ 5 ವರ್ಷಗಳು




# ಚಿಲಿಪಿಲಿ Plus

## ಶಿಕ್ಷಕರ ಕೈಪಿಡಿ

### ಪುಸ್ತಕ 6

- ವಾಹನಗಳು ಮತ್ತು ಸಾರಿಗೆ
- ಶಬ್ದ, ಸ್ಥಳ ಮತ್ತು ದಿಕ್ಕು




ಸರ್ವ ಶಿಕ್ಷಣ ಅಭಿಯಾನ
ಎಲ್ಲರೂ ಕಲಿಯೋಣ - ಎಲ್ಲರೂ ಬೆಳೆಯೋಣ

ಸಮಗ್ರ ಶಿಕ್ಷಣ ಕರ್ನಾಟಕ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

Scanned with CamScanner

# ಪರಿವಿಡಿ



## ವಿಷಯ 6: ವಾಹನಗಳು ಮತ್ತು ಸಾರಿಗೆ


### ಉಪವಿಷಯ 6.1: ಸಾರಿಗೆಯ ಉಪಯೋಗಗಳು





ಸಂಭಾಷಣೆ . . . . . . . . . . . . . . . . . . . . . . . . . . . 2
ಯೋಜನಾ ಕಾರ್ಯಗಳು . . . . . . . . . . . . . . . . . . . . . . 5
ಶಿಶುಗೀತೆಗಳು . . . . . . . . . . . . . . . . . . . . . . . . . 8
ಕಥೆ . . . . . . . . . . . . . . . . . . . . . . . . . . . . . . 14
ಸೃಜನಾತ್ಮಕ ಚಟುವಟಿಕೆಗಳು . . . . . . . . . . . . . . . . . 16
ಒಳಾಂಗಣ ಆಟಗಳು . . . . . . . . . . . . . . . . . . . . . 20
ಹೊರಾಂಗಣ ಆಟಗಳು . . . . . . . . . . . . . . . . . . . . . 21
Total Physical Response . . . . . . . . . . . . . . . . . . 23


### ಉಪವಿಷಯ 6.2: ವಿವಿಧ ಬಗೆಯ ಸಾರಿಗೆ ವಾಹನಗಳು


ಸಂಭಾಷಣೆ . . . . . . . . . . . . . . . . . . . . . . . . . . . 28
ಯೋಜನಾ ಕಾರ್ಯಗಳು . . . . . . . . . . . . . . . . . . . . . . 31
ಶಿಶುಗೀತೆಗಳು . . . . . . . . . . . . . . . . . . . . . . . . . 34
ಕಥೆ . . . . . . . . . . . . . . . . . . . . . . . . . . . . . . 38
ಸೃಜನಾತ್ಮಕ ಚಟುವಟಿಕೆಗಳು . . . . . . . . . . . . . . . . . 40
ಒಳಾಂಗಣ ಆಟಗಳು . . . . . . . . . . . . . . . . . . . . . 42
ಹೊರಾಂಗಣ ಆಟಗಳು . . . . . . . . . . . . . . . . . . . . . 44
Total Physical Response . . . . . . . . . . . . . . . . . . 46

### ಉಪವಿಷಯ 6.3: ಸಂಚಾರ ನಿಯಮಗಳು




ಸಂಭಾಷಣೆ . . . . . . . . . . . . . . . . . . . . . . . . . . . 50
ಯೋಜನಾ ಕಾರ್ಯಗಳು . . . . . . . . . . . . . . . . . . . . . . 55
ಶಿಶುಗೀತೆಗಳು . . . . . . . . . . . . . . . . . . . . . . . . . 57
ಕಥೆ . . . . . . . . . . . . . . . . . . . . . . . . . . . . . . 61
ಸೃಜನಾತ್ಮಕ ಚಟುವಟಿಕೆಗಳು . . . . . . . . . . . . . . . . . 64
ಒಳಾಂಗಣ ಆಟಗಳು . . . . . . . . . . . . . . . . . . . . . 66
ಹೊರಾಂಗಣ ಆಟಗಳು . . . . . . . . . . . . . . . . . . . . . 68
Total Physical Response . . . . . . . . . . . . . . . . . . 69


## ಶಬ್ದ, ಸ್ಥಳ ಮತ್ತು ದಿಕ್ಕು

### ಪರಿಕಲ್ಪನೆ ಹಾಗೂ ನಿರ್ವಹಣೆ


ಸಿದ್ಧತಾ ಚಟುವಟಿಕೆಗಳು . . . . . . . . . . . . . . . . . . . 73
ಪರಿಶೋಧನಾತ್ಮಕ ಚಟುವಟಿಕೆಗಳು . . . . . . . . . . . . . . 75
ವಿಸ್ತರಣಾ ಚಟುವಟಿಕೆ . . . . . . . . . . . . . . . . . . . . 77





Scanned with CamScanner

ಪಠ್ಯಕ್ರಮವನ್ನು ಈ ಕೆಳಗಿನಂತೆ ವಿನ್ಯಾಸಗೊಳಿಸಲಾಗಿದೆ:

## ಮೌಖಿಕ ಭಾಷಾ ಕೌಶಲ ಬೆಳವಣಿಗೆ



ಸಂಭಾಷಣೆ



ಯೋಜನಾ ಕಾರ್ಯಗಳು



ಶಿಶುಗೀತೆಗಳು



ಕಥೆ



Total Physical Response (TPR)

---

## ಸೂಕ್ಷ್ಮ ಮತ್ತು ಸ್ಥೂಲ ಚಲನ ಕೌಶಲ, ಸಾಮಾಜಿಕ-ಭಾವನಾತ್ಮಕ ಮತ್ತು ಸೃಜನಾತ್ಮಕ ಬೆಳವಣಿಗೆ



ಒಳಾಂಗಣ ಆಟಗಳು



ಹೊರಾಂಗಣ ಆಟಗಳು



ಸೃಜನಾತ್ಮಕ ಚಟುವಟಿಕೆಗಳು

---

## ಇಂದ್ರಿಯ ಗ್ರಹಿಕೆಯ ಬೆಳವಣಿಗೆ



ಸಿದ್ಧತಾ ಚಟುವಟಿಕೆಗಳು



ಪರಿಶೋಧನಾತ್ಮಕ ಚಟುವಟಿಕೆಗಳು



ವಿಸ್ತರಣಾ ಚಟುವಟಿಕೆ



ಅನ್ವಯಿಸುವಿಕೆ

Scanned with CamScanner

# ಕೃತಜ್ಞತೆಗಳು


2019–20ನೇ ಸಾಲಿನಲ್ಲಿ 276 ಕರ್ನಾಟಕ ಪಬ್ಲಿಕ್ ಶಾಲೆಗಳಲ್ಲಿ ಪೂರ್ವ ಪ್ರಾಥಮಿಕ ತರಗತಿಗಳನ್ನು ಪ್ರಾರಂಭಿಸಲಾಗಿದೆ. ಪೂರ್ವ ಪ್ರಾಥಮಿಕ ತರಗತಿಗಳ ಶಿಕ್ಷಕಿಯರಿಗೆ ಪಠ್ಯಕ್ರಮ ಅನುಸರಿಸಲು ಕೈಪಿಡಿಯ ಅವಶ್ಯಕತೆಯಿರುವುದರಿಂದ, ಸಿದ್ದಪಡಿಸಲು ಈ ಕೆಳಕಂಡ ಪಠ್ಯಕ್ರಮ ರಚನಾ ತಂಡಕ್ಕೆ ಸೂಚನೆ ನೀಡಲಾಗಿತ್ತು.

ಪೂರ್ವ ಪ್ರಾಥಮಿಕ ತರಗತಿಗಳ ಪಠ್ಯಕ್ರಮ ರಚನೆಗೆ ಸಹಕರಿಸಿದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆಯ ಅಂಗನವಾಡಿ ಮೇಲ್ವಿಚಾರಕರು, ನಲಿ–ಕಲಿ ಶಿಕ್ಷಕರು, ಸಂಪನ್ಮೂಲ ವ್ಯಕ್ತಿಗಳು, ಅಕ್ಷರ ಫೌಂಡೇಷನ್, ಅಜೀಂ ಪ್ರೇಮ್‌ಜಿ ಫೌಂಡೇಷನ್, ಸೆಂಟರ್ ಫಾರ್ ಲರ್ನಿಂಗ್, ಕಮ್ಯೂನಿಟಿ ಬೇಸ್ಡ್ ರಿಹ್ಯಾಬಿಲಿಟೇಷನ್ ನೆಟ್‌ವರ್ಕ್(ಸಿ.ಬಿ.ಆರ್), ಕಲಿಕೆ–ಟಾಟಾ ಟ್ರಸ್ಟ್, ಪ್ರಜಾಯತ್ನ, ಪ್ರಜ್ಞಾ ವಿದ್ಯಾ–ಕ್ರಿಯೇಟಿವ್ ಸ್ಕೂಲ್, ಪ್ರಾಪ್ತಿ ಫೌಂಡೇಷನ್, ಪ್ರಾಮಿಸ್ ಫೌಂಡೇಷನ್, ಟ್ರೈಡ್ ಲರ್ನಿಂಗ್ ಮತ್ತು ವಿ.ಹೆಚ್.ಡಿ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ರವರು ತಮ್ಮ ಅನುಭವ, ಪರಿಣತಿಯನ್ನು ಹಂಚಿಕೊಂಡಿರುತ್ತಾರೆ. ಪೂರ್ವ ಪ್ರಾಥಮಿಕ ತರಗತಿಗಳ ಶಿಕ್ಷಕಿಯರ ಸಾಮರ್ಥ್ಯಗಳ ಅಭಿವೃದ್ಧಿಗಾಗಿ ಸಹಕರಿಸಿದವರೆಲ್ಲವರಿಗೂ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

ಚಿಲಿ ಪಿಲಿ ಕಲಿಕಾ ಸಂಪನ್ಮೂಲಗಳಿಂದ ಕೆಲವು ಆಯ್ದ ಚಟುವಟಿಕೆಗಳು, ಕಥೆಗಳು, ಪದ್ಯಗಳು, ಎನ್‌ಸಿಇಆರ್‌ಟಿ ಸಂಪನ್ಮೂಲ ಪುಸ್ತಕಗಳಿಂದ ಥೀಮ್ ಬೇಸ್ಡ್ ಅರ್ಲಿ ಚೈಲ್ಡ್ ಕೇರ್ ಮತ್ತು ಶೈಕ್ಷಣಿಕ ಕಾರ್ಯಕ್ರಮಗಳನ್ನು, ಸೇವ್‌ದ ಚಿಲ್ಡ್ರನ್ ಇಂಟರ್‌ನ್ಯಾಷನಲ್ ಸಂಸ್ಥೆಯಿಂದ ರೆಡಿ ಟು ಲರ್ನ್ ಅರ್ಲಿ ಲಿಟರೆಸಿ ಆಂಡ್ ಮ್ಯಾಥ್ಸ್, www.storyweavers.org.in, ಮತ್ತು ಇತರೆ ಮುಕ್ತ ಸಂಪನ್ಮೂಲಗಳಿಂದ ಅಗತ್ಯ ಮಾಹಿತಿಗಳನ್ನು ಅವಶ್ಯಕತೆ ಮತ್ತು ಸಂದರ್ಭಕ್ಕೆ ಅನುಗುಣವಾಗಿ ಪಠ್ಯಕ್ರಮದಲ್ಲಿ ಅಳವಡಿಸಿಕೊಳ್ಳಲಾಗಿದೆ. ಈ ಕಾರ್ಯಕ್ರಮಕ್ಕೆ ಆರ್ಥಿಕ ಮತ್ತು ತಾಂತ್ರಿಕ ನೆರವು ನೀಡಿದ ಯುನಿಸೆಫ್ ಸಂಸ್ಥೆಗೆ ಧನ್ಯವಾದಗಳನ್ನು ಸಲ್ಲಿಸುತ್ತೇವೆ.

**(ಡಾ. ಎಂ.ಟಿ. ರೇಜು, ಭಾ.ಆ.ಸೇ.)**
ರಾಜ್ಯ ಯೋಜನಾ ನಿರ್ದೇಶಕರು
ಸಮಗ್ರ ಶಿಕ್ಷಣ ಕರ್ನಾಟಕ
ಬೆಂಗಳೂರು

Scanned with CamScanner



## ವಾಹನಗಳು ಮತ್ತು ಸಾರಿಗೆ

# ಸಾರಿಗೆಯ ಉಪಯೋಗಗಳು





Scanned with CamScanner

# ಕಲಿಕಾ ಫಲಿತಗಳು

## ಉಪವಿಷಯ 6.1: ಸಾರಿಗೆಯ ಉಪಯೋಗಗಳು

| 3–4 ವರ್ಷಗಳು | 4–5 ವರ್ಷಗಳು | 5–6 ವರ್ಷಗಳು |
|---|---|---|
| 1 ವಸ್ತುಗಳು ಮತ್ತು ಜನರನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗಿಸಲು ಅನುಕೂಲ ಮಾಡಿಕೊಡುವ ಸಾಧನಗಳಾಗಿ ವಾಹನಗಳ ಉಪಯೋಗಗಳನ್ನು ಅರಿಯುವುದು. | 1 ವಿವಿಧ ಉದ್ದೇಶಗಳಿಗಾಗಿ ಹಾಗೂ ಸಮಯ ಮತ್ತು ಶ್ರಮವನ್ನು ಉಳಿಸಲು ವಿವಿಧ ವಾಹನಗಳ ಉಪಯೋಗಗಳನ್ನು ಅರಿಯುವರು. | 1 ವಿಶಿಷ್ಟ ಉದ್ದೇಶಗಳಿಗಾಗಿ ಬಳಸುವ ನಿರ್ದಿಷ್ಟ ವಾಹನಗಳಾದ ಆಂಬ್ಯುಲೆನ್ಸ್(ತುರ್ತು ವಾಹನ), ಅಗ್ನಿ ಶಾಮಕ ವಾಹನ, ಟ್ರ್ಯಾಕ್ಟರ್, ಟ್ರಕ್, ಲಾರಿ, ಜೆಸಿಬಿ, ಮತ್ತು ದೋಣಿ ಮೊದಲಾದವುಗಳನ್ನು ಗುರುತಿಸುವುದು. |
| 2 ಸಾಮಾನ್ಯವಾಗಿ ಉಪಯೋಗಿಸುವ ವಿವಿಧ ವಾಹನಗಳಾದ ಬಸ್ಸು, ರೈಲು, ಆಟೋ, ಸೈಕಲ್, ಲಾರಿ, ತಳ್ಳುವ ಗಾಡಿ, ದೋಣಿ, ವಿಮಾನ ಮೊದಲಾದವುಗಳನ್ನು ಗುರುತಿಸುವುದು. | 2 ವಾಹನದಲ್ಲಿ ಪ್ರಯಾಣಿಸುವ ಜನರ ಸಂಖ್ಯೆ, ಸರಕಿನ ಪ್ರಮಾಣ ಇವುಗಳಿಗೆ ಸಂಬಂಧಿಸಿದಂತೆ ವಾಹನದ ಗಾತ್ರದ ನಡುವಿನ ಸಂಬಂಧ ತಿಳಿಯುವುದು– ದೊಡ್ಡ ವಾಹನಗಳು ಸಣ್ಣ ವಾಹನಗಳಿಗಿಂತ ಹೆಚ್ಚು ಜನರನ್ನು ಮತ್ತು ಸಾಮಾನುಗಳನ್ನು ಕೊಂಡೊಯ್ಯುತ್ತವೆ ಮತ್ತು ನಾವು ಒಂದು ಜಾಗಕ್ಕೆ ಬೇಗ ಹೋಗಬೇಕಾಗಿದ್ದರೆ ಅಥವಾ ದೂರ ಹೆಚ್ಚಾಗಿದ್ದರೆ ವೇಗವಾಗಿ ಹೋಗುವ ವಾಹನಗಳನ್ನು ಬಳಸುತ್ತೇವೆ ಎಂದು ತಿಳಿದುಕೊಳ್ಳುವುದು. | 2 ವಾಹನಗಳನ್ನು ನಡೆಸಲು ಅಗತ್ಯವಾದ ಪೆಟ್ರೋಲ್, ಡೀಸೆಲ್, ಅನಿಲ, ಗಾಳಿ ಮತ್ತು ಹುಟ್ಟು ಹಾಕುವುದು, ವಿದ್ಯುಚ್ಛಕ್ತಿ, ಪ್ರಾಣಿಗಳು, ನೂಕುವುದು ಮತ್ತು ಎಳೆಯುವುದು ಮೊದಲಾದ ಶಕ್ತಿಯ ಮೂಲಗಳನ್ನು ತಿಳಿಯುವುದು. |
| 3 ಬಸ್ಸು, ರೈಲು, ಆಟೋ, ಕಾರು, ಸೈಕಲ್, ವಿಮಾನ ಮೊದಲಾದ ವೈಯಕ್ತಿಕ ಮತ್ತು ಸಾರ್ವಜನಿಕ ಸಾರಿಗೆಗಳ ನಡುವಿನ ವ್ಯತ್ಯಾಸವನ್ನು ತಿಳಿಯುವುದು. | 3 ವಾಹನದ ವಿವಿಧ ಭಾಗಗಳಾದ ಚಕ್ರಗಳು, ಸ್ಟೀರಿಂಗ್, ಎಂಜಿನ್, ಬ್ರೇಕ್, ದೀಪ, ಕನ್ನಡಿ, ಹಾರ್ನ್ ಮೊದಲಾದವುಗಳನ್ನು ಗುರುತಿಸುವುದು ಮತ್ತು ಅವುಗಳ ಬಳಕೆ ವಿವರಿಸುವುದು. | 3 ವಿಶೇಷ ವಾಹನಗಳ ಭಾಗಗಳಾದ ಸೈರನ್,ಏಣಿ, ನೀರಿನ ಕೊಳವೆ, ರೇಕ್ಸ್ (ಹೆರೆದು ಒಟ್ಟು ಮಾಡುವ ಸಾಧನ) ಕೈಮಂಚ (ಸ್ಟ್ರೆಚರ್) ಮೊದಲಾದವುಗಳನ್ನು ಗುರುತಿಸುವುದು ಮತ್ತು ಅವುಗಳ ಬಳಕೆ ವಿವರಿಸುವುದು. |
| 4 ನಮಗೆ ವಾಹನಗಳ ಅಗತ್ಯವಿದೆ ಮತ್ತು ಅವು ಸಮಯ ಉಳಿಸುತ್ತವೆ ಎಂದು ತಿಳಿದುಕೊಳ್ಳುವುದು. | 4 ನಮಗೆ ವಾಹನಗಳ ಅಗತ್ಯವಿದೆ ಮತ್ತು ಅವು ಸಮಯ ಉಳಿಸುತ್ತವೆ ಎಂದು ತಿಳಿದುಕೊಳ್ಳುವುದು. | 4 ಇಂಧನಗಳ ಉಳಿತಾಯ ಮತ್ತು ಮಾಲಿನ್ಯ ನಿಯಂತ್ರಗಳ ಅಗತ್ಯತೆಯನ್ನು ತಿಳಿದುಕೊಳ್ಳುವುದು. |

Scanned with CamScanner

ಉಪವಿಷಯ 6.1

## ಸಾರಿಗೆಯ ಉಪಯೋಗಗಳು



### ಕಲಿಕಾ ಉದ್ದೇಶಗಳು

- ವಿವಿಧ ಉದ್ದೇಶಗಳಿಗಾಗಿ ಬಳಸುವ ಹಾಗೂ ಸಮಯ ಮತ್ತು ಶ್ರಮವನ್ನು ಉಳಿಸಲು ವಿವಿಧ ವಾಹನಗಳ ಉಪಯೋಗಗಳನ್ನು ಅರಿಯುವುದು.
- ವಾಹನದಲ್ಲಿ ಪ್ರಯಾಣಿಸುವ ಜನರ ಸಂಖ್ಯೆ, ಸರಕಿನ ಪ್ರಮಾಣ ಇವುಗಳಿಗೆ ಸಂಬಂಧಿಸಿದಂತೆ ವಾಹನದ ಗಾತ್ರದ ನಡುವಿನ ಸಂಬಂಧ ತಿಳಿಯುವುದು– ದೊಡ್ಡ ವಾಹನಗಳು ಸಣ್ಣ ವಾಹನಗಳಿಗಿಂತ ಹೆಚ್ಚು ಜನರನ್ನು ಮತ್ತು ಸಾಮಾನುಗಳನ್ನು ಕೊಂಡೊಯ್ಯುತ್ತವೆ ಮತ್ತು ನಾವು ಒಂದು ಜಾಗಕ್ಕೆ ಬೇಗ ಹೋಗಬೇಕಾಗಿದ್ದರೆ ಅಥವಾ ದೂರ ಹೆಚ್ಚಾಗಿದ್ದರೆ ವೇಗವಾಗಿ ಹೋಗುವ ವಾಹನಗಳನ್ನು ಬಳಸುತ್ತೇವೆ ಎಂದು ತಿಳಿದುಕೊಳ್ಳುವುದು.
- ವಾಹನದ ವಿವಿಧ ಭಾಗಗಳಾದ ಚಕ್ರಗಳು, ಸ್ಟೀರಿಂಗ್, ಎಂಜಿನ್, ಬ್ರೇಕ್, ದೀಪ, ಕನ್ನಡಿ, ಹಾರ್ನ್ ಮೊದಲಾದವುಗಳನ್ನು ಗುರುತಿಸುವುದು ಮತ್ತು ಅವುಗಳ ಬಳಕೆ ವಿವರಿಸುವುದು.
- ನಮಗೆ ವಾಹನಗಳ ಅಗತ್ಯವಿದೆ ಮತ್ತು ಅವು ಸಮಯ ಉಳಿಸುತ್ತವೆ ಎಂದು ತಿಳಿದುಕೊಳ್ಳುವುದು.

Scanned with CamScanner

ಮುಕ್ತ ಮತ್ತು ಮಾರ್ಗದರ್ಶನಯುಕ್ತ ಸಂಭಾಷಣೆಗಳು

## ಸಂಭಾಷಣೆ 1: ಸಾರಿಗೆಯ ಉಪಯೋಗಗಳು

### ಜನರು, ಸರಕು ಸಾಗಣೆ, ವ್ಯವಸಾಯ ಮತ್ತು ವಿವಿಧ ನಿರ್ಮಾಣಕ್ಕಾಗಿ ಬಳಸುವ ವಾಹನಗಳು




### ಕಲಿಕಾ ಫಲಿತಗಳು

- ಈ ಸಂಭಾಷಣೆಯ ಅಂತ್ಯದಲ್ಲಿ ಮಕ್ಕಳು ವಿವಿಧ ಉದ್ದೇಶಗಳಿಗಾಗಿ ಹಾಗು ಬಳಸುವ ಸಮಯ ಮತ್ತು ಶ್ರಮವನ್ನು ಉಳಿಸಲು ಬಳಸಲಾಗುವ ವಿವಿಧ ವಾಹನಗಳ ಉಪಯೋಗಗಳನ್ನು ತಿಳಿಯುತ್ತಾರೆ ಮತ್ತು ವಿವರಿಸಬಲ್ಲವರಾಗುತ್ತಾರೆ.
- ಒಂದು ವಿಶೇಷ ವಾಹನವಾಗಿ ಆಂಬುಲೆನ್ಸ್‌ನ ಉಪಯೋಗದ ಬಗ್ಗೆ ತಿಳಿಯುವುದು

### ಕಲಿಕಾ ಸಾಮಗ್ರಿಗಳು

**ಮೊದಲಾದ ವಿವಿಧ ವಾಹನಗಳ ಮಿಂಚು ಪಟ್ಟಿಗಳು – F6.1.1 (1–14):** 1. ಬಸ್ಸು 2. ಕಾರು 3. ಮೋಟಾರು ಬೈಕು 4. ಆಟೋ 5. ಸೈಕಲ್ 6. ಲಾರಿ 7. ಆಂಬುಲೆನ್ಸ್ 8. ಅಗೆಯುವ ವಾಹನ 9. ಟ್ರ್ಯಾಕ್ಟರ್ 10. ಅಗ್ನಿ–ಶಾಮಕ ವಾಹನ 11. ದೋಣಿ 12. ರೈಲು 13. ವಿಮಾನ 14. ಎತ್ತಿನ ಗಾಡಿ




### ಶಿಕ್ಷಕರ ಪೂರ್ವಸಿದ್ಧತೆ

ಚಿತ್ರಗಳು ಮಕ್ಕಳಿಗೆ ಸ್ಪಷ್ಟವಾಗಿ ಕಾಣುವಂತೆ ಎಲ್ಲಾ ಮಿಂಚುಪಟ್ಟಿಗಳನ್ನು ಸಿದ್ಧಪಡಿಸಿಟ್ಟುಕೊಳ್ಳುವುದು.

### ಸೂಚನೆಗಳು

#### ಹಂತ 1

1. ಮಕ್ಕಳಿಗೆ ತಾವು ನೋಡಿರುವ ಮತ್ತು ಪ್ರಯಾಣಿಸಿರುವ ವಾಹನಗಳ ಬಗ್ಗೆ ಹೇಳುವಂತೆ ಹೇಳಿ ಸಂಭಾಷಣೆಯನ್ನು ಪ್ರಾರಂಭಿಸುವುದು. ಮಕ್ಕಳು ತಮ್ಮ ಅನುಭವವನ್ನು ಹಂಚಿಕೊಳ್ಳಲು ಅವಕಾಶ ಕಲ್ಪಿಸುವುದು.
2. ಯಾವ ವಾಹನ ಅವರಿಗೆ ಇಷ್ಟ ಮತ್ತು ಏಕೆ ಎಂದು ಮಕ್ಕಳನ್ನು ಕೇಳುವುದು.

**ಗಮನಿಸಿ:** ಮಕ್ಕಳಿಗೆ ನೀವು ಮಾತನಾಡಲು ಮತ್ತು ತಿಳಿಯಪಡಿಸಲು ಅವಕಾಶ ಕೊಡುತ್ತಿದ್ದೀರೆಂದು ಖಚಿತಪಡಿಸಿಕೊಳ್ಳುವುದು. ಒಂದೇ ತರಗತಿಯ ಎಲ್ಲಾ ಮಕ್ಕಳೂ ಒಂದೇ ಸಲ ಭಾಗವಹಿಸಿ ತಮ್ಮ ಅನುಭವವನ್ನು ಹಂಚಿಕೊಳ್ಳಬೇಕೆಂದೇನಿಲ್ಲ. ಒಂದು ತರಗತಿಯಲ್ಲಿ 5–6 ಮಕ್ಕಳು ಮಾತನಾಡಿದರೆ ಸಾಕು. ಮುಂದಿನ ಅವಧಿಗಳಲ್ಲಿ ಈ ಉಪವಿಷಯದ ಬಗ್ಗೆ ಎಲ್ಲಾ ಮಕ್ಕಳು ತಮ್ಮ ಯೋಚನೆಗಳನ್ನು ಹಂಚಿಕೊಳ್ಳಲು ಅವಕಾಶವನ್ನು ಕೊಡುವುದು.

#### ಹಂತ 2

1. ಒಂದು ಬಾರಿಗೆ ಒಂದು ಮಿಂಚುಪಟ್ಟಿಯನ್ನು ಆರಿಸಿಕೊಂಡು ಅದನ್ನು ಮಕ್ಕಳಿಗೆ ತೋರಿಸುವುದು.
2. ಮಕ್ಕಳು ಅದನ್ನು ಹೆಸರಿಸಿ, ಅದರ ಉಪಯೋಗವನ್ನು ಹೇಳುವುದು.
3. ತೋರಿಸಿದ ವಾಹನ ಹೇಗೆ ಸದ್ದು ಮಾಡುತ್ತದೆ ಎಂದು ಮಕ್ಕಳನ್ನು ಕೇಳುವುದು ಮತ್ತು ಅದರ ಚಲನೆಯನ್ನು ಮಕ್ಕಳು ಮಾಡಿತೋರಿಸುವುದು.
4. ಬೆಂಕಿ ಬಿದ್ದಾಗ ಅಗ್ನಿಶಾಮಕ ವಾಹನದ ಹಾಗೂ ವೈದ್ಯಕೀಯ ತುರ್ತು ಪರಿಸ್ಥಿತಿಯಲ್ಲಿ ಆಂಬುಲೆನ್ಸ್ ಉಪಯೋಗದ ಮಹತ್ವವನ್ನು ಶಿಕ್ಷಕರು ಸಂಕ್ಷಿಪ್ತವಾಗಿ ತಿಳಿಸುವುದು.
5. ಎಲ್ಲಾ ಮಿಂಚುಪಟ್ಟಿಗಳನ್ನು ಕಾಣುವಂತೆ ನೆಲದ ಮೇಲೆ ಹರಡುವುದು. ನಿರ್ಮಾಣ, ಪ್ರಯಾಣಿಕರು, ಸಾಮಾನು ಮತ್ತು ತುರ್ತು ಪರಿಸ್ಥಿತಿಗಳು ಎಂದು ನಾಲ್ಕು ವೃತ್ತಗಳನ್ನು ನೆಲದ ಮೇಲೆ ಬರೆಯುವುದು. ಸಂಬಂಧಿಸಿದ ಒಂದೊಂದು ಮಿಂಚುಪಟ್ಟಿಯನ್ನು ಆಯಾ ವೃತ್ತಗಳಲ್ಲಿ ಇಡುವುದು. ಉಳಿದ ಮಿಂಚುಪಟ್ಟಿಗಳನ್ನು ಮಕ್ಕಳು ಅವುಗಳ ಉಪಯೋಗಕ್ಕನುಸಾರವಾಗಿ ವಿಂಗಡಿಸಿ ಇಡುವುದು. ಎಲ್ಲ ಮಕ್ಕಳು ಮಿಂಚುಪಟ್ಟಿಯಲ್ಲಿ ಇರುವ ವಾಹನದ ಉಪಯೋಗಕ್ಕೆ ತಕ್ಕಂತೆ ಅವುಗಳನ್ನು ವಿಂಗಡಿಸಲು ಅವಕಾಶ ನೀಡುವುದು.



Scanned with CamScanner

# ಉದ್ದೇಶದ ಆಧಾರದ ಮೇಲೆ ಸೂಕ್ತವಾದ ಪ್ರಯಾಣದ ವಿಧಾನವನ್ನು ಆರಿಸಿಕೊಳ್ಳುವುದು




## ಕಲಿಕಾ ಫಲಿತಗಳು

- ಈ ಸಂಭಾಷಣೆಯ ಅಂತ್ಯದಲ್ಲಿ ಮಕ್ಕಳು ಕೆಳಗಿನವುಗಳ ನಡುವಿನ ಸಂಬಂಧವನ್ನು ಅರ್ಥೈಸಿಕೊಳ್ಳಲು ಸಮರ್ಥರಾಗುತ್ತಾರೆ.
- ವಾಹನದ ಗಾತ್ರವು ಅದರಲ್ಲಿ ಪ್ರಯಾಣಿಸುವ ಜನರ ಸಂಖ್ಯೆ/ಸರಕಿನ ಪ್ರಮಾಣಕ್ಕೆ ಅನುಗುಣವಾಗಿರುತ್ತದೆ.
- ನಾವು ಒಂದು ಜಾಗಕ್ಕೆ ಬೇಗ ಹೋಗಬೇಕಾಗಿದ್ದರೆ ಅಥವಾ ಪ್ರಯಾಣಿಸುವ ದೂರ ಹೆಚ್ಚಾಗಿದ್ದರೆ ವೇಗವಾಗಿ ಹೋಗುವ ವಾಹನಗಳನ್ನು ಬಳಸುತ್ತೇವೆ ಎಂಬುದನ್ನು ತಿಳಿಯುವುದು.

## ಕಲಿಕಾ ಸಾಮಗ್ರಿಗಳು

**ಮೊದಲಾದ ವಿವಿಧ ವಾಹನಗಳ ಮಿಂಚು ಪಟ್ಟಿಗಳು – F6.1.1 (1–14):**
1. ಬಸ್ಸು 2. ಕಾರು 3. ಮೋಟಾರು ಬೈಕು 4. ಆಟೋ 5. ಸೈಕಲ್ 6. ಲಾರಿ 7. ಆಂಬುಲೆನ್ಸ್ 8. ಅಗೆಯುವ ವಾಹನ 9. ಟ್ರ್ಯಾಕ್ಟರ್ 10. ಅಗ್ನಿ–ಶಾಮಕ ವಾಹನ 11. ದೋಣಿ 12. ರೈಲು 13. ವಿಮಾನ 14. ಎತ್ತಿನ ಗಾಡಿ




## ಶಿಕ್ಷಕರ ಪೂರ್ವಸಿದ್ಧತೆ

ಮೇಲಿನ ಮಿಂಚುಪಟ್ಟಿಗಳನ್ನು ಸಿದ್ಧಪಡಿಸಿಟ್ಟುಕೊಳ್ಳುವುದು.

## ಸೂಚನೆಗಳು

### ಚಟುವಟಿಕೆ 1

1. ಮಕ್ಕಳನ್ನು ವೃತ್ತಾಕಾರವಾಗಿ ಕುಳಿತುಕೊಳ್ಳುವಂತೆ ಹೇಳುವುದು.
2. ಮಿಂಚುಪಟ್ಟಿಗಳನ್ನು ಮಧ್ಯದಲ್ಲಿ ಹರಡುವುದು.
3. ಒಂದು ಮಗುವಿಗೆ ಒಂದು ಮಿಂಚುಪಟ್ಟಿಯನ್ನು ಆರಿಸಿಕೊಳ್ಳುವಂತೆ ತಿಳಿಸಿ ಅದನ್ನು ಉಳಿದ ಮಕ್ಕಳಿಗೆ ತೋರಿಸಲು ಹೇಳುವುದು.
4. ಮಕ್ಕಳಿಗೆ ಕೆಳಗಿನ ಪ್ರಶ್ನೆಗಳನ್ನು ಕೇಳುವುದು. (ಮಗುವು ಆರಿಸಿಕೊಂಡಿರುವ ಮಿಂಚು ಪಟ್ಟಿಯನ್ನು ಆಧರಿಸಿದಂತೆ)
   - ಇದು ಯಾವ ವಾಹನ? ಇದರ ಉಪಯೋಗವನ್ನು ಹೇಳಬಲ್ಲಿರಾ?
   - ಇದರಲ್ಲಿ ಹೆಚ್ಚು / ಅಥವಾ ಕಡಿಮೆ ಜನ ಕುಳಿತುಕೊಳ್ಳಬಹುದೇ?
   - ಹೆಚ್ಚು ಜನರು ಕುಳಿತುಕೊಳ್ಳುವ ವಾಹನಗಳು ಯಾವುವು?
   - ಯಾವ ವಾಹನಗಳು ಒಬ್ಬರು ಅಥವಾ ಇಬ್ಬರನ್ನು ಕೊಂಡೊಯ್ಯುತ್ತವೆ?
   - ಇದು ವೇಗವಾಗಿ ಚಲಿಸುತ್ತದೆಯೇ ಅಥವಾ ನಿಧಾನವಾಗಿ ಚಲಿಸುತ್ತದೆಯೇ?
5. ಎಲ್ಲಾ ವಾಹನಗಳನ್ನು ತೋರಿಸಿದ ನಂತರ ಕೆಳಗಿನ ಪ್ರಶ್ನೆಗಳನ್ನು ಕೇಳುವುದು.
   - ನೀನು ಶಾಲೆಯಿಂದ ಮನೆಗೆ ಹಿಂದಿರುಗಿ ಹೋಗಬೇಕೆಂದರೆ ಯಾವ ವಾಹನವನ್ನು ಉಪಯೋಗಿಸಬಹುದು?
   - ನೀನು ಹತ್ತಿರದಲ್ಲಿರುವ ಊರಿಗೆ ಹೋಗಬೇಕೆಂದರೆ ಯಾವ ವಾಹನವನ್ನು ಉಪಯೋಗಿಸಬಹುದು?
   - ನೀನು ಬಹಳ ದೂರ ಇರುವ ನಿನ್ನ ಅಜ್ಜ ಅಜ್ಜಿಯ ಊರಿಗೆ ಹೋಗಬೇಕೆಂದರೆ ಯಾವ ವಾಹನವನ್ನು ಉಪಯೋಗಿಸಬಹುದು?

### ಚಟುವಟಿಕೆ 2

ಮೇಲಿನ ಮಿಂಚುಪಟ್ಟಿಗಳನ್ನು ತಿರುಗಿಸಿ ಇಡುವುದು. ಮಕ್ಕಳಿಗೆ ಸರದಿಯಂತೆ ಬಂದು ಒಂದು ಮಿಂಚುಪಟ್ಟಿಯನ್ನು ಆಯ್ಕೆ ಮಾಡಿಕೊಂಡು ವಾಹನದ ಹೆಸರು, ಉಪಯೋಗ, ಗಾತ್ರ ಮತ್ತು ವೇಗ ಮೊದಲಾದ ವಿವರಗಳನ್ನು ಕನಿಷ್ಠ ಎರಡು ವಾಕ್ಯಗಳಲ್ಲಿ ವಿವರಿಸಲು ಹೇಳುವುದು.



Scanned with CamScanner

## ಸಂಭಾಷಣೆ 3

## ವಾಹನಗಳ ಭಾಗಗಳು



### ಕಲಿಕಾ ಫಲಿತಗಳು

- ಈ ಸಂಭಾಷಣೆಯ ಅಂತ್ಯದಲ್ಲಿ ಮಕ್ಕಳು ವಾಹನದ ವಿವಿಧ ಭಾಗಗಳಾದ ಚಕ್ರಗಳು, ಸ್ಟೀರಿಂಗ್, ಎಂಜಿನ್, ಬ್ರೇಕ್, ದೀಪ, ಕನ್ನಡಿ, ಹಾರ್ನ್ ಮೊದಲಾದವುಗಳನ್ನು ಗುರುತಿಸುವುದು ಮತ್ತು ಅವುಗಳ ಉಪಯೋಗಗಳನ್ನು ವಿವರಿಸುವುದು.

### ಕಲಿಕಾ ಸಾಮಗ್ರಿಗಳು

ನೈಜ ವಾಹನಗಳು.



### ಶಿಕ್ಷಕರ ಪೂರ್ವಸಿದ್ಧತೆ

ಮಕ್ಕಳಿಗೆ ಸ್ಕೂಟರ್, ಟ್ರ್ಯಾಕ್ಟರ್, ಸೈಕಲ್, ಮೂರು ಚಕ್ರಗಳ, ನಾಲ್ಕು ಚಕ್ರಗಳ ವಾಹನಗಳು ಮೊದಲಾದ ಕೆಲವು ವಾಹನಗಳನ್ನು ತೋರಿಸಿ ಅವುಗಳ ನಡುವಿನ ವ್ಯತ್ಯಾಸವನ್ನು ಗಮನಿಸಲು ಹೇಳುವುದು.



### ಸೂಚನೆಗಳು

**ಮಕ್ಕಳನ್ನು ವಾಹನದ ಸುತ್ತಲೂ ನಿಲ್ಲಲು ಹೇಳಿ, ಕೆಳಗಿನ ಪ್ರಶ್ನೆಗಳನ್ನು ಕೇಳುವುದು.**

1. ಇದು ಯಾವ ವಾಹನ?
2. ಇದು ಎಷ್ಟು ಜನರನ್ನು ಕೊಂಡೊಯ್ಯಬಲ್ಲದು?
3. ಸರಕು ಸಾಗಣೆ, ಪ್ರಯಾಣ ಅಥವಾ ವ್ಯವಸಾಯ ಇವುಗಳಲ್ಲಿ ಯಾವುದಕ್ಕೆ ಈ ವಾಹನವನ್ನು ಬಳಸುತ್ತಾರೆ?
4. ಅವರಿಗೆ ವಾಹನಗಳ ಭಾಗಗಳನ್ನು ಗುರುತಿಸಲು ಹೇಳುವುದು. ಅದರ ಕಾರ್ಯವೇನು? ಎಂದು ಕೇಳುವುದು.
5. ಮಕ್ಕಳು ಹೇಳದೇ ಬಿಟ್ಟ ಭಾಗಗಳ ಹೆಸರುಗಳನ್ನು ಅವರು ಹೇಳಿ ಮುಗಿಸಿದ ಮೇಲೆ ಶಿಕ್ಷಕರು ಹೇಳುವುದು. ಅವರು ವಾಹನದ ಭಾಗಗಳನ್ನು ಸರಿಯಾಗಿ ತೋರಿಸಿ ಹೆಸರು ನೆನಪಿಸಿಕೊಳ್ಳಲು ಸಾಧ್ಯವಾಗದಿದ್ದರೆ ಅವುಗಳ ಹೆಸರುಗಳನ್ನು ಹೇಳುವುದು. ಚಕ್ರಗಳು, ಸ್ಟೀರಿಂಗ್, ಎಂಜಿನ್, ಬ್ರೇಕ್, ದೀಪ,ಕನ್ನಡಿ, ಹಾರ್ನ್ ಇವುಗಳ ಮೇಲೆ ಒತ್ತು ಕೊಡುವುದು.
6. ಪ್ರತಿಯೊಂದು ಭಾಗದ ಕಾರ್ಯದ ಬಗ್ಗೆ ಮಾತನಾಡುವುದು –ಉದಾಹರಣೆಗೆ ಸ್ಟೀರಿಂಗ್, ವಾಹನದಲ್ಲಿ ಸ್ಟೀರಿಂಗ್‌ನ ಪಾತ್ರ, ಹಾಗೆಯೇ ಚಕ್ರಗಳು, ಕನ್ನಡಿ, ಆಸನಗಳು, ದೀಪಗಳು, ಹಾರ್ನ್, ಸೂಚಕಗಳು (ಇಂಡಿಕೇಟರ್), ಸ್ಟ್ಯಾಂಡ್, ಎಂಜಿನ್, ವೈಪರ್, ಗ್ಲಾಸು ಮೊದಲಾದ ಇತರ ಭಾಗಗಳ ಬಗ್ಗೆ ಮಾತನಾಡುವುದು.
7. ಮೋಟರ್ ಬೈಕ್ ಮತ್ತು ಬಸ್ಸು ಅಥವಾ ಆಟೋ ಮತ್ತು ಎತ್ತಿನ ಗಾಡಿ ಇವುಗಳ ಭಾಗಗಳ ನಡುವೆ ಇರುವ ಸಾಮ್ಯತೆ ಮತ್ತು ವ್ಯತ್ಯಾಸಗಳ ಬಗ್ಗೆ ಚರ್ಚಿಸುವುದು.
8. ಬಸ್ಸಿಗೆ ಏಕೆ ಮಧ್ಯದ ಮತ್ತು ಒಂದು ಕಡೆಯ ಸ್ಟ್ಯಾಂಡ್ ಇಲ್ಲ, ದ್ವಿಚಕ್ರ ವಾಹನ ಸವಾರರು ಏಕೆ ಹೆಲ್ಮೆಟ್ ಧರಿಸುತ್ತಾರೆ? ನಾಲ್ಕು ಚಕ್ರಗಳ ವಾಹನ ಚಾಲಕರು ಏಕೆ ಧರಿಸುವುದಿಲ್ಲ? ಬಸ್ಸುಗಳಿಗೆ ಮುಂದೆ ಗ್ಲಾಸು ಇರುತ್ತದೆ, ದ್ವಿಚಕ್ರ ವಾಹನಗಳಿಗೆ ಏಕೆ ಇರುವುದಿಲ್ಲ? ಎಂಬ ಪ್ರಶ್ನೆಗಳ ಮೂಲಕ ಚರ್ಚೆಯನ್ನು ಮುಂದುವರೆಸುವುದು.

**ಗಮನಿಸಿ:** ಈ ಪ್ರಶ್ನೆಗಳು ಮಕ್ಕಳಿಗೆ ವಾಹನಗಳ ವಿವಿಧ ಭಾಗಗಳು, ಸುರಕ್ಷತೆಯ ವಿಷಯಗಳ ಬಗ್ಗೆ ಯೋಚಿಸಲು ಸಹಾಯ ಮಾಡುತ್ತವೆ. ಮಕ್ಕಳಿಗೆ ಸರಿಯಾದ ಎಲ್ಲಾ ವಿಚಾರಗಳು ಬಹುಶಃ ಗೊತ್ತಿರಬಹುದು ಅಥವಾ ಗೊತ್ತಿಲ್ಲದೇ ಇರಬಹುದು. ಅವರು ಎಲ್ಲಾ ಉತ್ತರಗಳನ್ನು ಕಂಠಪಾಠ ಮಾಡಬೇಕೆಂದೇನಿಲ್ಲ. ಅವರನ್ನು ಯೋಚಿಸಲು ಹಾಗೂ ವಾಹನಗಳ ಭಾಗಗಳು, ಸುರಕ್ಷತೆ ಮತ್ತು ಉಪಯೋಗಗಳ ಬಗ್ಗೆ ಸಾಮಾನ್ಯ ತಿಳುವಳಿಕೆ ಹೊಂದಲು ಪ್ರೋತ್ಸಾಹಿಸಬೇಕು.

ಮಕ್ಕಳು ಪ್ರಶ್ನೆಗಳನ್ನು ಕೇಳಲು ಪ್ರೋತ್ಸಾಹಿಸುವುದು. ಲಭ್ಯವಿದ್ದಲ್ಲಿ ವಾಹನದ ಮಾಲಿಕರಿಗೆ ಮಕ್ಕಳ ಪ್ರಶ್ನೆಗಳಿಗೆ ತಕ್ಕ ಉತ್ತರಗಳನ್ನು ಹೇಳಲು ಮತ್ತು ಅವರ ಅನುಮಾನಗಳನ್ನು ಪರಿಹರಿಸಲು ವಿನಂತಿಸಿಕೊಳ್ಳುವುದು. ಸಹಾಯ ಮಾಡಿದ್ದಕ್ಕೆ ಮತ್ತು ಅನುಮಾನ ಪರಿಹರಿಸಿದ್ದಕ್ಕೆ ಅವರಿಗೆ ಧನ್ಯವಾದಗಳನ್ನು ಹೇಳುವುದು.



Scanned with CamScanner

ಯೋಜನಾ ಕಾರ್ಯ 1

## ಕ್ಷೇತ್ರ ಭೇಟಿ

### ಕಲಿಕಾ ಫಲಿತಗಳು (ಯೋಜನಾ ಕಾರ್ಯ 1,2,3ಕ್ಕೂ ಇದೇ ಕಲಿಕಾ ಫಲಿತಗಳು ಅನ್ವಯವಾಗುತ್ತವೆ)

- ವಿವಿಧ ಭೇಟಿಗಳು, ಚರ್ಚೆಗಳು ಮತ್ತು ತಾವೇ ಮಾಡಿ ತಿಳಿದುಕೊಳ್ಳುವ ಚಟುವಟಿಕೆಗಳ ಮೂಲಕ ವಾಹನಗಳು ಮತ್ತು ವಾಹನಗಳ ಭಾಗಗಳ ಪರಿಕಲ್ಪನೆಗಳನ್ನು ದೃಢೀಕರಿಸಿಕೊಳ್ಳುವುದು.

### ಶಿಕ್ಷಕರ ಪೂರ್ವಸಿದ್ಧತೆ

ಶಾಲೆಗೆ ಹತ್ತಿರವಿರುವ ಯಾವುದೇ ವಾಹನದ ಗ್ಯಾರೇಜ್/ಸೈಕಲ್ ಷಾಪ್, ವಾಹನ ಸೇವಾ ಕೇಂದ್ರವನ್ನು ಗುರುತಿಸಿ, ಸಂಬಂಧಪಟ್ಟವರಿಂದ ಭೇಟಿಗೆ ಅನುಮತಿಯನ್ನು ಪಡೆದುಕೊಳ್ಳುವುದು.

### ಸೂಚನೆಗಳು

1. ಹತ್ತಿರದ ಗ್ಯಾರೇಜಿಗೆ ಮಕ್ಕಳನ್ನು ಕರೆದೊಯ್ಯುವುದು.
2. ಅವರಿಗೆ ವಾಹನಗಳ ವಿವಿಧ ಭಾಗಗಳನ್ನು ಗಮನಿಸಲು ಹೇಳುವುದು.
3. ಕಾರು, ಆಟೋ ಮೊದಲಾದ ವಿವಿಧ ವಾಹನಗಳ ಭಾಗಗಳು ಹೇಗೆ ಒಂದರಿಂದ ಇನ್ನೊಂದು ಭಿನ್ನವಾಗಿರುತ್ತವೆ? ಎಂಬುದನ್ನು ಅವರಿಗೆ ಗಮನಿಸಲು ಬಿಡುವುದು.
4. ಅಲ್ಲಿನ ಸಿಬ್ಬಂದಿಯೊಡನೆ ಚರ್ಚಿಸಲು ಬಿಡುವುದು. ಅವರು ಏನು ಮಾಡುತ್ತಾರೆ, ರಿಪೇರಿ ಹೇಗೆ ಮಾಡುತ್ತಾರೆ ಮತ್ತು ರಿಪೇರಿ ಮಾಡಲು ಯಾವ ಉಪಕರಣಗಳನ್ನು ಬಳಸುತ್ತಾರೆ ಮುಂತಾದ ಪ್ರಶ್ನೆಗಳನ್ನು ಕೇಳಲು ಅವಕಾಶ ಕೊಡುವುದು.
5. ತಮ್ಮ ಜ್ಞಾನವನ್ನು ಹಂಚಿಕೊಳ್ಳುವುದರ ಜೊತೆಗೆ ಅವಕಾಶ ಕಲ್ಪಿಸಿಕೊಟ್ಟಿದ್ದಕ್ಕೆ ಸಿಬ್ಬಂದಿಗೆ ಧನ್ಯವಾದವನ್ನು ಹೇಳುವುದು.
6. ಶಾಲೆಗೆ ಹಿಂದಿರುಗಿ ತಮ್ಮ ಅನುಭವಗಳನ್ನು ಹಂಚಿಕೊಳ್ಳಲು ಮಕ್ಕಳಿಗೆ ಅವಕಾಶ ಮಾಡಿಕೊಡುವುದು.





Scanned with CamScanner

ಯೋಜನಾ ಕಾರ್ಯ 2

# ವಾಹನದ ಚಿತ್ರ ಕೊಲಾಜ್ ಮಾಡುವುದು

## ಕಲಿಕಾ ಸಾಮಗ್ರಿಗಳು

ಹಳೆಯ ದಿನಪತ್ರಿಕೆಗಳು, ನಿಯತಕಾಲಿಕೆಗಳು, ಹಳೆಯ ಪಠ್ಯ ಪುಸ್ತಕಗಳು, ಚಿತ್ರ ಬರೆಯುವ ಹಾಳೆಗಳು ಮತ್ತು ಅಂಟು.

## ಶಿಕ್ಷಕರ ಪೂರ್ವಸಿದ್ಧತೆ

ಮಕ್ಕಳಿಗೆ ವಾಹನಗಳ ಚಿತ್ರಗಳನ್ನು ಮನೆಯಿಂದ ತರಲು ಹೇಳುವುದು. ಅಗತ್ಯವಿರುವ ಸಾಮಗ್ರಿಗಳನ್ನು ಸಿದ್ಧ ಮಾಡಿಟ್ಟುಕೊಳ್ಳುವುದು. ಬಹುಶಃ ಚಿತ್ರಗಳನ್ನು ಕತ್ತರಿಸಲು ಮಕ್ಕಳಿಗೆ ಕತ್ತರಿಯನ್ನು ಉಪಯೋಗಿಸಲು ಸಾಧ್ಯವಾಗದಿರಬಹುದು. ಮಕ್ಕಳು ಗುರುತಿಸಿದ ಚಿತ್ರಗಳನ್ನು ಕತ್ತರಿಸಲು ನೆರವು ನೀಡುವುದು ಅಥವಾ ಕೈಯಿಂದ ಚಿತ್ರಗಳನ್ನು ಹರಿಯುವಂತೆ ಮಕ್ಕಳಿಗೆ ಹೇಳುವುದು.

## ಸೂಚನೆಗಳು

1. ಮಕ್ಕಳನ್ನು ಸಣ್ಣ ಸಣ್ಣ ಗುಂಪುಗಳನ್ನಾಗಿ ವಿಂಗಡಿಸುವುದು.
2. ಮಕ್ಕಳು ಮನೆಯಿಂದ ತಂದ ವಾಹನಗಳ ಚಿತ್ರಗಳನ್ನು ಅವರಲ್ಲಿಯೇ ಇಟ್ಟುಕೊಳ್ಳಲು ತಿಳಿಸುವುದು.
3. ಹಳೆಯ ದಿನಪತ್ರಿಕೆಗಳು ಮತ್ತು ನಿಯತಕಾಲಿಕೆಗಳು, ಚಿತ್ರ ಬರೆಯುವ ಹಾಳೆಗಳು ಮತ್ತು ಅಂಟು–ಇವುಗಳನ್ನು ಪ್ರತಿಯೊಂದು ಗುಂಪಿಗೂ ಕೊಡುವುದು.
4. ವಿವಿಧ ವಾಹನಗಳ ಚಿತ್ರಗಳನ್ನು ಗುರುತಿಸಲು ಅವರಿಗೆ ಹೇಳುವುದು.
5. ಚಿತ್ರಗಳನ್ನು ಕತ್ತರಿಸಲು ಅಥವಾ ಹರಿಯಲು ಮಕ್ಕಳಿಗೆ ನೆರವು ನೀಡುವುದು.
6. ಚಿತ್ರ ಬರೆಯುವ ಹಾಳೆಯಲ್ಲಿ ಗೆರೆ ಎಳೆದು ನಾಲ್ಕು ಭಾಗಗಳನ್ನಾಗಿ ವಿಂಗಡಿಸುವುದು. ಪ್ರತಿಯೊಂದು ಭಾಗದಲ್ಲಿ ಪ್ರಯಾಣ, ಸಾಮಾನು, ತುರ್ತು ಪರಿಸ್ಥಿತಿ ಮತ್ತು ನಿರ್ಮಾಣ ಎಂದು ಬರೆದು ಅದಕ್ಕೆ ಸಂಬಂಧಿಸಿದ ಒಂದೊಂದು ಚಿತ್ರವನ್ನು ಅದರಲ್ಲಿ ಅಂಟಿಸುವುದು. ಗುಂಪಿನಲ್ಲಿರುವ ಮಕ್ಕಳು ತಾವು ಮನೆಯಿಂದ ತಂದ ಚಿತ್ರಗಳನ್ನು ಆಯಾ ವಿಭಾಗದ ಕೆಳಗೆ ಅಂಟಿಸುವುದು.
7. ತಾವು ಅಂಟಿಸಿದ ವಾಹನಗಳ ಬಗ್ಗೆ ಮಕ್ಕಳಿಗೆ ಮಾತನಾಡಲು ಹೇಳುವುದು.






Scanned with CamScanner

ಯೋಜನಾ ಕಾರ್ಯ 3

## ಸಾರಿಗೆಯ ಚಿತ್ರಬಂಧವನ್ನು (Puzzle) ಪೂರ್ಣಗೊಳಿಸುವುದು

### ಕಲಿಕಾ ಸಾಮಗ್ರಿಗಳು

ತೆಳ್ಳನೆಯ ರಟ್ಟು, ಅಂಟು, ಕತ್ತರಿ, ಸ್ಕೆಚ್ ಪೆನ್ನುಗಳು, ಬಣ್ಣಗಳು / ಕ್ರೆಯಾನ್‌ಗಳು– ಜೆರಾಕ್ಸ್ ಪ್ರತಿಗಳನ್ನು ತೆಗೆಯಲು ಬೇಕಾದ ವಿವಿಧ ವಾಹನಗಳ ಮಾದರಿ ರೇಖಾ ಚಿತ್ರಗಳು– WS6.1.2.

### ಶಿಕ್ಷಕರ ಪೂರ್ವಸಿದ್ಧತೆ

ಹಂತ 1: ಮಕ್ಕಳಿಗೆ ವಾಹನಗಳ ರೇಖಾಚಿತ್ರಗಳನ್ನು ಕೊಟ್ಟು ಅವುಗಳಿಗೆ ಸ್ಕೆಚ್‌ಪೆನ್ನು ಅಥವಾ ಕ್ರೆಯಾನ್‌ಗಳಿಂದ ಬಣ್ಣ ಹಚ್ಚಲು ಹೇಳುವುದು.

ಹಂತ 2: ನಂತರ ಆ ಚಿತ್ರದ ಆಕಾರವನ್ನು ಕತ್ತರಿಸಿ ಅದನ್ನು ತೆಳ್ಳನೆಯ ರಟ್ಟಿನ ಮೇಲೆ ಅಂಟಿಸಲು ಹೇಳುವುದು.

ಹಂತ 3: ಈ ವಯಸ್ಸಿನವರಿಗಾಗಿ ರಟ್ಟಿನ ಮೇಲೆ ಅಂಟಿಸಿದ ಚಿತ್ರವನ್ನು 4–6 ತುಂಡುಗಳಾಗಿ ಶಿಕ್ಷಕರು ಕತ್ತರಿಸುವುದು. ಎಲ್ಲಾ ಮಕ್ಕಳಿಗೂ ಸಾಕಾಗುವಷ್ಟು ಚಿತ್ರಬಂಧಗಳನ್ನು ತಯಾರಿಸಿಕೊಳ್ಳುವುದು. ತರಗತಿಯಲ್ಲಿ 30 ಮಕ್ಕಳಿದ್ದರೆ ಕನಿಷ್ಠ ಪಕ್ಷ 15–20 ಚಿತ್ರಬಂಧಗಳು ಬೇಕಾಗಬಹುದು. ಇದನ್ನು ಮೊದಲೇ ಮಾಡಿಟ್ಟುಕೊಳ್ಳಬೇಕಾಗುತ್ತದೆ. ಇವುಗಳನ್ನು ಮರುಬಳಕೆ ಮಾಡಬಹುದು.

### ಸೂಚನೆಗಳು

1. ಹಂತ 1 ಮತ್ತು 2ನ್ನು ತರಗತಿಯಲ್ಲಿ ಚಟುವಟಿಕೆಗಳಾಗಿ ಮಕ್ಕಳೊಂದಿಗೆ ಮಾಡಬಹುದು.
2. ಹಂತ 3 ರಲ್ಲಿರುವಂತೆ ವಾಹನಗಳ ಚಿತ್ರಗಳನ್ನು ಶಿಕ್ಷಕರು ಮೊದಲೇ ಕತ್ತರಿಸಿ ಇಟ್ಟುಕೊಳ್ಳುವುದು.
3. ಹಂತ 4 ಮಕ್ಕಳನ್ನು 3–4ರಂತೆ ಸಣ್ಣ ಗುಂಪುಗಳಾಗಿ ವಿಂಗಡಿಸಿ 3–4 ಚಿತ್ರಬಂಧಗಳನ್ನು ಪ್ರತಿಯೊಂದು ಗುಂಪಿಗೂ ಕೊಡುವುದು. ಮಕ್ಕಳ ಗುಂಪುಗಳು ಚಿತ್ರಬಂಧದ ತುಂಡುಗಳನ್ನು ಜೋಡಿಸಿ ವಾಹನದ ಚಿತ್ರಗಳನ್ನು ಮಾಡುವುದು. ಅಗತ್ಯವಿದ್ದಲ್ಲಿ ಮಧ್ಯಪ್ರವೇಶಿಸುವುದು. ಸಹಪಾಠಿಗಳ ಸಹಾಯವನ್ನು ತೆಗೆದುಕೊಳ್ಳಲು ಅವಕಾಶ ಕಲ್ಪಿಸುವುದು. ಮಕ್ಕಳು ತಮ್ಮ ಚಿತ್ರಗಳನ್ನು ಅದಲು ಬದಲುಮಾಡಿಕೊಂಡು ಹೆಚ್ಚು ಚಿತ್ರಬಂಧಗಳನ್ನು ಮಾಡುವುದು. ವಾಹನಗಳ ಕುರಿತಾದ ವಿಷಯದ ಕಲಿಕೆಯು ನಡೆಯುವ ತರಗತಿಯಲ್ಲಿ ವಾರದುದ್ದಕ್ಕೂ ಮಕ್ಕಳು ಈ ಚಟುವಟಿಕೆಯನ್ನು ಮಾಡಬಹುದು.

ಮಕ್ಕಳು ಮಾಡಿದ ಈ ಚಿತ್ರಬಂಧ ಬಹುಶಃ ಒಂದು ತಿಂಗಳವರೆಗೆ ಆಡಲು ಬಾಳಿಕೆ ಬರಬಹುದು. ಮಕ್ಕಳು ಮಾಡಿದ ಇಂತಹ ವಸ್ತುಗಳು ಕಡಿಮೆ ದಿನ ಬಾಳಿಕೆ ಬಂದರೂ ಬಹಳ ಉಪಯೋಗಿಯಾಗಿರುತ್ತವೆ.





Scanned with CamScanner

## ಶಿಶುಗೀತೆಗಳ ಸೂಚನೆಗಳು

### ಕಲಿಕಾ ಫಲಿತಗಳು

ಮಕ್ಕಳು "ಬಸ್ ಬಂತು ಬಸ್", "ಚುಕುಬುಕು ರೈಲು", "Wheels of the Bus", "Row, row, row your boat", "Aeroplane Aeroplane" ಶಿಶುಗೀತೆಗಳನ್ನು ಸರಿಯಾದ ಪದಗಳು, ಉಚ್ಚಾರ ಮತ್ತು ಅಭಿನಯಗಳೊಂದಿಗೆ ಹಾಡುವ ಸಾಮರ್ಥ್ಯವನ್ನು ಹೊಂದುವುದು.

### ಕಲಿಕಾ ಸಾಮಗ್ರಿಗಳು

ಸಚಿತ್ರ ವಿವರಣೆ ಇರುವ ಶಿಶುಗೀತೆಗಳ ಮುದ್ರಿತ ಪ್ರತಿ.

### ಶಿಕ್ಷಕರ ಪೂರ್ವಸಿದ್ಧತೆ

ಶಿಶುಗೀತೆ ಮತ್ತು ಅದಕ್ಕನುಗುಣವಾದ ಅಭಿನಯವನ್ನು ಪರಿಚಯಿಸಿಕೊಳ್ಳುವುದು. ಚಾರ್ಟ್ ಹಾಳೆಯ ಮೇಲೆ ದೊಡ್ಡ ಅಕ್ಷರಗಳಲ್ಲಿ ಚಿತ್ರ ಸಹಿತವಾದ ಶಿಶುಗೀತೆಯನ್ನು ಒಂದು ಮೂಲೆಯಲ್ಲಿ ಬರೆಯುವುದು ಮತ್ತು ಮಕ್ಕಳಿಗೆ ಕಣ್ಣಿನ ಎತ್ತರಕ್ಕೆ ಸರಿಹೊಂದುವಂತೆ ಪ್ರದರ್ಶಿಸುವುದು. ಮಕ್ಕಳು ಶಿಶುಗೀತೆಯನ್ನು ನೋಡಲಿ.

**ಗಮನಿಸಿ:** ಎಲ್ಲಾ ಶಿಶುಗೀತೆಗಳನ್ನು 3–4 ಬಾರಿ ಹೇಳಿಸಬೇಕು ಹಾಗೂ 'ವಾಹನ ಮತ್ತು ಸಾರಿಗೆ' ಮುಖ್ಯ ವಿಷಯದ ತರಗತಿಯುದ್ದಕ್ಕೂ ಇದನ್ನು ಪುನರಾವರ್ತಿಸಬೇಕು.

### ಸೂಚನೆಗಳು

1. ಶಿಶುಗೀತೆಯನ್ನು ಪರಿಚಯಿಸುವುದು ಮತ್ತು ಅದು ಯಾವುದನ್ನು ಕುರಿತಾದದ್ದು ಎಂದು ಮಕ್ಕಳಿಗೆ ವಿವರಿಸುವುದು.
2. ಶಿಶುಗೀತೆಯನ್ನು ಲಯಬದ್ಧವಾಗಿ, ಭಾವಾಭಿನಯದೊಂದಿಗೆ ಹಾಗೂ ಧ್ವನಿಯ ಏರಿಳಿತದೊಂದಿಗೆ ಪೂರ್ತಿಯಾಗಿ ಮಕ್ಕಳು ಕೇಳಿಸಿಕೊಳ್ಳುವಂತೆ ಹಾಡುವುದು.
3. ಗೀತೆಯ ಪ್ರತಿಯೊಂದು ಸಾಲನ್ನೂ ಶಿಕ್ಷಕರು ಹಾಡಿದ ನಂತರ ಹಾಡುವಂತೆ ಮಕ್ಕಳಿಗೆ ಹೇಳುವುದು ಮತ್ತು ಚಿತ್ರವನ್ನು ತೋರಿಸಿ ಅದರ ಅರ್ಥವನ್ನು ವಿವರಿಸುವುದು.
4. ಪದಗಳಿಗೆ ಹೊಂದುವ ಅಭಿನಯವನ್ನು ಮಾಡಿ ತೋರಿಸಿ, ಅದನ್ನು ಮಕ್ಕಳು ಅನುಸರಿಸಲು ಹೇಳುವುದು.
5. ಈಗ ಶಿಕ್ಷಕರ ಜೊತೆಗೆ ಅಭಿನಯ ಮಾಡುತ್ತಾ ಹಾಡಲು ಮಕ್ಕಳಿಗೆ ಹೇಳುವುದು.
6. ಮಕ್ಕಳು ಗುಂಪಿನಲ್ಲಿ ಅಥವಾ ಒಬ್ಬೊಬ್ಬರಾಗಿ ಹಾಡಲು ಪ್ರೋತ್ಸಾಹಿಸುವುದು.



Scanned with CamScanner


ಶಿಶುಗೀತೆ 1

ಬಸ್ ಬಂತು ಬಸ್

# ಬಸ್ ಬಂತು ಬಸ್

ಬಸ್ ಬಂತು ಬಸ್ ಗೌರ್ನ್‌ಮೆಂಟ್ ಬಸ್
ಕೆಂಪು ಬಿಳಿ ಬಣ್ಣ ನೋಡು ಬಾರಣ್ಣ
ಆರು ಚಕ್ರ ಇರುವುದು ಎರಡು ಲೈಟ್ ಉರಿವುದು

ನಾನು ಡ್ರೈವರ್ ಆಗುವೆ ಬಸ್ಸನ್ನು ಬಿಡುವೆ
ನಾನು ಕಂಡಕ್ಟರ್ ಆಗುವೆ ಟಿಕೆಟನ್ನು ಕೊಡುವೆ
ರೈಟ್ ರೈಟ್ ಅನ್ನುವೆ ಸೀಟಿಯನ್ನು ಊದುವೆ






Scanned with CamScanner

ಶಿಶುಗೀತೆ 2

## ಚುಕುಬುಕು ರೈಲು

# ಚುಕುಬುಕು ರೈಲು

ಚುಕ್ಕು ಬುಕ್ಕು ಚುಕ್ಕು ಬುಕ್ಕು ರೈಲು ಬಂತು
ದಾರಿ ಬಿಡಿ ದಾರಿ ಬಿಡಿ ರೈಲು ಬಂತು (2)
ಮೈಸೂರಿಂದ ಹೊರಟಿದೆ ರೈಲು ಗಾಡಿ
ರಭಸದಿಂದ ಓಡುತಿದೆ ರೈಲು ಗಾಡಿ (ಚುಕ್ಕು ಬುಕ್ಕು)
ಅಕ್ಕ ಪಕ್ಕ ಕಿಟಕಿಯಲ್ಲಿ ಬಗ್ಗಿ ನೋಡಿ
ಕಾಣುತಿರುವ ಕಬ್ಬು ತಿಂದು ಓಡಿ ಓಡಿ (ಚುಕ್ಕು ಬುಕ್ಕು)






Scanned with CamScanner

ಶಿಶುಗೀತೆ 3

## Wheels on the Bus

# Wheels on the bus

The wheels on the bus go round and round,
Round and round, round and round,
The wheels on the bus go round and round
All through the town.

The wipers on the bus go swish, swish, swish.
swish, swish, swish. swish, swish, swish.
The wipers on the bus go swish, swish, swish.
All through the town.


The doors on the bus go open and shut.
open and shut, open and shut
The doors on the bus go open and shut.
All through the town.

The horn on the bus goes beep, beep, beep.
beep, beep, beep. beep, beep, beep.
The horn on the bus goes beep, beep, beep.
All through the town.

The driver on the bus says, "Move on back."
"Move on back." "Move on back."
The driver on the bus says, "Move on back."
All through the town.

The people on the bus go up and down.
up and down, up and down.
The people on the bus go up and down.
All through the town.

**ಶಿಕ್ಷಕರಿಗೆ ಸೂಚನೆಗಳು:** ಉಳಿದ ವಾಹನಗಳಿಗೆ ಇದೇ ರೀತಿಯ ಶಿಶುಗೀತೆಗಳನ್ನು ಮಾಡಿಕೊಳ್ಳಬಹುದು.
ಉದಾಹರಣೆಗೆ: Train goes chuu chu, cycle goes trin trin trin







Scanned with CamScanner

ಶಿಶುಗೀತೆ 4

## Aeroplane, Aeroplane






Scanned with CamScanner

ಚಟುವಟಿಕೆ 5

## Row, row, row your boat



### Row, row, row your boat


Row, row, row your boat
Gently down the pond,
Merrily, merrily, merrily merrily
I am going around



Drive drive drive your car
Up and down the street,
Merrily, merrily, merrily merrily
Do you drive carefully?



Fly fly fly your plane
Up above the sky
Merrily, merrily, merrily merrily
I am flying so high



Chug chug chug your train,
Up and down the track
Merrily, merrily, merrily merrily
Going and coming back.



Scanned with CamScanner

## ಕಲಿಕಾ ಫಲಿತಗಳು

ಮಕ್ಕಳು "ಭೀಮ ಲಾರಿ" ಕಥೆಯನ್ನು ಅರ್ಥಮಾಡಿಕೊಳ್ಳುತ್ತಾರೆ. "ಏನು? ಏಕೆ? ಹೇಗೆ? ಮತ್ತು ಯಾವಾಗ?" ಎಂಬ ಪ್ರಶ್ನೆಗಳನ್ನು ಅರ್ಥಮಾಡಿಕೊಂಡು ಉತ್ತರಿಸುತ್ತಾರೆ.

## ಶಿಕ್ಷಕರ ಪೂರ್ವಸಿದ್ಧತೆ


ಕಥೆಯನ್ನು ಮೊದಲೇ ಓದಿ ಅದನ್ನು ಸರಿಯಾಗಿ ಅರ್ಥೈಸಿಕೊಳ್ಳುವುದು ಹಾಗೂ ಕಥೆಯನ್ನು ಧ್ವನಿಯ ಏರಿಳಿತಗಳೊಂದಿಗೆ ನಿರೂಪಿಸುವುದನ್ನು ಅಭ್ಯಾಸ ಮಾಡಿಕೊಳ್ಳುವುದು.

## ಕಲಿಕಾ ಸಾಮಗ್ರಿಗಳು

ಕಥೆ ಪುಸ್ತಕ.

## ಕಥೆಯ ಸಂಕ್ಷಿಪ್ತ ರೂಪ

ಒಂದು ದಿನ ಭೀಮ ಎಂಬ ಸರಕಿನ ಲಾರಿ, ಚಾಕಲೇಟ್‌ನ ಮೂಟೆಗಳನ್ನು ಹೊತ್ತು ರಸ್ತೆಯಲ್ಲಿ ಹೋಗುತ್ತಿತ್ತು. ಅದು ಕಣ್ತಪ್ಪಿ ರಸ್ತೆಯಲ್ಲಿರುವ ದೊಡ್ಡ ಹೊಂಡದಲ್ಲಿ ಸಿಕ್ಕಿಕೊಂಡಿತು. ತನ್ನೆಲ್ಲಾ ಶಕ್ತಿಯನ್ನು ಉಪಯೋಗಿಸಿ ಮೇಲೆ ಬರಲು ಬಹಳ ಪ್ರಯತ್ನಿಸಿದರೂ ಅದರಿಂದ ಒಂದು ಇಂಚು ಕದಲಲೂ ಸಾಧ್ಯವಾಗಲಿಲ್ಲ. ಅದು ಸಹಾಯವನ್ನು ಯಾಚಿಸಲು ಪ್ರಾರಂಭಿಸಿತು. ಅಲ್ಲಿ ಹೋಗುತ್ತಿದ್ದ ರುಕ್ಕು ಎಂಬ ಮೋಟಾರು ಬೈಕು ಸಹಾಯ ಮಾಡಲೆಂದು ನಿಂತಿತು. ಅದು ಭೀಮನಿಗೆ ಒಂದು ಹಗ್ಗವನ್ನು ಕಟ್ಟಿ ಬಹಳ ಕಷ್ಟ ಪಟ್ಟು ಹೊರಗೆ ಎಳೆಯಲು ಪ್ರಯತ್ನಿಸಿತು. ಆದರೆ ಭೀಮ ಒಂದಿಂಚೂ ಅಲ್ಲಾಡಲಿಲ್ಲ. ಇಬ್ಬರೂ ಸನ್ನಿ ಎಂಬ ಆಟೋವನ್ನು ಸಹಾಯಕ್ಕಾಗಿ ಕರೆದರು. ರುಕ್ಕು ಮತ್ತು ಸನ್ನಿ ಇಬ್ಬರೂ ಕಷ್ಟ ಪಟ್ಟು ಭೀಮನನ್ನು ಹೊರಗೆ ಎಳೆಯಲು ಪ್ರಯತ್ನಿಸಿದರು. ಆದರೆ ಭೀಮ ಒಂದಿಂಚೂ ಅಲ್ಲಾಡಲಿಲ್ಲ. ಎಲ್ಲರೂ ಸೇರಿ ಪ್ರೇಮ ಎಂಬ ಬಸ್ಸನ್ನು ಸಹಾಯಕ್ಕಾಗಿ ಕರೆದರು. ಮತ್ತೆ ಎಲ್ಲರೂ ಸೇರಿ ಭೀಮನನ್ನು ಹೊರಗೆಳೆಯಲು ಪ್ರಯತ್ನಿಸಿದರು. ಆದರೂ ಭೀಮ ಒಂದಿಂಚೂ ಅಲುಗಾಡದೆ ದೃಢವಾಗಿ ಅಲ್ಲೇ ನಿಂತಿದ್ದ. ಎಲ್ಲರೂ ಸೇರಿ ಇದಕ್ಕೇನು ಪರಿಹಾರ ಎಂದು ಯೋಚಿಸತೊಡಗಿದರು. ಅಷ್ಟರಲ್ಲಿ ಸ್ಯಾಮ್ ಎಂಬ ಕ್ರೇನ್ (ಜೆಸಿಬಿ ಯಂತ್ರ) ಭೀಮನನ್ನು ಪಾರು ಮಾಡಲು ಬಂತು. ಭೀಮ ಹೊಂಡದಿಂದ ಹೊರಗೆ ಬಂತು. ಆಮೇಲೆ ಎಲ್ಲರೂ ಸೇರಿ ಭೀಮನಂತೆ ಬೇರೆ ವಾಹನಗಳು ಮುಂದೆಂದೂ ಹೊಂಡದಲ್ಲಿ ಸಿಲುಕದಂತೆ, ಹೊಂಡವನ್ನು ಕಲ್ಲುಗಳಿಂದ ಮುಚ್ಚಿದರು.





## ಸೂಚನೆಗಳು

**ಹಂತ 1.** ಮೇಲಿನ ಕಥೆಯನ್ನು ಪರಿಚಯಿಸುವುದು (ಮಕ್ಕಳೊಂದಿಗೆ ವಿಷಯದ ಬಗ್ಗೆ ಚರ್ಚಿಸುತ್ತಾ ಅದನ್ನು ಅವರ ದಿನನಿತ್ಯದ ಅನುಭವಗಳಿಗೆ ಹೋಲಿಸುವುದು. ಪುಸ್ತಕದ ಮುಖಪುಟವನ್ನು ತೋರಿಸುತ್ತಾ ಕಥೆ ಯಾವುದರ ಬಗ್ಗೆ ಇರಬಹುದು ಎಂಬುದರ ಬಗ್ಗೆ ಚರ್ಚಿಸುವುದು.)

**ಹಂತ 2.** ಕಥೆಯನ್ನು ನಿಮ್ಮದೇ ಆದ ಪದಗಳಲ್ಲಿ ಸೂಕ್ತವಾದ ಹಾವಭಾವ ಹಾಗೂ ಧ್ವನಿಯ ಏರಿಳಿತದೊಂದಿಗೆ ಹೇಳುವುದು.

**ಹಂತ 3.** ಕಥೆ ಓದುತ್ತಾ ಅದಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಕೇಳುತ್ತಾ ಹೋಗುವುದು ಮತ್ತು ಮುಖ್ಯ ಪದಗಳನ್ನು ವಿವರಿಸುತ್ತಾ ಕಥೆಯಲ್ಲಿನ ಮುಖ್ಯ ಪಾತ್ರಗಳು ಹಾಗೂ ಘಟನೆಗಳ ಕಡೆಗೆ ಗಮನ ಸೆಳೆಯುವುದು.

ಪ್ರತಿಧ್ವನಿ ಪ್ರಶ್ನೆಗಳಿಗೆ ಉದಾಹರಣೆಗಳು.

- ಒಂದು ದಿನ ಭೀಮ ಎಂಬ ಸಾಮಾನಿನ ಲಾರಿ, ಚಾಕಲೇಟ್‌ನ ಮೂಟೆಗಳನ್ನು ಹೊತ್ತು ರಸ್ತೆಯಲ್ಲಿ ಹೋಗುತ್ತಿತ್ತು. ಒಂದು ದಿನ ರಸ್ತೆಯಲ್ಲಿ ಯಾರು ಹೋಗುತ್ತಿದ್ದರು? ಆ ಲಾರಿಯಲ್ಲಿ ಏನಿತ್ತು?
- ಅದು ಕಣ್ತಪ್ಪಿ ರಸ್ತೆಯಲ್ಲಿರುವ ದೊಡ್ಡ ಹೊಂಡದಲ್ಲಿ ಸಿಲುಕಿಕೊಂಡಿತು. ಅದು ಎಲ್ಲಿ ಸಿಲುಕಿಕೊಂಡಿತು?
- ಅಲ್ಲಿ ಹೋಗುತ್ತಿದ್ದ ರುಕ್ಕು ಎಂಬ ಮೋಟಾರು ಬೈಕು ಸಹಾಯ ಮಾಡಲೆಂದು ನಿಂತಿತು. ಅಲ್ಲಿ ಯಾರು ಹೋಗುತ್ತಿದ್ದರು?
- ಇಬ್ಬರೂ ಸನ್ನಿ ಎಂಬ ಆಟೋ ಅನ್ನು ಸಹಾಯಕ್ಕಾಗಿ ಕರೆದರು. ಅವರಿಬ್ಬರೂ ಯಾರನ್ನು ಸಹಾಯಕ್ಕಾಗಿ ಕರೆದರು?
- ಅಷ್ಟರಲ್ಲಿ ಸ್ಯಾಮ್ ಎಂಬ ಕ್ರೇನ್ ಭೀಮನನ್ನು ಪಾರು ಮಾಡಲು ಬಂತು. ಭೀಮ ಹೊಂಡದಿಂದ ಹೊರಗೆ ಬಂತು. ಭೀಮನನ್ನು ಪಾರು ಮಾಡಿದವರು ಯಾರು?
- ಸ್ಯಾಮ್ ಎಂಬ ಕ್ರೇನ್ ಅವನ ಸಹಾಯಕ್ಕಾಗಿ ಬಂತು. ಭೀಮನ ಸಹಾಯಕ್ಕೆ ಯಾರು ಬಂದರು?

**ಹಂತ 4.** ಕಥೆಯ ಕೊನೆಯಲ್ಲಿ ಸರಳವಾದ, ನೆನಪಿಸಿಕೊಳ್ಳುವ ಮತ್ತು ಗ್ರಹಿಕೆಯ ಪ್ರಶ್ನೆಗಳನ್ನು ಕೇಳುವುದು.

ನೆನಪಿಸಿಕೊಳ್ಳುವ ಮತ್ತು ಗ್ರಹಿಕೆಯ ಪ್ರಶ್ನೆಗಳಿಗೆ ಉದಾಹರಣೆಗಳು.

- ಭೀಮ ಎಂಬ ಸಾಮಾನಿನ ಲಾರಿಗೆ ಏನಾಯಿತು?
- ಅದರ ಸಹಾಯಕ್ಕಾಗಿ ಯಾರು ಬಂದರು?
- ಭೀಮನನ್ನು ಎಳೆಯಲು ರುಕ್ಕು ಏನನ್ನು ಉಪಯೋಗಿಸಿತು?
- ಮೊದಲಿನಿಂದ ಕೊನೆಯವರೆಗೆ ಭೀಮನನ್ನು ಹೊಂಡದಿಂದ ಮೇಲೆತ್ತಲು ಪ್ರಯತ್ನಿಸಿದವರ ಹೆಸರುಗಳನ್ನು ಪಟ್ಟಿ ಮಾಡಿ.
- ಭೀಮನನ್ನು ಹೊಂಡದಿಂದ ಹೊರಗೆಳೆದ ಮೇಲೆ ಅವು ಏನು ಮಾಡಿದವು?

**ಹಂತ 5.** ಊಹಿಸಲು ಅವಕಾಶವಿರುವ ಅಥವಾ "ಹೀಗಾಗಿದ್ದರೆ ಏನಾಗುತ್ತಿತ್ತು" ಪ್ರಶ್ನೆಗಳನ್ನು ಕೇಳುತ್ತಾ ಹೋಗುವುದು:

- ಭೀಮ ಏಕೆ ಹೊಂಡದಲ್ಲಿ ಸಿಲುಕಿಕೊಂಡಿತು ಎಂದು ನಿಮಗೆ ಅನಿಸುತ್ತದೆ?
- ಅದರ ಎಲ್ಲಾ ಸ್ನೇಹಿತರು ಒಟ್ಟಿಗೇ ಪ್ರಯತ್ನಿಸಿದರೂ ಭೀಮನನ್ನು ಹೊರಗೆಳೆಯಲು ಏಕೆ ಸಾಧ್ಯವಾಗಲಿಲ್ಲ?
- ರಸ್ತೆಯಲ್ಲಿ ಹೊಂಡಗಳಿದ್ದರೆ ಏನಾಗುತ್ತದೆ?
- ಸಾಮಾನಿನ ಲಾರಿಯ ತುಂಬಾ ಚಾಕಲೇಟ್‌ಗಳಿವೆ, ಭೀಮ ಹೊಂಡದಿಂದ ಹೊರಗೆ ಬರಲು ಕಷ್ಟ ಪಡುತ್ತಿತ್ತು. ನೀವು ಆ ಜಾಗದಲ್ಲಿದ್ದಿದ್ದರೆ ಏನು ಮಾಡುತ್ತಿದ್ದಿರಿ?
- ಒಂದು ವೇಳೆ ಆಟೋ ಏನಾದರೂ ಹೊಂಡದಲ್ಲಿ ಸಿಲುಕಿದ್ದರೆ ಯಾರು ಸಹಾಯ ಮಾಡುತ್ತಿದ್ದರು?
- ಒಂದು ವೇಳೆ ಕ್ರೇನ್ ಒಂದು ದಿನ ತಡವಾಗಿ ಬಂದಿದ್ದರೆ, ಭೀಮ ಚಾಕಲೇಟ್‌ಗಳನ್ನು ಮಾರುಕಟ್ಟೆಗೆ ಹೇಗೆ ತೆಗೆದುಕೊಂಡ ಹೋಗುತ್ತಿತ್ತು?

**ಹಂತ 6.** ಕಥೆಯ ಪಾತ್ರಗಳೊಂದಿಗೆ ಮಕ್ಕಳು ಸಂವೇದನಾಶೀಲತೆಯನ್ನು ತೋರಲು ಅಗತ್ಯವಿರುವ ಸರಳವಾದ ಪ್ರಶ್ನೆಗಳನ್ನು ಕೇಳುವುದು. ಭೀಮನಿಗೆ ಹೊಂಡದಲ್ಲಿ ಸಿಲುಕಿಕೊಂಡಿದ್ದಾಗ ಏನನ್ನಿಸಿರಬಹುದು? ಭೀಮ ಹೊಂಡದಿಂದ ಹೊರಗೆ ಬಂದಾಗ ಸ್ಯಾಮ್‌ನಿಗೆ ಏನನ್ನಿಸಿತು?

**ಹಂತ 7.** ಮಕ್ಕಳಿಗೆ ತಮ್ಮ ಪದಗಳನ್ನು ಉಪಯೋಗಿಸಿಕೊಂಡು 2–4 ವಾಕ್ಯಗಳಲ್ಲಿ ಕಥೆಯನ್ನು ಹೇಳಲು ನೆರವು ನೀಡುವುದು.



Scanned with CamScanner

ಚಟುವಟಿಕೆ 1

## ಹೆಬ್ಬೆರಳಿನ ಅಚ್ಚನ್ನು ಒತ್ತುವ ಮೂಲಕ ವಿವಿಧ ಆಕಾರಗಳನ್ನು ಮಾಡುವುದು

### ಕಲಿಕಾ ಸಾಮಗ್ರಿಗಳು


ಬಿಳಿಯ ಹಾಳೆಗಳು, ನೀರಿನಲ್ಲಿ ಕರಗುವ ಬಣ್ಣಗಳು (ವಾಟರ್ ಕಲರ್ಸ್).

### ಶಿಕ್ಷಕರ ಪೂರ್ವಸಿದ್ಧತೆ

ಪೂರ್ತಿ, ಅರ್ಧ ಮತ್ತು ಮುಕ್ಕಾಲುಗಳನ್ನು ಗುರುತು ಮಾಡಿದ ಟ್ರಕ್‌ನ ಚಿತ್ರವನ್ನು ಹಾಳೆ/ಪುಸ್ತಕದಲ್ಲಿ ಬರೆಯುವುದು. ಬಣ್ಣಗಳನ್ನು ಸಿದ್ಧ ಮಾಡಿಟ್ಟುಕೊಳ್ಳುವುದು – WS6.1.1.

### ಸೂಚನೆಗಳು

1. ಮಕ್ಕಳನ್ನು 3–4 ಗುಂಪುಗಳಾಗಿ ವಿಂಗಡಿಸುವುದು.
2. ಟ್ರಕ್‌ನ ರೇಖಾಕೃತಿಯ ಚಿತ್ರಗಳನ್ನು ಪ್ರತಿಯೊಂದು ಮಗುವಿಗೂ ಕೊಡುವುದು.
3. ಎರಡು ಮೂರು ಬಣ್ಣಗಳನ್ನು ಒಂದು ತಟ್ಟೆಯಲ್ಲಿಟ್ಟು ಪ್ರತಿಯೊಂದು ಗುಂಪಿಗೂ ಕೊಡುವುದು.
4. ಗುರುತು ಮಾಡಿರುವವರೆಗೂ ಅವರ ಹೆಬ್ಬೆರಳ ಅಚ್ಚನ್ನು ಟ್ರಕ್‌ನ ಚಿತ್ರದ ಒಳಗೆ ಒತ್ತುವಂತೆ ಹೇಳುವುದು.
5. ಮಕ್ಕಳಿಗೆ ಈ ಚಟುವಟಿಕೆಯನ್ನು ಹೇಗೆ ಮಾಡುವುದೆಂದು ತೋರಿಸಿಕೊಡುವುದು ಹಾಗೂ ಪೂರ್ತಿ ಮಾಡಿದ ಚಿತ್ರವನ್ನು ಪ್ರದರ್ಶನಕ್ಕೆಂದು ಮೀಸಲಾದ ಮೂಲೆಯಲ್ಲಿ ಇಡುವುದು.ಅಗತ್ಯವಿದ್ದಲ್ಲಿ ಸಹಾಯ ಮಾಡುವುದು.
6. ಪ್ರತಿ ಹಾಳೆಯಲ್ಲಿಯೂ ಮಕ್ಕಳು ಮಾಡಿದ ಕೆಲಸವನ್ನು ಅವರ ಹೆಸರು ಮತ್ತು ದಿನಾಂಕವನ್ನು ಬರೆದು ಪ್ರದರ್ಶನದ ಮೂಲೆಯಲ್ಲಿರಿಸುವುದು.
7. ಅವರು ಕೆಲಸ ಮಾಡಿದ ಸ್ಥಳವನ್ನು ಸ್ವಚ್ಛ ಮಾಡಿ ಅವರ ಕೈಗಳನ್ನು ಸಾಬೂನಿನಿಂದ ತೊಳೆದುಕೊಳ್ಳಲು ಮಕ್ಕಳಿಗೆ ಹೇಳುವುದು.






Scanned with CamScanner

ಚಟುವಟಿಕೆ 2

## ಹಾಳೆಯ ತುಣುಕುಗಳನ್ನು ವಿವಿಧ ಆಕಾರಗಳೊಳಗೆ ಅಂಟಿಸುವುದು

### ಕಲಿಕಾ ಸಾಮಗ್ರಿಗಳು


ಮೋಟರ್ ಬೈಕ್, ಕಾರು ಮತ್ತು ಬಸ್ಸು ಮೊದಲಾದ ವಾಹನಗಳ ರೇಖಾಕೃತಿಗಳನ್ನು ಒಳಗೊಂಡ ಹಾಳೆಗಳು (WS6.1.2), ದಿನಪತ್ರಿಕೆಗಳು ಮತ್ತು ಅಂಟು.

### ಶಿಕ್ಷಕರ ಪೂರ್ವಸಿದ್ಧತೆ

ಎಲ್ಲರಿಗೂ ಸಾಕಾಗುವಷ್ಟು ವಾಹನಗಳ ರೇಖಾಕೃತಿಗಳನ್ನು ಒಳಗೊಂಡ ಚಿತ್ರ ಬರೆಯುವ ಹಾಳೆಗಳಿವೆಯೇ (4 ಮಕ್ಕಳಿಗೆ ಒಂದರಂತೆ) ಎಂದು ಖಚಿತಪಡಿಸಿಕೊಳ್ಳುವುದು. ಎಷ್ಟು ಜನರನ್ನು ಕೊಂಡೊಯ್ಯಬಲ್ಲದು ಎಂಬುದರ ಆಧಾರದ ಮೇಲೆ ವಾಹನಗಳ ಚಿತ್ರಗಳನ್ನು ಬದಲಾಯಿಸಿ ಪ್ರತಿಯೊಂದು ಮಕ್ಕಳ ಗುಂಪುಗಳಿಗೆ ಕೊಡುವುದು.

### ಸೂಚನೆಗಳು

1. ಪ್ರತಿಯೊಂದು ಗುಂಪಿನಲ್ಲೂ 4–5 ಮಕ್ಕಳಿರುವಂತೆ ಸಣ್ಣ ಸಣ್ಣ ಗುಂಪುಗಳಾಗಿ ವಿಂಗಡಿಸುವುದು.
2. ಪ್ರತಿಯೊಂದು ಗುಂಪಿಗೂ ವಾಹನಗಳ ರೇಖಾಕೃತಿಗಳಿರುವ ಚಿತ್ರ ಬರೆಯುವ ಹಾಳೆಗಳು, ದಿನಪತ್ರಿಕೆಗಳು ಮತ್ತು ಅಂಟು ಇವುಗಳನ್ನು ಕೊಡುವುದು.
3. ತಮ್ಮ ಹಾಳೆಯಲ್ಲಿರುವ ಹೆಚ್ಚು ಜನರನ್ನು ಕೊಂಡೊಯ್ಯಬಲ್ಲ ವಾಹನವನ್ನು ಗುರುತಿಸಲು ಪ್ರತಿಯೊಂದು ಗುಂಪಿಗೂ ಹೇಳುವುದು.
4. ದಿನಪತ್ರಿಕೆಯ ಪುಟಗಳನ್ನು ಚಿಕ್ಕ ತುಂಡುಗಳಾಗಿ ಅವರಿಗೆ ಹರಿಯಲು ಹೇಳಿ, ಹರಿದ ತುಣುಕುಗಳನ್ನು ಹೆಚ್ಚು ಜನರನ್ನು ಕೊಂಡೊಯ್ಯಬಲ್ಲ ವಾಹನದೊಳಗೆ ಅಂಟಿಸಲು ಹೇಳುವುದು.
5. ಈ ಚಟುವಟಿಕೆಯನ್ನು ಮಾಡಬೇಕಾದರೆ ಪರಸ್ಪರ ಮಾತನಾಡಲು ಮಕ್ಕಳಿಗೆ ಅವಕಾಶ ಕೊಡುವುದು.
6. ಕೆಲವು ವಾಹನಗಳು ಹೆಚ್ಚು ಜನರನ್ನು ಮತ್ತು ಕೆಲವು ವಾಹನಗಳು ಕಡಿಮೆ ಜನರನ್ನು ಕೊಂಡೊಯ್ಯಬಲ್ಲವು ಎಂಬುದರ ಬಗ್ಗೆ ಚರ್ಚಿಸುವುದು. ಹಾಗೆಯೇ ದೊಡ್ಡ ವಾಹನದ ಚಿತ್ರಕ್ಕೆ ಹೆಚ್ಚು ಕಾಗದದ ತುಣುಕುಗಳು ಅಂಟಿಸಲು ಬೇಕಾಗುತ್ತವೆ ಮತ್ತು ಸಣ್ಣ ವಾಹನದ ಚಿತ್ರಕ್ಕೆ ಅಂಟಿಸಲು ಕಡಿಮೆ ಕಾಗದದ ತುಣುಕುಗಳು ಬೇಕು ಎಂಬುದನ್ನೂ ಚರ್ಚಿಸುವುದು.
7. ಚಟುವಟಿಕೆ ಪೂರ್ತಿ ಮಾಡಿದ ಮೇಲೆ ಆ ಜಾಗವನ್ನು ಸ್ವಚ್ಛಗೊಳಿಸಲು ಮತ್ತು ಉಪಯೋಗಿಸಿದ ಸಾಮಾನುಗಳನ್ನು ಸ್ವಸ್ಥಾನದಲ್ಲಿ ಇಡಲು ಹೇಳುವುದು.
8. ಪೂರ್ಣಗೊಳಿಸಿದ ಹಾಳೆಗಳಲ್ಲಿ ಮಕ್ಕಳ ಹೆಸರುಗಳು ಮತ್ತು ದಿನಾಂಕವನ್ನು ಬರೆದು ಪ್ರದರ್ಶನದ ಮೂಲೆಯಲ್ಲಿ ಪ್ರದರ್ಶನಕ್ಕಿಡುವುದು.





Scanned with CamScanner

ಚಟುವಟಿಕೆ 3

## ಹಿಟ್ಟಿನಿಂದ ಆಕೃತಿಗಳನ್ನು ಮಾಡುವುದು

### ಕಲಿಕಾ ಸಾಮಗ್ರಿಗಳು


ಗೋಧಿ ಅಥವಾ ಮೈದಾ ಹಿಟ್ಟು, ನೀರು, ಅಡುಗೆಗೆ ಬಳಸುವ ಬಣ್ಣ ಮತ್ತು ಅಂಟು.

### ಶಿಕ್ಷಕರ ಪೂರ್ವಸಿದ್ಧತೆ

ಗೋಧಿ ಅಥವಾ ಮೈದಾ ಹಿಟ್ಟು, ನೀರು, ಅಡುಗೆಗೆ ಬಳಸುವ ಬಣ್ಣ ಮತ್ತು ಅಂಟುಗಳನ್ನು ತೆಗೆದುಕೊಳ್ಳುವುದು. ಹಿಟ್ಟನ್ನು 3–4 ಭಾಗಗಳನ್ನಾಗಿ ಮಾಡಿ ಪ್ರತಿಯೊಂದು ಭಾಗಕ್ಕೂ ಬೇರೆ ಬೇರೆ ಬಣ್ಣಗಳನ್ನು ಬೆರೆಸುವುದು. ಚಪಾತಿ ಮಾಡುವ ಹದಕ್ಕೆ ಹಿಟ್ಟನ್ನು ಕಲಸಿ ಬೇರೆ ಬೇರೆ ಬಣ್ಣದ ಹಿಟ್ಟನ್ನು ಮಾಡಿಕೊಳ್ಳುವುದು.

### ಸೂಚನೆಗಳು

1. ಮಕ್ಕಳನ್ನು ಬೇರೆ ಬೇರೆ ಗುಂಪುಗಳಾಗಿ ವಿಂಗಡಿಸಿ ಪ್ರತಿಯೊಂದು ಬೇರೆ ಬಣ್ಣದ ಹಿಟ್ಟನ್ನು ಕೊಟ್ಟು ವಿವಿಧ ವಾಹನಗಳ ಆಕಾರವನ್ನು ಮಾಡಲು ಹೇಳುವುದು.
2. ತಾವು ಬಳಸಿದ ಜಾಗವನ್ನು ಮಕ್ಕಳಿಗೆ ಸ್ವಚ್ಛ ಮಾಡಲು ಹೇಳಿ ಉಳಿದ ಸಾಮಗ್ರಿಗಳನ್ನು ಅವುಗಳ ಜಾಗದಲ್ಲಿರಿಸುವಂತೆ ಹೇಳುವುದು.
3. ನಂತರ ತಮ್ಮ ಕೈಗಳನ್ನು ಸೋಪಿನಿಂದ ತೊಳೆದುಕೊಳ್ಳಲು ಸೂಚಿಸುವುದು.






Scanned with CamScanner

ಚಟುವಟಿಕೆ 4

## ಪ್ರಕೃತಿಯ ಚಿತ್ರ ಬಿಡಿಸುವುದು

### ಕಲಿಕಾ ಸಾಮಗ್ರಿಗಳು

ಒಂದೇ ಬದಿಯನ್ನು ಉಪಯೋಗಿಸುವ ಹಾಳೆಗಳು ಮತ್ತು ಬಣ್ಣದ ಪೆನ್ಸಿಲ್‌ಗಳು.

### ಸೂಚನೆಗಳು

1. ಮಕ್ಕಳನ್ನು ತರಗತಿಯಿಂದ ಹೊರಗೆ ಕರೆದುಕೊಂಡು ಹೋಗಿ ಅವರಿಗೆ ಒಂದೇ ಬದಿಯನ್ನು ಉಪಯೋಗಿಸುವ ಹಾಳೆ ಮತ್ತು ಬಣ್ಣದ ಪೆನ್ಸಿಲ್‌ಗಳನ್ನು ಕೊಡುವುದು.
2. ಹೊರಗಿನ ಪ್ರಕೃತಿ ಹಾಗೂ ತಮ್ಮ ಸುತ್ತಮುತ್ತಲಿನ ಪರಿಸರವನ್ನು ಗಮನಿಸಲು ಹೇಳುವುದು.
3. ತಾವು ಗಮನಿಸಿದ ವಸ್ತುಗಳ ಚಿತ್ರಗಳನ್ನು ಬರೆಯಲು ಹೇಳುವುದು.
4. ತಾವು ಬರೆದ ಚಿತ್ರಗಳ ಬಗ್ಗೆ ವಿವರಿಸಲು ಅವರಿಗೆ ಹೇಳಿ ಅದರ ಬಗ್ಗೆ ಚರ್ಚಿಸುವುದು.





Scanned with CamScanner

ಚಟುವಟಿಕೆ 1

## ನಟನೆಯ ಆಟ: ಕಾರು/ಸೈಕಲ್/ಬೈಕ್ ಚಲಾಯಿಸುತ್ತಿರುವಂತೆ ನಟಿಸುವುದು

### ಸೂಚನೆಗಳು

1. ಬಸ್ಸು, ಕಾರು ಚಲಾಯಿಸುತ್ತಿರುವಂತೆ ಅಥವಾ ಸೈಕಲ್ ತುಳಿಯುತ್ತಿರುವಂತೆ ಅವುಗಳ ಶಬ್ದ ಮಾಡುತ್ತಾ ನಟಿಸುವುದು.
2. ನೀವು ನಟನೆಯ ಮೂಲಕ ತೋರಿಸುತ್ತಿರುವ ವಾಹನ ಯಾವುದು ಎಂದು ಮಕ್ಕಳಿಗೆ ಗುರುತಿಸಲು ಹೇಳುವುದು.
3. ಕೆಲವು ಮಕ್ಕಳಿಗೆ ವಾಹನಗಳಂತೆ ನಟಿಸಲು ಹೇಳಿ ಉಳಿದವರಿಗೆ ಅವುಗಳನ್ನು ಗುರುತಿಸಲು ಪ್ರೋತ್ಸಾಹಿಸುವುದು.

ಚಟುವಟಿಕೆ 2

## ಒಗಟುಗಳು

### ಸೂಚನೆಗಳು


1. ಯಾವುದಾದರೂ ಒಂದು ವಾಹನದ ಬಗ್ಗೆ ಮಕ್ಕಳಿಗೆ ಸುಳಿವು ಕೊಟ್ಟು ಅದು ಯಾವುದೆಂದು ಊಹಿಸಲು ಹೇಳುವುದು. **ಉದಾಹರಣೆ:** ನನಗೆ ಎರಡು ಚಕ್ರಗಳಿವೆ, ಎರಡು ಹ್ಯಾಂಡಲ್‌ಗಳಿವೆ ಮತ್ತು ಹೆಚ್ಚೆಂದರೆ ಇಬ್ಬರನ್ನು ಮಾತ್ರ ಕೂರಿಸಿಕೊಳ್ಳುವೆ. ನೀವು ತುಳಿದರೆ ಮಾತ್ರ ನಾನು ಮುಂದೆ ಹೋಗುವೆ. ಉತ್ತರ: ಸೈಕಲ್.
2. ನನಗೆ ಮೂರು ಚಕ್ರಗಳಿವೆ ಮತ್ತು ನಾನು 3–4 ಜನರನ್ನು ಕರೆದೊಯ್ಯುವೆ. ನನ್ನ ಹಾರ್ನ್ ಪೋಂ, ಪೋಂ ಎಂದು ಸದ್ದು ಮಾಡುತ್ತದೆ. ನಾನು ಯಾರು? ಉತ್ತರ: ಆಟೋ ರಿಕ್ಷಾ.
3. ನನಗೆ ಆರು ಚಕ್ರಗಳಿವೆ ಹಾಗೂ ಮೂವತ್ತಕ್ಕಿಂತ ಹೆಚ್ಚು ಆಸನಗಳಿವೆ. ಬಹಳಷ್ಟು ಜನ ಮಕ್ಕಳು, ಹೆಂಗಸರು, ಗಂಡಸರನ್ನು ಕೂರಿಸಿಕೊಂಡು ಬೇರೆ ಬೇರೆ ಜಾಗಕ್ಕೆ ಕರೆದೊಯ್ಯುತ್ತೇನೆ. ನಾನು ಯಾರು? ಉತ್ತರ: ಬಸ್ಸು, ಬಸ್ಸುಗಳ ಕೆಲವು ಬಣ್ಣಗಳ ಸುಳಿವು ಕೊಡಬಹುದು.
4. ಶಿಕ್ಷಕರು ಇಂತಹ ಕೆಲವು ಸಣ್ಣ ಸಣ್ಣ ಒಗಟುಗಳನ್ನು ಸ್ವತಃ ಸಿದ್ಧಪಡಿಸಿಟ್ಟುಕೊಂಡು ಮಕ್ಕಳಿಗೆ ಕೇಳುವುದು. ಮಕ್ಕಳು ಊಹಿಸಿ ಉತ್ತರಿಸಿ ಖುಷಿ ಪಡುತ್ತಾರೆ.
5. ಮಕ್ಕಳಿಗೆ ತಾವೇ ಕೆಲವು ಒಗಟುಗಳನ್ನು ರಚಿಸುವಂತೆ ಪ್ರೋತ್ಸಾಹಿಸುವುದು. ಒಬ್ಬೊಬ್ಬರಿಗೊಬ್ಬರು ಸಹಾಯ ಮಾಡಿಕೊಂಡು ಒಗಟುಗಳನ್ನು ಕಟ್ಟಲು ಅವಕಾಶ ಕೊಡುವುದು.



Scanned with CamScanner

ಚಟುವಟಿಕೆ 1

## 'ನಾಯಿ ಮತ್ತು ಮೂಳೆ ಆಟ'



### ಕಲಿಕಾ ಸಾಮಗ್ರಿಗಳು

ವಾಹನಗಳ ಮಿಂಚುಪಟ್ಟಿಗಳು – F6.1.1.

### ಸೂಚನೆಗಳು

1. ಮಕ್ಕಳನ್ನು ಎರಡು ಗುಂಪುಗಳಾಗಿ ವಿಂಗಡಿಸುವುದು.
2. ಎರಡೂ ಗುಂಪಿನ ಪ್ರತಿಯೊಂದು ಮಗುವಿಗೂ ಒಂದೊಂದು ವಾಹನದ ಕಾರ್ಡ್ ಕೊಡುವುದು.
3. ಒಂದನೆಯ ಗುಂಪಿಗೆ ಕೊಟ್ಟ ಕಾರ್ಡ್‌ಗಳನ್ನೇ ಎರಡನೆಯ ಗುಂಪಿನ ಮಕ್ಕಳಿಗೂ ಕೊಡುವುದು.
4. ತಮ್ಮ ತಮ್ಮ ವಾಹನದ ಹೆಸರನ್ನು ನೆನಪಿಟ್ಟುಕೊಳ್ಳುವಂತೆ ಮಕ್ಕಳಿಗೆ ಹೇಳುವುದು.
5. ಮೊದಲನೆಯ ಗುಂಪಿನ ಮತ್ತು ಎರಡನೆಯ ಗುಂಪಿನ ಒಂದೊಂದು ಮಗುವನ್ನು ಜೋಡಿಗಳನ್ನಾಗಿ ಮಾಡಿ ಅವರಿಗೊಂದು ವಾಹನದ ಹೆಸರನ್ನು ಕೊಡುವುದು.
6. ದೊಡ್ಡ ವೃತ್ತವನ್ನು ಬರೆದು ಮಧ್ಯದಲ್ಲಿ ಎಲ್ಲಾ ವಾಹನಗಳ ಚಿತ್ರಗಳನ್ನು ಇಡುವುದು.
7. ಮಕ್ಕಳನ್ನು ಎರಡು ಸಮಾನಾಂತರ ಸಾಲುಗಳಲ್ಲಿ ವೃತ್ತದ ಎದಿರುಬದಿರು ನಿಲ್ಲಿಸುವುದು.
8. ಜೋಡಿಯಾಗಿರುವ ಮಕ್ಕಳು ವೃತ್ತದಿಂದ ಸಮದೂರದಲ್ಲಿ ನಿಂತಿದ್ದಾರೆಂದು ಖಚಿತಪಡಿಸಿಕೊಳ್ಳುವುದು.
9. ನೀವು ವಾಹನದ ಹೆಸರು ಕರೆದ ತಕ್ಷಣ ಅವರು ವೃತ್ತದ ಮಧ್ಯಕ್ಕೆ ಓಡಿ ತಮ್ಮ ವಾಹನದ ಚಿತ್ರವನ್ನು ಹುಡುಕಿ ತೆಗೆದುಕೊಳ್ಳಬೇಕೆಂದು ಮಕ್ಕಳಿಗೆ ಸೂಚನೆ ಕೊಡುವುದು.
10. ವಾಹನದ ಹೆಸರನ್ನು ಹೇಳುವುದು.
11. ಜೋಡಿಯಲ್ಲಿನ ಯಾವ ಮಗು ಬೇಗ ಆ ವಾಹನದ ಚಿತ್ರವನ್ನು ತೆಗೆದುಕೊಳ್ಳುತ್ತದೆಯೋ ಆ ತಂಡಕ್ಕೆ ಒಂದು ಅಂಕ ದೊರೆಯುತ್ತದೆ.
12. ಎಲ್ಲಾ ಮಕ್ಕಳಿಗೂ ಅವಕಾಶ ಸಿಗುವವರೆಗೂ ಆಟವನ್ನು ಮುಂದುವರೆಸುವುದು.

ಚಟುವಟಿಕೆ 2

## ಟೈರಿನಲ್ಲಿ ಹಾಯ್ದು ಹೋಗುವ ಹಾಗೆ ಚೆಂಡನ್ನು ಎಸೆಯುವುದು



### ಕಲಿಕಾ ಸಾಮಗ್ರಿಗಳು

ಸೈಕಲ್ ಅಥವಾ ಮೋಟಾರು ಬೈಕ್‌ಟೈರು, ಹಗ್ಗ ಮತ್ತು ಚೆಂಡು.

### ಸೂಚನೆಗಳು

1. ಟೈರನ್ನು ಮರ ಅಥವಾ ಸ್ಟ್ಯಾಂಡಿಗೆ ಮಕ್ಕಳ ಎತ್ತರಕ್ಕನುಗುಣವಾಗಿ ತೂಗು ಹಾಕುವುದು.
2. ಮಕ್ಕಳಿಗೆ ಚೆಂಡನ್ನು ಕೊಟ್ಟು ಒಬ್ಬೊಬ್ಬರಾಗಿ ಅವರ ಹೆಸರನ್ನು ಕರೆದು ತೂಗುಹಾಕಿರುವ ಟೈರಿನ ಮೂಲಕ ಎಸೆಯಲು ಹೇಳುವುದು.
3. ಮಕ್ಕಳು ಎಸೆಯುವುದನ್ನು ಅಭ್ಯಾಸ ಮಾಡಿಕೊಳ್ಳುತ್ತಿದ್ದಂತೆ ಎಸೆಯುವ ದೂರವನ್ನು ನಿಧಾನವಾಗಿ ಹೆಚ್ಚಿಸಬಹುದು.



Scanned with CamScanner

ಚಟುವಟಿಕೆ 3

## ಮುಕ್ತ ಆಟ



### ಕಲಿಕಾ ಸಾಮಗ್ರಿಗಳು

ಸೈಕಲ್/ಮೋಟಾರು ಬೈಕ್/ಸ್ಕೂಟರ್ ಟೈರುಗಳು.

### ಸೂಚನೆಗಳು

1. ವಿವಿಧ ವಾಹನಗಳ ಟೈರುಗಳನ್ನು ಸಂಗ್ರಹಿಸಿ ಮಕ್ಕಳಿಗೆ ಆಡಲು ಕೊಡುವುದು.

ಚಟುವಟಿಕೆ 4

## ಅಡೆತಡೆಗಳ ದಾರಿಯಲ್ಲಿ ಓಡುವುದು

### ಕಲಿಕಾ ಸಾಮಗ್ರಿಗಳು

ತರಗತಿಯಲ್ಲಿ ದೊರೆಯುವ ವಸ್ತುಗಳು ಉದಾಹರಣೆಗೆ-ರಟ್ಟಿನ ಬಾಕ್ಸ್, ಕುರ್ಚಿ, ಚೆಂಡು, ಟೈರುಗಳು.



### ಸೂಚನೆಗಳು

1. ರಟ್ಟಿನ ಬಾಕ್ಸ್, ಕುರ್ಚಿ, ಚೆಂಡು, ಟೈರುಗಳು ಮತ್ತು ಇತರ ಕೆಲವು ವಸ್ತುಗಳನ್ನು ಉಪಯೋಗಿಸಿ ಅಡೆತಡೆಗಳಿರುವ ದಾರಿಯನ್ನು ನಿರ್ಮಿಸುವುದು.
2. ಮಕ್ಕಳನ್ನು ಒಬ್ಬೊಬ್ಬರನ್ನಾಗಿ ಕರೆದು ಪ್ರಾರಂಭಿಸಿದ ಜಾಗದಿಂದ ಮುಗಿಯುವ ಜಾಗದವರೆಗೆ ಯಾವುದೇ ವಸ್ತುಗಳನ್ನು ತಮಗೆ ತಾಕಿಸಿಕೊಳ್ಳದಂತೆ ಓಡಬೇಕೆಂದು ತಿಳಿಸುವುದು.



Scanned with CamScanner

## ಸಾರಿಗೆಯ ಉಪಯೋಗಗಳು

1. Wave hello
2. Whisper hello
3. Say hello

→

1. Wave hello
2. Whisper hello
3. Say hello

→

1. Wave hello
2. Whisper hello
3. Say hello

1. Call out hello
2. Shout hello

→

1. Call out hello
2. Shout hello

→

1. Call out hello
2. Shout hello

Say

gesture

model

1. Wave hello
2. Whisper hello
3. Say hello
4. Call out hello
5. Shout hello


1. Shout hello
2. Say hello
3. Wave hello
4. Whisper hello
5. Call out hello



Scanned with CamScanner







ವಾಹನಗಳು ಮತ್ತು ಸಾರಿಗೆ

# ವಿವಿಧ ಬಗೆಯ ಸಾರಿಗೆ ವಾಹನಗಳು





Scanned with CamScanner

# ಕಲಿಕಾ ಫಲಿತಗಳು

## ಉಪವಿಷಯ 6.2: ವಿವಿಧ ಬಗೆಯ ಸಾರಿಗೆ ವಾಹನಗಳು

### 3–4 ವರ್ಷಗಳು

1. ತಾವು ವಾಸಿಸುವ ಪ್ರದೇಶದಲ್ಲಿ ಸಾಮಾನ್ಯವಾಗಿ ಬಳಸುವ ವಾಹನಗಳನ್ನು ಗುರುತಿಸುವುದು– ಉದಾಹರಣೆಗೆ: ಗ್ರಾಮೀಣ ಪ್ರದೇಶ–ಗಾಡಿ, ಬಸ್ಸು, ಆಟೋಗಳು, ನಗರ ಪ್ರದೇಶ–ಕಾರು, ಬಸ್ಸು ಇತ್ಯಾದಿ.
2. ಪ್ರಯಾಣಿಕರು ಹಾಗೂ ಸಾಮಾನು ಎರಡನ್ನೂ ಕೊಂಡೊಯ್ಯುವ ಉದ್ದೇಶಗಳಿಗಾಗಿ ವಾಹನಗಳನ್ನು ಬಳಸುತ್ತಾರೆ ಎಂದು ಅರ್ಥ ಮಾಡಿಕೊಳ್ಳುವುದು.
3. ಭೂಮಿಯ ಮೇಲೆ ಚಲಿಸುವ ವಾಹನಗಳು ನೀರಿನ ಮೇಲೆ ಚಲಿಸಲಾರವು ಮತ್ತು ಹಾರಲಾರವು ಎಂದು ಅರ್ಥ ಮಾಡಿಕೊಳ್ಳುವುದು.
4. ಸೈಕಲ್, ಕಾಲ್ನಡಿಗೆ ಅಥವಾ ಬಸ್ಸು ಇವುಗಳಲ್ಲಿ ಯಾವುದು ಹೆಚ್ಚು ವೇಗವಾಗಿ ಅವರನ್ನು ಶಾಲೆಗೆ ಕೊಂಡೊಯ್ಯಬಲ್ಲದು ಎಂಬುದನ್ನು ವಿವರಿಸುವುದು.

### 4–5 ವರ್ಷಗಳು

1. ಭೂ (ರೈಲು ಮತ್ತು ರಸ್ತೆ), ಜಲ (ಹಡಗು, ದೋಣಿ) ಮತ್ತು ವಾಯು (ವಿಮಾನ) ಸಾರಿಗೆಗಳೆಂಬ ವಿವಿಧ ರೀತಿಯ ಸಾರಿಗೆಗಳಿವೆ ಎಂದು ತಿಳಿದುಕೊಳ್ಳುವುದು.
2. ವಿವಿಧ ರೀತಿಯ ಸಾರಿಗೆಗಳ ಆಧಾರದ ಮೇಲೆ ವಾಹನಗಳನ್ನು ವರ್ಗೀಕರಿಸುವುದು
3. ವಾಹನಗಳನ್ನು ಹತ್ತುವ ಸ್ಥಳಗಳ ಬಗ್ಗೆ ತಿಳಿದುಕೊಳ್ಳುವುದು– ರೈಲು ನಿಲ್ದಾಣ, ಬಸ್ಸು ನಿಲ್ದಾಣ, ಬಂದರುಗಳು ಮತ್ತು ವಿಮಾನ ನಿಲ್ದಾಣಗಳು
4. ವಿವಿಧ ರೀತಿಯ ವಾಹನಗಳಿಗೆ ಸಂಬಂಧಪಟ್ಟ ಜನರು/ವಾಹನಗಳ ಚಾಲಕರು–ಬಸ್ಸು ಡ್ರೈವರ್, ವಿಮಾನ ಚಾಲಕ (ಪೈಲಟ್), ಬಸ್ ಕಂಡಕ್ಟರ್, ಆಟೋ ಡ್ರೈವರ್, ಮುಂತಾದ ಹೆಸರುಗಳನ್ನು ಹೇಳುವುದು
5. ಪ್ರಯಾಣಿಸುವ ಜನರ ಸಂಖ್ಯೆ ಮತ್ತು ಪ್ರಯಾಣದ ದೂರದ ಆಧಾರದ ಮೇಲೆ ಯಾವ ವಾಹನ ಸೂಕ್ತ ಎಂದು ನಿರ್ಧರಿಸುವುದು
6. ವಾಹನದಲ್ಲಿರುವ ಸಾಮಾನು ಸಂಗ್ರಹಣೆಯ ಸ್ಥಳದ ಆಧಾರದ ಮೇಲೆ ಒಂದು ವಾಹನದಲ್ಲಿ ಎಷ್ಟು ಸಾಮಾನು ಸಾಗಿಸಬಹುದೆಂದು ತಿಳಿದುಕೊಳ್ಳುವುದು

### 5–6 ವರ್ಷಗಳು

1. ಭೂ, ಜಲ ಮತ್ತು ವಾಯು ಸಾರಿಗೆಯ ವಾಹನಗಳ ಮುಖ್ಯ/ವಿಶಿಷ್ಟ ಭಾಗಗಳನ್ನು ಗುರುತಿಸುವುದು– ಭೂ ವಾಹನಗಳು ರಸ್ತೆಯ ಮೇಲೆ ಹಾಗೂ ರೈಲು ಹಳಿಗಳ ಮೇಲೆ ಚಲಿಸುತ್ತವೆ. ದೋಣಿಗಳು ನೀರಿನ ಮೇಲೆ ಚಲಿಸಲು ಹುಟ್ಟುಗೋಲು ಅಥವಾ ಹಾಯಿ ಇರುತ್ತವೆ. ವಿಮಾನಗಳಿಗೆ ರೆಕ್ಕೆಗಳು,ತಿರುಗಣೆ(ರೋಟರ್)ಗಳು ಇರುತ್ತವೆ ಮತ್ತು ಬಹುತೇಕ ವಾಹನಗಳಿಗೆ ಎಂಜಿನ್‌ಗಳು ಇರುತ್ತವೆ ಎಂದು ತಿಳಿಯುವುದು.
2. ವಾಹನಗಳನ್ನು ಶೆಡ್‌ಗಳು, ನೌಕಾನೆಲೆ/ಬಂದರು, ವಿಮಾನನಿಲ್ದಾಣ, ಬಂದರು/ಡಿಪೋಗಳಲ್ಲಿ ನಿಲ್ಲಿಸುತ್ತಾರೆ ಎಂದು ತಿಳಿದುಕೊಳ್ಳುವುದು.
3. ಸಾರ್ವಜನಿಕ ಸಾರಿಗೆಯನ್ನು ಉಪಯೋಗಿಸುವ ಸಂದರ್ಭದಲ್ಲಿ ಪ್ರಯಾಣಿಸುವಾಗ ಟಿಕೆಟ್ ಖರೀದಿಸುವುದು, ತಮ್ಮ ಸರದಿಗಾಗಿ ಸಾಲಿನಲ್ಲಿ ಕಾಯುವುದು ಮೊದಲಾದ ಪ್ರಕ್ರಿಯೆಗಳನ್ನು ತಿಳಿದುಕೊಳ್ಳುವುದು.

Scanned with CamScanner

ಉಪವಿಷಯ 6.2

# ವಿವಿಧ ಬಗೆಯ ಸಾರಿಗೆ ವಾಹನಗಳು



## ಕಲಿಕಾ ಉದ್ದೇಶಗಳು

**ಪರಿಕಲ್ಪನೆಗಳು:**

- ಭೂ (ರೈಲು ಮತ್ತು ಬಸ್ಸು), ಜಲ (ಹಡಗು, ದೋಣಿ) ಮತ್ತು ವಾಯು (ವಿಮಾನ) ಸಾರಿಗೆಗಳೆಂಬ ವಿವಿಧ ರೀತಿಯ ಸಾರಿಗೆಗಳಿವೆ ಎಂದು ತಿಳಿದುಕೊಳ್ಳುವುದು.
- ವಿವಿಧ ರೀತಿಯ ಸಾರಿಗೆಗಳ ಆಧಾರದ ಮೇಲೆ ವಾಹನಗಳನ್ನು ವರ್ಗೀಕರಿಸುವುದು.
- ವಾಹನಗಳನ್ನು ಹತ್ತುವ ಸ್ಥಳಗಳ ಬಗ್ಗೆ ತಿಳಿದುಕೊಳ್ಳುವುದು– ರೈಲು ನಿಲ್ದಾಣ, ಬಸ್ಸು ನಿಲ್ದಾಣ, ಬಂದರುಗಳು ಮತ್ತು ವಿಮಾನ ನಿಲ್ದಾಣಗಳು.
- ವಿವಿಧ ರೀತಿಯ ವಾಹನಗಳಿಗೆ ಸಂಬಂಧಪಟ್ಟವರು ವಾಹನಗಳ ಚಾಲಕರು–ಬಸ್ಸು ಡ್ರೈವರ್, ವಿಮಾನ ಚಾಲಕ (ಪೈಲಟ್), ಬಸ್ ಕಂಡಕ್ಟರ್, ಆಟೋ ಡ್ರೈವರ್ ಮುಂತಾದ ಹೆಸರುಗಳನ್ನು ಹೇಳುವುದು.
- ಪ್ರಯಾಣಿಸುವ ಜನರ ಸಂಖ್ಯೆ ಮತ್ತು ಪ್ರಯಾಣದ ದೂರದ ಆಧಾರದ ಮೇಲೆ ಯಾವ ವಾಹನ ಸೂಕ್ತ ಎಂದು ನಿರ್ಧರಿಸುವುದು.
- ವಾಹನದಲ್ಲಿರುವ ಸಾಮಾನು ಸಂಗ್ರಹಣೆಯ ಸ್ಥಳದ ಆಧಾರದ ಮೇಲೆ ಒಂದು ವಾಹನದಲ್ಲಿ ಎಷ್ಟು ಸಾಮಾನು ಸಾಗಿಸಬಹುದೆಂದು ತಿಳಿದುಕೊಳ್ಳುವುದು.



Scanned with CamScanner

## ಸಂಭಾಷಣೆ 1: ಉದ್ದೇಶದ ಆಧಾರದ ಮೇಲೆ ಪ್ರಯಾಣ ಮಾಡಲು ಸರಿಯಾದ ಸಾರಿಗೆಯನ್ನು ಆಯ್ಕೆ ಮಾಡಿಕೊಳ್ಳುವುದು



### ಕಲಿಕಾ ಫಲಿತಗಳು

- ಈ ಸಂಭಾಷಣೆಯ ಅಂತ್ಯದಲ್ಲಿ ಮಕ್ಕಳು ಭೂಮಿ (ಬಸ್ಸು, ರೈಲು), ಆಕಾಶ (ವಿಮಾನ) ಮತ್ತು ನೀರಿನ ಮೇಲೆ (ಹಡಗು, ದೋಣಿ) ಪ್ರಯಾಣ ಮಾಡಲು ವಿವಿಧ ರೀತಿಯ ಸಾರಿಗೆಗಳಿವೆ ಎಂದು ಅರಿತುಕೊಳ್ಳುತ್ತಾರೆ ಮತ್ತು ಅವುಗಳ ಬಗ್ಗೆ ವಿವರಿಸುತ್ತಾರೆ.

### ಕಲಿಕಾ ಸಾಮಗ್ರಿಗಳು

ವಿವಿಧ ವಾಹನಗಳ ಮಿಂಚುಪಟ್ಟಿಗಳು- F6.1.1 (1-14).




### ಶಿಕ್ಷಕರ ಪೂರ್ವಸಿದ್ಧತೆ

ತರಗತಿಗೆ ಮುನ್ನ ಪ್ರಶ್ನೆಗಳನ್ನು ಮತ್ತೊಮ್ಮೆ ನೋಡಿಕೊಳ್ಳುವುದು. ಅಗತ್ಯವಿದ್ದಲ್ಲಿ ಮಿಂಚುಪಟ್ಟಿಗಳನ್ನು ಬಳಸುವುದು.

### ಸೂಚನೆಗಳು

ಮಕ್ಕಳನ್ನು ವೃತ್ತಾಕಾರವಾಗಿ ಕುಳಿತುಕೊಳ್ಳಲು ಹೇಳಿ ಅವರ ಜೊತೆಗೆ ಕುಳಿತುಕೊಳ್ಳುವುದು. ಕೆಳಗಿನ ಪ್ರಶ್ನೆಗಳನ್ನು (ಇದೇ ರೀತಿಯ ಪ್ರಶ್ನೆಗಳನ್ನು ಸೇರಿಸಿಕೊಳ್ಳಬಹುದು) ಮಕ್ಕಳಿಗೆ ಕೇಳುವುದು.

1. ನಿಮಗೆ ಹತ್ತಿರವಿರುವ ಮಾರುಕಟ್ಟೆಗೆ ಹೋಗಲು ನೀವು ಯಾವ ವಾಹನವನ್ನು ಬಳಸುತ್ತೀರಿ?
2. ನಿಮ್ಮ ಹತ್ತಿರದ ಹಳ್ಳಿಯಲ್ಲಿ ಇರುವ ನಿಮ್ಮ ಸಂಬಂಧಿಕರನ್ನು ನೋಡಲು ಯಾವ ವಾಹನದಲ್ಲಿ ಹೋಗುವಿರಿ?
3. ನೀವು ಎಂದಾದರೂ ರೈಲಿನಲ್ಲಿ ಪ್ರಯಾಣ ಮಾಡಿದ್ದೀರಾ ಅಥವಾ ರೈಲನ್ನು ನೋಡಿದ್ದೀರಾ? ರೈಲು ಬಸ್ಸಿಗಿಂತ ಹೇಗೆ ಭಿನ್ನವಾಗಿದೆ?
4. ನೀವು ಬೆಂಗಳೂರಿಗೆ ಹೋಗಲು ಯಾವ ವಾಹನ ಬಳಸುವಿರಿ? (ಶಾಲೆ ಬೆಂಗಳೂರಿನಲ್ಲೇ ಇದ್ದರೆ ಬೇರೆ ಊರಿಗೆ ಬದಲಾಯಿಸಿ.)
5. ನಾನು ಸೈಕಲ್‌ನಲ್ಲಿ ಬೆಂಗಳೂರಿಗೆ ಹೋಗಬಹುದೇ? ನಾನು ಬೇಗ ತಲುಪಲು ಇನ್ಯಾವ ವಾಹನವನ್ನು ಬಳಸಬೇಕು? ಏಕೆ?
6. ನೀವು ಸಮುದ್ರವನ್ನು ನೋಡಿದ್ದೀರಾ? ಸಮುದ್ರವನ್ನು ದಾಟಲು ಯಾವ ವಾಹನವನ್ನು ಬಳಸಬೇಕಾಗುತ್ತದೆ?
7. ಬಹುದೂರದ ಊರುಗಳಿಗೆ ಬೇಗ ತಲುಪಬೇಕಾದರೆ ಯಾವ ವಾಹನ ಉತ್ತಮ?
8. ನೀವು ವಿಮಾನವನ್ನು ನೋಡಿದ್ದೀರಾ? ಅದು ರಸ್ತೆಯಲ್ಲಿ ಚಲಿಸುತ್ತದೆಯೇ?
9. ನಾವು ಸಮುದ್ರವನ್ನು ದಾಟಲು ಬೇರೆ ಯಾವ ವಾಹನವನ್ನು ಬಳಸಬಹುದು? (ಹಡಗುಗಳು ಅಥವಾ ವಿಮಾನ)
10. ವಿಮಾನವು ವೇಗವಾಗಿ ಅಥವಾ ನಿಧಾನವಾಗಿ ಓಡುವ ವಾಹನವೇ? ವಿಮಾನ ಅಥವಾ ಹಡಗು ಇವುಗಳಲ್ಲಿ ಯಾವುದು ಪ್ರಯಾಣ ಮಾಡಲು ಹೆಚ್ಚು ಸಮಯ ತೆಗೆದುಕೊಳ್ಳುತ್ತದೆ?
11. ಬಸ್ಸು, ವಿಮಾನ, ರೈಲು ಅಥವಾ ಹಡಗು ಇವುಗಳಲ್ಲಿ ಯಾವುದು ಕಡಿಮೆ ಜನರನ್ನು ಕೊಂಡೊಯ್ಯುವುದು?
12. ಇಲ್ಲೇ ಹತ್ತಿರುವಿರುವ ಅಜ್ಜಿಯ ಮನೆಗೆ ನಾನು ವಿಮಾನದಲ್ಲಿ ಹೋಗಬಹುದೇ? ಏಕೆ?



Scanned with CamScanner

ಸಂಭಾಷಣೆ 2

# ವಾಹನಗಳ ಚಾಲಕರು ಮತ್ತು ವಾಹನ ನಿಲ್ದಾಣಗಳು



## ಕಲಿಕಾ ಫಲಿತಗಳು

**ಈ ಚಟುವಟಿಕೆಯ ಅಂತ್ಯದಲ್ಲಿ ಮಕ್ಕಳು ಕೆಳಗಿನವುಗಳನ್ನು ಅರಿತಿರುತ್ತಾರೆ.**


- ಬೇರೆ ಬೇರೆ ಪ್ರಕಾರದ ವಾಹನ ಚಾಲಕರ ಹೆಸರುಗಳನ್ನು ಗುರುತಿಸುವುದು.
- ವಾಹನಗಳನ್ನು ಹತ್ತುವ ಸ್ಥಳಗಳ ಬಗ್ಗೆ ತಿಳಿದುಕೊಂಡು ವಿವರಿಸಬಲ್ಲವರಾಗುತ್ತಾರೆ. (ರೈಲು ನಿಲ್ದಾಣ, ಬಸ್ಸು ನಿಲ್ದಾಣ, ಬಂದರುಗಳು ಮತ್ತು ವಿಮಾನ ನಿಲ್ದಾಣಗಳು)

## ಕಲಿಕಾ ಸಾಮಗ್ರಿಗಳು

**ಚಿತ್ರ ಹೊಂದಿರುವ ಮಿಂಚುಪಟ್ಟಿಗಳು – F6.2.1 (1–11):** 1. ಬಸ್ಸು ಡ್ರೈವರ್ 2. ಪೈಲಟ್ (ವಿಮಾನ ಚಾಲಕ) 3. ಕ್ಯಾಪ್ಟನ್ (ಹಡಗಿನ ಚಾಲಕ) 4. ಕಂಡಕ್ಟರ್ (ಬಸ್ ನಿರ್ವಾಹಕ) 5. ವಾಹನ ರಿಪೇರಿ ಮಾಡುವವರು (ಮೆಕ್ಯಾನಿಕ್) 6. ರೈಲು ಟಿಕೆಟ್ ಪರೀಕ್ಷಕ (ಟಿಟಿಇ) 7. ಆಟೋ ನಿಲ್ದಾಣ 8. ಬಸ್ಸು ನಿಲ್ದಾಣ 9. ರೈಲು ನಿಲ್ದಾಣ 10. ವಿಮಾನ ನಿಲ್ದಾಣ 11. ಬಂದರು.

## ಸೂಚನೆಗಳು

1. ಮಕ್ಕಳನ್ನು ಇಬ್ಬರಂತೆ ಜೊತೆಯಾಗಿ ಕುಳಿತುಕೊಳ್ಳಲು ಹೇಳಿ ಅವರಿಗೆ ವಾಹನವನ್ನು ಮತ್ತು ಅದನ್ನು ಚಲಾಯಿಸುವವರನ್ನು ಹೊಂದಿಸುವಂತೆ ಹೇಳುವುದು. ಪ್ರತಿಯೊಂದು ಜೋಡಿಯು ವಾಹನಕ್ಕೆ ಸಂಬಂಧಿಸಿದ ಒಬ್ಬ ಕೆಲಸಗಾರನನ್ನು (ಚಾಲಕ ಅಥವಾ ಕಂಡಕ್ಟರ್, ಮೆಕ್ಯಾನಿಕ್, ಕ್ಲೀನರ್) ತಕ್ಕ ವಾಹನದ ಜೊತೆ ಹೊಂದಿಸುವುದು.
2. ತಾವು ಆರಿಸಿಕೊಂಡ ಬೇರೆ ಬೇರೆ ಪ್ರಕಾರದ ವಾಹನ ಚಾಲಕರನ್ನು ಹಾಗೂ ಸಂಬಂಧಿಸಿದ ಇತರೆ ವ್ಯಕ್ತಿಗಳನ್ನು ಗುರುತಿಸುವುದು, ವಾಹನ ಮತ್ತು ಅವರು ಆ ವಾಹನದಲ್ಲಿ ಏನು ಕೆಲಸ ಮಾಡುತ್ತಾರೆ ಮುಂತಾದವುಗಳನ್ನು ವಿವರಿಸಿ ಅವರ ಆಯ್ಕೆಯನ್ನು ತಿಳಿಸಲು ಮಕ್ಕಳಿಗೆ ಅವಕಾಶ ಕೊಡುವುದು. ಹೊಂದಿಸಲು ಸಾಧ್ಯವಾಗದ ವ್ಯಕ್ತಿಗಳ ಹೆಸರು ಹೇಳಲು ಸಹಾಯ ಮಾಡುವುದು.
3. ವಾಹನಗಳನ್ನು ಚಲಾಯಿಸುವವರ ಬಗ್ಗೆ ಮತ್ತು ಅವರನ್ನು ಏನೆಂದು ಕರೆಯುತ್ತಾರೆ–ಚಾಲಕ, ವಿಮಾನ ಚಾಲಕ (ಪೈಲಟ್), ರೈಲಿನ ಚಾಲಕ (ಲೋಕೊ ಪೈಲಟ್), ಹಡಗಿನ ಚಾಲಕ (ಕ್ಯಾಪ್ಟನ್) ಎಂಬುದರ ಬಗ್ಗೆ ಚರ್ಚಿಸುವುದು. ವಾಹನಗಳಿಗೆ ಸಂಬಂಧಿಸಿದ ಉಳಿದವರು – ಕಂಡಕ್ಟರ್, ಮೆಕ್ಯಾನಿಕ್, ಟಿಕೆಟ್ ಪರೀಕ್ಷಕ, ವಾಹನ ಸ್ವಚ್ಛಗೊಳಿಸುವವರ ಬಗ್ಗೆ ಚರ್ಚಿಸುವುದು. ವಾಹನ ನಿಲುಗಡೆ ಮತ್ತು ಹತ್ತುವ ಸ್ಥಳಗಳಾದ ಆಟೋ ನಿಲ್ದಾಣ, ಬಸ್ಸು ನಿಲ್ದಾಣ, ರೈಲು ನಿಲ್ದಾಣ, ವಿಮಾನ ನಿಲ್ದಾಣ, ಬಂದರು/ನೌಕಾನೆಲೆ ಮೊದಲಾದವುಗಳ ಬಗ್ಗೆಯೂ ಇದೇ ರೀತಿಯ ಚಟುವಟಿಕೆಯನ್ನು ಮಾಡುವುದು.






Scanned with CamScanner

ಸಂಭಾಷಣೆ 3

## ವಿವಿಧ ರೀತಿಯ ಸಾರಿಗೆಗಳ ಆಧಾರದ ಮೇಲೆ ವಾಹನಗಳನ್ನು ವರ್ಗೀಕರಿಸುವುದು



### ಕಲಿಕಾ ಫಲಿತಗಳು

- ಈ ಚಟುವಟಿಕೆಯ ಅಂತ್ಯದಲ್ಲಿ ಬೇರೆ ಬೇರೆ ಪ್ರಕಾರದ ವಾಹನಗಳು ಯಾವುದರ ಮೇಲೆ ಚಲಿಸುತ್ತವೆ ಎಂಬ ಆಧಾರದ ಮೇಲೆ ವಿವಿಧ ವಾಹನಗಳನ್ನು ವರ್ಗೀಕರಿಸುತ್ತಾರೆ.

### ಕಲಿಕಾ ಸಾಮಗ್ರಿಗಳು


ವಿವಿಧ ವಾಹನಗಳ ಮಿಂಚುಪಟ್ಟಿಗಳು– F6.1.1 (1–14), ಚೆಂಡು.

### ಶಿಕ್ಷಕರ ಪೂರ್ವಸಿದ್ಧತೆ

ಮೂರು ವೃತ್ತಗಳನ್ನು ಬರೆದು, ಅವುಗಳ ಒಳಗೆ ರಸ್ತೆ, ವಾಯು ಮತ್ತು ಜಲವನ್ನು ಸೂಚಿಸುವ ಚಿಹ್ನೆಗಳನ್ನು ಬರೆಯುವುದು. ಮಕ್ಕಳನ್ನು ವೃತ್ತಗಳ ಸುತ್ತ ಕುಳಿತುಕೊಳ್ಳಲು ಹೇಳುವುದು. ವಿವಿಧ ವಾಹನಗಳ ಮಿಂಚುಪಟ್ಟಿಗಳನ್ನು ಒಂದು ಬುಟ್ಟಿಯಲ್ಲಿರಿಸುವುದು.

### ಸೂಚನೆಗಳು

1. ವಿವಿಧ ವಾಹನಗಳ ಮಿಂಚುಪಟ್ಟಿಗಳನ್ನು ಒಂದು ಬುಟ್ಟಿಯಲ್ಲಿರಿಸುವುದು. ಒಂದು ಚೆಂಡನ್ನು ಒಬ್ಬರಿಂದ ಒಬ್ಬರಿಗೆ ವರ್ಗಾಯಿಸುವ ಆಟ ಪ್ರಾರಂಭಿಸುವುದು.
2. ಶಿಕ್ಷಕರು ಸೀಟಿ ಊದಿದಾಗ ಯಾವ ಮಗುವಿನ ಹತ್ತಿರ ಚೆಂಡು ಇರುತ್ತದೆಯೋ ಆ ಮಗು ಬುಟ್ಟಿಯಲ್ಲಿರುವ ಒಂದು ಮಿಂಚುಪಟ್ಟಿಯನ್ನು ತೆಗೆದುಕೊಂಡು ಅದರಲ್ಲಿರುವ ವಾಹನವನ್ನು ಹೆಸರಿಸಬೇಕು.
3. "ಇದನ್ನು ಎಲ್ಲಿ ನೋಡಿರುವೆ? ಇದು ಯಾವುದರ ಮೇಲೆ ಚಲಿಸುತ್ತದೆ?" ಎಂದು ಕೇಳಿ ಅದನ್ನು ಸರಿಯಾದ ವೃತ್ತದಲ್ಲಿರಿಸುವಂತೆ ಹೇಳುವುದು.
4. ಚಿಹ್ನೆಗಳ ಬದಲು ರಸ್ತೆ, ನೀರು ಮತ್ತು ಆಕಾಶದ ಚಿತ್ರಗಳನ್ನು ಬಳಸಬಹುದು.
5. ಸಂಭಾಷಣೆಯ ಕೊನೆಯಲ್ಲಿ ನಿಮಗೆ ಇಷ್ಟವಾದ ಸಾರಿಗೆ ಯಾವುದು ಮತ್ತು ಏಕೆ ಎಂದು ಮಕ್ಕಳನ್ನು ಕೇಳುವುದು.






Scanned with CamScanner

ಯೋಜನಾ ಕಾರ್ಯ 1

# ಸಾರಿಗೆ ಮತ್ತು ಸಾಮಾನುಗಳನ್ನು ಸಾಗಿಸುವ ವಿಧಾನದ ಆಯ್ಕೆ

## ಕಲಿಕಾ ಫಲಿತಗಳು

**ಈ ಯೋಜನಾ ಕಾರ್ಯದ ಕೊನೆಯಲ್ಲಿ ಮಕ್ಕಳು ಈ ಕೆಳಗಿನವುಗಳನ್ನು ವಿವರಿಸಲು ಸಮರ್ಥರಾಗಿರುತ್ತಾರೆ**

- ಪ್ರಯಾಣಿಕರ ಸಂಖ್ಯೆ, ಕ್ರಮಿಸಬೇಕಾದ ದೂರ ಮತ್ತು ಯಾವುದರ ಮೇಲೆ ಹೋಗುತ್ತದೆ ಎಂಬುದರ ಆಧಾರದ ಮೇಲೆ ತಕ್ಕ ಸಾರಿಗೆಯನ್ನು ಆಯ್ಕೆ ಮಾಡಿಕೊಳ್ಳುವ ನಿರ್ಧಾರ ಮಾಡುವುದು ಮತ್ತು ತಮ್ಮ ಆಯ್ಕೆಯ ನಿರ್ಧಾರವನ್ನು ವಿವರಿಸುವುದು.
- ವಾಹನಗಳಲ್ಲಿರುವ ಸಾಮಾನು ಸಂಗ್ರಹಣೆಯ ಜಾಗಗಳ ಬಗ್ಗೆ ಮತ್ತು ಎಷ್ಟು ಸಾಮಾನು ಸಾಗಿಸಬಹುದೆಂದು ವಿವರಿಸುವುದು.
- ತಾವು ಆಯ್ಕೆ ಮಾಡಿಕೊಂಡ ವಾಹನಗಳ ಬಗ್ಗೆ ಹೆಚ್ಚಿನ ತಿಳುವಳಿಕೆ ಪಡೆಯುವುದು.

## ಕಲಿಕಾ ಸಾಮಗ್ರಿಗಳು

ಬೇರೆ ಬೇರೆ ಸ್ಥಳಗಳನ್ನು ಬರೆದ ಕಾಗದದ ಚೀಟಿಗಳು. ಆ ಸ್ಥಳಗಳು ದೂರ ಮತ್ತು ಹತ್ತಿರದ ಜಾಗಗಳನ್ನು ಒಳಗೊಂಡಿರಬೇಕು. ಅಲ್ಲಿಗೆ ಹೋಗಬೇಕಾದರೆ ಕ್ರಮಿಸಬೇಕಾದ ದೂರದ ಆಧಾರದ ಮೇಲೆ ವಿವಿಧ ರೀತಿಯ ಸಾರಿಗೆಗಳನ್ನು ಉದಾಹರಿಸುವಂತೆ ಇರಬೇಕು. ಪ್ರತಿಯೊಂದು ಮಗುವಿಗೂ ಅದು ಹಿಡಿದುಕೊಂಡು ಹೋಗಬಹುದಾದ ಒದೊಂದು ವಸ್ತುವನ್ನು ಕೊಡುವುದು. ಅದು ಒಂದು ಪುಸ್ತಕ, ಬಾಟಲಿ ಅಥವಾ ಸ್ಲೇಟು ಆಗಿರಬಹುದು.

## ಶಿಕ್ಷಕರ ಪೂರ್ವಸಿದ್ಧತೆ

ಸ್ಥಳಗಳ ಹೆಸರುಗಳನ್ನು ಚೀಟಿಗಳಲ್ಲಿ ಬರೆದು ಅವುಗಳನ್ನು ಮಡಚಿ ಒಂದು ಬುಟ್ಟಿಯಲ್ಲಿರಿಸುವುದು. ಉದಾಹರಣೆಗೆ–ಬೆಂಗಳೂರು, ಹತ್ತಿರದ ಮಾರುಕಟ್ಟೆ/ದೇವಸ್ಥಾನ, ದೆಹಲಿ, ಬೀದರ್ ಅವರ ಮನೆಗಳು ಮೊದಲಾದವುಗಳು.

## ಸೂಚನೆಗಳು

1. ಎಷ್ಟು ಸ್ಥಳಗಳಿವೆಯೋ ಅಷ್ಟು ಭಾಗಗಳಾಗಿ ಮಕ್ಕಳನ್ನು ವಿಂಗಡಿಸುವುದು.
2. ಪ್ರತಿಯೊಂದು ಗುಂಪಿಗೂ ಬುಟ್ಟಿಯಲ್ಲಿರುವ ಒಂದು ಚೀಟಿಯನ್ನು ಆರಿಸಿಕೊಳ್ಳಲು ಹೇಳುವುದು.
3. ತಮ್ಮ ಆಯ್ದ ಸ್ಥಳಗಳಿಗೆ ಹೋಗಲು ಅವರು ಯಾವ ರೀತಿಯ ಸಾರಿಗೆಯನ್ನು ಉಪಯೋಗಿಸುತ್ತಾರೆ ಮತ್ತು ಆ ವಾಹನದಲ್ಲಿ ತಮ್ಮ ಸಾಮಾನನ್ನು ಹೇಗೆ ತೆಗೆದುಕೊಂಡು ಹೋಗುತ್ತಾರೆ ಎಂದು ಕೇಳುವುದು.
4. ಈ ಅವಕಾಶವನ್ನು ಉಪಯೋಗಿಸಿ ಮಕ್ಕಳು ಈವರೆಗೆ ಪ್ರಯಾಣಿಸದ ವಾಹನಗಳಲ್ಲಿ ಸಾಮಾನುಗಳನ್ನು ಹೇಗೆ ಕೊಂಡೊಯುತ್ತಾರೆ ಎಂದು ತೋರಿಸುವುದು.
5. ಅದನ್ನು ತೋರಿಸುವಾಗ "ಪ್ರತಿಯೊಬ್ಬ ಮಕ್ಕಳು ತಂದಿರುವ ವಸ್ತುಗಳನ್ನು ಕುರಿತು ಮೇಲಿಡಿ/ಕೆಳಗೆ ಇಡಿ/ನಿಮ್ಮೊಂದಿಗೆ ಇರಿಸಿಕೊಳ್ಳಿ" ಎಂಬ ಪದಗಳನ್ನು ಬಳಸುವುದು.
6. ಮಕ್ಕಳು ತಮ್ಮ ತಮ್ಮ ಸ್ಥಳಗಳಿಗೆ ವಾಹನಗಳಲ್ಲಿ ತೆರಳುವಾಗ ಸಾಮಾನುಗಳನ್ನು ಹೇಗೆ ಎತ್ತಿ ಇಡುವುದು/ ದೂರ ಇಡುವುದು, ಒಯ್ಯುವುದು ಮೊದಲಾದವುಗಳನ್ನು ಅಭಿನಯಿಸಿ ತೋರಿಸುವುದು.
7. ಬುಟ್ಟಿಯಲ್ಲಿರುವ ವಿವಿಧ ವಾಹನಗಳ ಚೀಟಿಯನ್ನು ಒಂದೇ ಸಲಕ್ಕೆ ತೆಗೆಸಿ ಅಭಿನಯಿಸಲು ಕಷ್ಟವಾಗುತ್ತಿದ್ದರೆ, ಇಡೀ ತರಗತಿಯ ಮಕ್ಕಳೆಲ್ಲ ಸೇರಿ ಒಂದೇ ವಾಹನವನ್ನು ಆರಿಸಿಕೊಂಡು ಅಭಿನಯಿಸಲು ಹೇಳುವುದು.
8. ಚರ್ಚೆಯನ್ನು ಮುಂದುವರೆಸುತ್ತಾ ಈ ಮುಂದಿನ ಪ್ರಶ್ನೆಗಳನ್ನು ಶಿಕ್ಷಕರು ಕೇಳಬಹುದು. ಅವರು ಎಷ್ಟು ಸಾಮಾನುಗಳನ್ನು ಕೊಂಡೊಯ್ಯಬಹುದು? ಬೇರೆ ಯಾವುದರಲ್ಲಿ ಅವರು ಹೆಚ್ಚು ಸಾಮಾನು ತೆಗೆದುಕೊಂಡು ಹೋಗಬಹುದು? ಅವರು ಬಸ್ಸು, ಕಾರು, ಟ್ರಕ್ ಅಥವಾ ರೈಲಿನಲ್ಲಿ ಎಷ್ಟು ಸಾಮಾನುಗಳನ್ನು ತೆಗೆದುಕೊಂಡು ಹೋಗಬಹುದು ಹಾಗೂ ಅವುಗಳನ್ನು ಎಲ್ಲಿ ಇಡಬಹುದು ಎಂಬುದರ ಬಗ್ಗೆ ಇನ್ನೊಮ್ಮೆ ಚರ್ಚಿಸುವುದು.



Scanned with CamScanner

ಯೋಜನಾ ಕಾರ್ಯ 2

## ಕ್ಷೇತ್ರ ಭೇಟಿ

### ಶಿಕ್ಷಕರ ಪೂರ್ವಸಿದ್ಧತೆ

ಸಂಬಂಧಪಟ್ಟವರಿಗೆ ಭೇಟಿಯ ಬಗ್ಗೆ ತಿಳಿಸಿ ಅವರಿಂದ ಅನುಮತಿ ತೆಗೆದುಕೊಳ್ಳುವುದು. ಭೇಟಿಯ ಸ್ಥಳವು ಹೆಚ್ಚು ದೂರವಿಲ್ಲ ಎಂದು ಖಚಿತಪಡಿಸಿಕೊಳ್ಳುವುದು.

### ಸೂಚನೆಗಳು

1. ಮಕ್ಕಳನ್ನು ಹತ್ತಿರದ ವಾಹನ ಸರ್ವೀಸ್ ಸ್ಟೇಷನ್ (ಗ್ಯಾರೇಜ್) ಅಥವಾ ಪಂಕ್ಚರ್ ಷಾಪಿಗೆ ಕರೆದುಕೊಂಡು ಹೋಗುವುದು.
2. ಅಲ್ಲಿನ ಪ್ರಕ್ರಿಯೆಗಳನ್ನು ಗಮನಿಸಲು ಬಿಡುವುದು. ಅಲ್ಲಿನ ಸಿಬ್ಬಂದಿಯೊಡನೆ ಅವರು ಪರಸ್ಪರ ಮಾತನಾಡಲು ಅವಕಾಶ ಮಾಡಿಕೊಡುವುದು.
3. ಸಿಬ್ಬಂದಿಯು ಅವರಿಗೆ ವಿವಿಧ ವಾಹನಗಳ ಭಾಗಗಳನ್ನು ತೋರಿಸುವುದು.
4. ಅವರಿಗೆ ವಿವಿಧ ವಾಹನಗಳ ನಡುವಿನ ವ್ಯತ್ಯಾಸವನ್ನು ತಿಳಿಸುವುದು ಮತ್ತು ಅವುಗಳನ್ನು ರಿಪೇರಿ ಮಾಡಲು ಬಳಸುವ ಉಪಕರಣಗಳ ನಡುವಿನ ವ್ಯತ್ಯಾಸವನ್ನು ಮಕ್ಕಳು ತಿಳಿಯಪಡಿಸುವುದು.
5. ಸಹಕರಿಸಿದ್ದಕ್ಕೆ ಅವರಿಗೆ ಮತ್ತು ಅವರ ಸಹಾಯಕ ಸಿಬ್ಬಂದಿಗೆ ಧನ್ಯವಾದಗಳನ್ನು ತಿಳಿಸುವುದು.
6. ತರಗತಿಗೆ ಹಿಂದಿರುಗಿದ ಮೇಲೆ ತಮ್ಮ ಅನುಭವವನ್ನು ಹಂಚಿಕೊಳ್ಳಲು ಮಕ್ಕಳನ್ನು ಪ್ರೋತ್ಸಾಹಿಸುವುದು.






Scanned with CamScanner

ಯೋಜನಾ ಕಾರ್ಯ 3

## ಅನುಭವಗಳ ಹಂಚಿಕೆ



### ಶಿಕ್ಷಕರ ಪೂರ್ವಸಿದ್ಧತೆ

ಶಾಲೆಗೆ ಸೈಕಲ್‌ನಲ್ಲಿ ಬರುವ ಹಿರಿಯ ತರಗತಿಯ ಒಬ್ಬ ಹುಡುಗ ಮತ್ತು ಹುಡುಗಿಯನ್ನು ಗುರುತಿಸುವುದು. ಅವರ ತರಗತಿಯ ಶಿಕ್ಷಕರ ಅನುಮತಿ ಪಡೆದು ವಿದ್ಯಾರ್ಥಿಯಿಂದ ಈ ಮುಂದಿನ ಚಟುವಟಿಕೆಯನ್ನು ಮಾಡಿಸುವುದು.

### ಸೂಚನೆಗಳು

1. ಹಿರಿಯ ತರಗತಿಯ ಆಯ್ದ ವಿದ್ಯಾರ್ಥಿಗಳನ್ನು ತರಗತಿಗೆ ಕರೆದು ಅವರು ತಮ್ಮ ಸೈಕಲ್ ಬಗ್ಗೆ ಮಾತನಾಡಲು ಹೇಳುವುದು.
2. ಸೈಕಲ್‌ನ ವಿವಿಧ ಭಾಗಗಳ ಬಗ್ಗೆ ವಿವರಿಸಲು ಅವರಿಗೆ ತಿಳಿಸುವುದು. ಒಂದು ವೇಳೆ ಸೈಕಲ್‌ನ ಚಕ್ರ ಪಂಕ್ಚರ್ ಆದರೆ ಏನು ಮಾಡುತ್ತಾರೆ?
3. ಸೈಕಲ್ ಬಳಸಿ ಬೇರೆ ಎಲ್ಲೆಲ್ಲಿಗೆ ಹೋಗುತ್ತಾರೆ? ಎಂಬುದರ ಬಗ್ಗೆಯೂ ಮಾತನಾಡಲು ಹೇಳುವುದು.
4. ಮಕ್ಕಳಿಗೆ ಪ್ರಶ್ನೆಗಳನ್ನು ಕೇಳಲು ಪ್ರೋತ್ಸಾಹಿಸುವುದು.
5. ಹಿರಿಯ ತರಗತಿಯ ವಿದ್ಯಾರ್ಥಿಗಳಿಗೆ ತಮ್ಮ ಅನುಭವ ಮತ್ತು ಜ್ಞಾನವನ್ನು ಹಂಚಿಕೊಂಡಿದ್ದಕ್ಕೆ ಧನ್ಯವಾದಗಳನ್ನು ತಿಳಿಸುವುದು.





Scanned with CamScanner

## ಕಲಿಕಾ ಫಲಿತಗಳು

ಮಕ್ಕಳು "ಒಂದು ನೀಲಿ ಬಸ್ಸಲ್ಲಿ ಒಬ್ಬ ಡ್ರೈವರ್ ಹೊರಟನು", "Tring-Tring-Tring", "This is the way we pump a tyre" ಶಿಶುಗೀತೆಗಳನ್ನು ಸರಿಯಾದ ಪದಗಳು, ಉಚ್ಚಾರ ಮತ್ತು ಅಭಿನಯಗಳೊಂದಿಗೆ ಹಾಡುವ ಸಾಮರ್ಥ್ಯವನ್ನು ಹೊಂದುವುದು.

## ಕಲಿಕಾ ಸಾಮಗ್ರಿಗಳು

ಸಚಿತ್ರ ವಿವರಣೆ ಇರುವ ಶಿಶುಗೀತೆಗಳ ಮುದ್ರಿತ ಪ್ರತಿ.

## ಶಿಕ್ಷಕರ ಪೂರ್ವಸಿದ್ಧತೆ

ಶಿಶುಗೀತೆ ಮತ್ತು ಅದಕ್ಕನುಗುಣವಾದ ಅಭಿನಯದ ಬಗ್ಗೆ ಅಭ್ಯಾಸ ಮಾಡಿಕೊಳ್ಳುವುದು.

ಗಮನಿಸಿ: ಎಲ್ಲಾ ಶಿಶುಗೀತೆಗಳನ್ನು 3–4 ಬಾರಿ ಹೇಳಿಸಬೇಕು ಹಾಗೂ 'ವಾಹನ ಮತ್ತು ಸಾರಿಗೆ' ಮುಖ್ಯ ವಿಷಯದ ತರಗತಿಯುದ್ದಕ್ಕೂ ಇದನ್ನು ಪುನರಾವರ್ತಿಸಬೇಕು.

## ಸೂಚನೆಗಳು

1. ಶಿಶುಗೀತೆಯನ್ನು ಲಯಬದ್ಧವಾಗಿ ಭಾವಾಭಿನಯದೊಂದಿಗೆ ಪೂರ್ತಿಯಾಗಿ ಮಕ್ಕಳು ಕೇಳಿಸಿಕೊಳ್ಳುವಂತೆ ಹಾಡುವುದು.
2. ಶಿಶುಗೀತೆಯ ಪ್ರತಿಯೊಂದು ಸಾಲನ್ನೂ ನೀವು ಹಾಡಿದ ಮೇಲೆ ಹಾಡುವಂತೆ ಮಕ್ಕಳಿಗೆ ಪ್ರೇರೇಪಿಸುವುದು.
3. ಶಿಶುಗೀತೆಯನ್ನು ಅಭಿನಯಿಸಿ ತೋರಿಸಿ ಮತ್ತು ಅದನ್ನು ಮಕ್ಕಳು ಅನುಸರಿಸಲು ಹೇಳುವುದು.
4. ನಿಮ್ಮ ಜೊತೆಗೆ ಅಭಿನಯ ಮಾಡುತ್ತಾ ಹಾಡಲು ತಿಳಿಸುವುದು.
5. ಮಕ್ಕಳು ಗುಂಪಿನಲ್ಲಿ ಅಥವಾ ಒಬ್ಬೊಬ್ಬರಾಗಿ ಹಾಡಲು ಪ್ರೋತ್ಸಾಹಿಸುವುದು.



Scanned with CamScanner

ಶಿಶುಗೀತೆ 1

## ಒಂದು ನೀಲಿ ಬಸ್ಸಲ್ಲಿ ಒಬ್ಬ ಡ್ರೈವರ್ ಹೊರಟನು

# ಒಂದು ನೀಲಿ ಬಸ್ಸಲ್ಲಿ ಒಬ್ಬ ಡ್ರೈವರ್ ಹೊರಟನು

ಒಂದು ನೀಲಿ ಬಸ್ಸಲ್ಲಿ ಒಬ್ಬ ಡ್ರೈವರ್ ಹೊರಟನು.
ಮುಂದೆ ಮುಂದೆ ಹೋದನು, ಒಬ್ಬ ಬಸ್ಸು ಹತ್ತಿದ, ಈಗ ಅವರು ಇಬ್ಬರು!!!!

ಎರಡು ಜನ ಬಸ್ಸಲ್ಲಿ, ಮುಂದೆ ಮುಂದೆ ಹೋದರು ಬಸ್ಸು ಮರದ ಹತ್ತಿರ,
ಇನ್ನೊಬ್ಬ ಬಂದು ಹತ್ತಿದ್ದ, ಈಗ ಅವರು ಮೂವರು!!!!

ಮೂರು ಜನ ಬಸ್ಸಲ್ಲಿ, ಮುಂದೆ ಮುಂದೆ ಹೋದರು, ಬಸ್ಸು ಅಂಗಡಿ ಹತ್ತಿರ
ಮತ್ತೊಬ್ಬ ಬಂದು ಹತ್ತಿದ್ದ, ಈಗ ಅವರು ನಾಲ್ವರು!!!!

ನಾಲ್ಕು ಜನ ಬಸ್ಸಲ್ಲಿ ನಲ್ಲಿಂಯುತ್ತಾ ಹೊರಟರು,
ಮುಂದೆ ಮುಂದೆ ಹೋದರು, ಇನ್ನೊಬ್ಬ ಬಂದು ಹತ್ತಿದ, ಈಗ ಅವರು ಐವರು!!!!

ಐದು ಜನ ಬಸ್ಸಲ್ಲಿ ಮುಂದೆ ಮುಂದೆ ಹೊರಟರು,
ಬಸ್ಸು ಈಗ ನಿಂತಿತು, ನಾಲ್ಕು ಜನ ಇಳಿದರು
ಕೊನೆಗೆ ಬಸ್ಸಲ್ಲಿ, ಡ್ರೈವರ್ ಒಬ್ಬನೇ ಉಳಿದನು!!!!






Scanned with CamScanner

# Tring-Tring-Tring

The bell on the cycle goes tring-tring-tring
tring-tring-tring, tring-tring-tring (2)
all day long

the horn on the bus goes beep-beep-beep
beep-beep-beep, beep-beep-beep (2)
up and down the town

The whistle of the tram goes coo-coo-coo,
Coo-coo-coo, coo-coo-coo (2)
All day long





Scanned with CamScanner


ಶಿಶುಗೀತೆ 3

## This is the way we pump a tyre

### This is the way we pump a tyre

This is the way we pump a tyre
We pump a tyre
And it goes

Higher higher
Puncture makes the tyre low
And it goes shh-hhh...





Scanned with CamScanner

## ಕಲಿಕಾ ಫಲಿತಗಳು

ಮಕ್ಕಳು "ರೇಸ್ ಕಾರ್ ಮತ್ತು ಸೈಕಲ್" ಕಥೆಯನ್ನು ಅರ್ಥಮಾಡಿಕೊಳ್ಳುತ್ತಾರೆ. "ಏನು? ಏಕೆ? ಹೇಗೆ? ಮತ್ತು ಯಾವಾಗ?" ಎಂಬ ಪ್ರಶ್ನೆಗಳನ್ನು ಅರ್ಥಮಾಡಿಕೊಂಡು ಉತ್ತರಿಸುತ್ತಾರೆ.

## ಶಿಕ್ಷಕರ ಪೂರ್ವಸಿದ್ಧತೆ

ಕಥೆಯನ್ನು ಮೊದಲೇ ಓದಿ ಅದನ್ನು ಸರಿಯಾಗಿ ಅರ್ಥೈಸಿಕೊಳ್ಳುವುದು ಹಾಗೂ ಕಥೆಯನ್ನು ಧ್ವನಿಯ ಏರಿಳಿತಗಳೊಂದಿಗೆ ನಿರೂಪಿಸುವುದನ್ನು ಅಭ್ಯಾಸ ಮಾಡಿಕೊಳ್ಳುವುದು.


## ಕಲಿಕಾ ಸಾಮಗ್ರಿಗಳು

ಕಥೆ ಪುಸ್ತಕ.

## ಕಥೆಯ ಸಂಕ್ಷಿಪ್ತ ರೂಪ

ಒಂದು ರೇಸ್ ಕಾರ್ ಮತ್ತು ಒಂದು ಸೈಕಲ್‌ನ ನಡುವೆ ಯಾರು ಗುರಿಯನ್ನು ಬೇಗ ಮುಟ್ಟುವರೋ ಎಂಬ ಸ್ಪರ್ಧೆ ಏರ್ಪಟ್ಟಿತು. ಅವರು ಬೆಟ್ಟದ ಮೇಲಿನಿಂದ ಕೆಳಕ್ಕೆ ತಲುಪುವ ಸ್ಪರ್ಧೆ ಮಾಡುವ ನಿರ್ಧಾರಕ್ಕೆ ಬಂದರು. "ಯಾರು ಬೆಟ್ಟದ ಬುಡವನ್ನು ಬೇಗ ತಲುಪುವರೋ ಅವರೇ ವಿಜೇತರು" ಎಂಬ ತೀರ್ಮಾನವಾಯಿತು.

ಬೆಟ್ಟವನ್ನು ಸುತ್ತಿ ಸುತ್ತಿ ಬೆಟ್ಟದ ತಳಕ್ಕೆ ತಲುಪುವ ಒಳ್ಳೆಯ ರಸ್ತೆ ಇತ್ತು. ರೇಸ್ ಕಾರ್ ಅದರ ಮೇಲೆ ಅತಿ ವೇಗವಾಗಿ ಹೊರಟಿತು. ಸುತ್ತಿ ಸುತ್ತಿ ಬರುವಾಗ ಸೈಕಲ್ ಏನಾದರೂ ಬರುತ್ತಿದೆಯೇ? ಎಂದು ತಿರುಗಿ ನೋಡಿತು. ಆದರೆ ಸೈಕಲ್‌ನ ಸುಳಿವು ಎಲ್ಲಿಯೂ ಕಾಣಿಸಲಿಲ್ಲ. ರೇಸ್ ಕಾರ್ ತನ್ನಷ್ಟಕ್ಕೆ ತಾನು ನಕ್ಕಿತು. "ಅಯ್ಯೋ ಪಾಪ ಹಳೆಯ ಸೈಕಲ್! ನಾನು ಕೆಳಗೆ ಹೋಗಿ ಅದಕ್ಕಾಗಿ ಬಹಳ ಹೊತ್ತು ಕಾಯಬೇಕೇನೋ?" ಎಂದು ಯೋಚಿಸಿತು.






Scanned with CamScanner



ಸೈಕಲ್ ಏನು ಮಾಡಿತು? ಅದು ಬೆಟ್ಟದ ಬುಡದವರೆಗೂ ನೇರವಾಗಿ ಹೋಗುವ ಕಡಿಮೆ ದೂರದ ಒಂದು ಸುಲಭವಾದ ಕಾಲು ದಾರಿಯನ್ನು ನೋಡಿಕೊಂಡಿತ್ತು. ಇದು ಸುಲಭದ ಹಾಗೂ ಹತ್ತಿರದ ದಾರಿಯಾಗಿದ್ದರಿಂದ ಕಾಲುನಡಿಗೆಯಲ್ಲಿ ಹೋಗುವ ಜನರು ಮತ್ತು ಪ್ರಾಣಿಗಳು ಇದೇ ದಾರಿಯನ್ನು ಬಳಸುತ್ತಿದ್ದರು. ಆದರೆ ಈ ದಾರಿಯನ್ನು ವೇಗದ ವಾಹನಗಳು ಅಥವಾ ಕಾರುಗಳು ಬಳಸುವಂತಿರಲಿಲ್ಲ.

ಆದ್ದರಿಂದ ರೇಸ್ ಕಾರ್ ಸುತ್ತಿ ಸುತ್ತಿ ಬರುತ್ತಿರುವಾಗ ಸೈಕಲ್ ನೇರವಾದ ದಾರಿಯಲ್ಲಿ ಬೆಟ್ಟದ ಬುಡವನ್ನು ತಲುಪಿತು.

ಬೆಟ್ಟದ ಬುಡದಲ್ಲಿ ಯಾರು ಕಾಯುತ್ತಿದ್ದರು ಎಂದು ಊಹಿಸಿ ನೋಡೋಣ!

## ಸೂಚನೆಗಳು

**ಹಂತ 1.** ಕಥೆಯ ಪರಿಚಯವನ್ನು ಮಾಡುವುದು (ವಿಷಯದ ಬಗ್ಗೆ ಚರ್ಚೆ, ಅದನ್ನು ಜೀವನದ ಅನುಭವಗಳಿಗೆ ತಾಳೆಹಾಕುವುದು. ಕಥೆ ಯಾವುದರ ಬಗ್ಗೆ ಇರಬಹುದು ಎಂಬುದರ ಬಗ್ಗೆ ಪುಸ್ತಕದ ಮುಖಪುಟ ತೋರಿಸುತ್ತಾ ಚರ್ಚಿಸುವುದು).

**ಹಂತ 2.** ಕಥೆಯನ್ನು ನಿಮ್ಮದೇ ಪದಗಳಲ್ಲಿ ಹಾವಭಾವ ಮತ್ತು ಧ್ವನಿಯ ಏರಿಳಿತಗಳನ್ನು ಉಪಯೋಗಿಸಿ ಹೇಳುವುದು.

**ಹಂತ 3.** ಕಥೆಯನ್ನು ಮತ್ತೆ ಓದುತ್ತಾ ಹೋದಂತೆ ಸಂಬಂಧಿಸಿದ ಪ್ರಶ್ನೆಗಳನ್ನು ಕೇಳುತ್ತಾ ಹೋಗುವುದು. ಮುಖ್ಯ ಪದಗಳನ್ನು ವಿವರಿಸುತ್ತಾ ಕಥೆಯಲ್ಲಿನ ಮುಖ್ಯ ಪಾತ್ರಗಳು ಹಾಗೂ ಘಟನೆಗಳ ಕಡೆಗೆ ಗಮನ ಸೆಳೆಯುವುದು. ಮಕ್ಕಳಿಗೆ ಕಥೆ ಅರ್ಥವಾಗಿದೆಯೇ? ಎಂದು ಖಚಿತಪಡಿಸಿಕೊಳ್ಳುವುದು.

**ಪ್ರತಿಧ್ವನಿ ಪ್ರಶ್ನೆಗಳಿಗೆ ಉದಾಹರಣೆಗಳು.**

- ಒಂದು ರೇಸ್ ಕಾರ್ ಮತ್ತು ಒಂದು ಸೈಕಲ್‌ನ ನಡುವೆ ಯಾರು ಗುರಿಯನ್ನು ಬೇಗ ತಲುಪುವರು ಎಂಬ ಕುರಿತು ಸ್ಪರ್ಧೆ ಏರ್ಪಟ್ಟಿತು. ಯಾರ ನಡುವೆ ಸ್ಪರ್ಧೆ ಏರ್ಪಟ್ಟಿತು?
- ಅವರು ಬೆಟ್ಟದ ಮೇಲಿನಿಂದ ಕೆಳಕ್ಕೆ ತಲುಪುವ ಸ್ಪರ್ಧೆ ಮಾಡುವ ನಿರ್ಧಾರಕ್ಕೆ ಬಂದರು. ಅವರು ಎಲ್ಲಿಂದ ಎಲ್ಲಿಯವರೆಗೆ ಸ್ಪರ್ಧೆ ಮಾಡಲು ನಿರ್ಧರಿಸಿದರು?

**ಹಂತ 4.** ಕಥೆಯ ಕೊನೆಯಲ್ಲಿ ಸರಳವಾದ ನೆನಪಿಸಿಕೊಳ್ಳುವ ಮತ್ತು ಗ್ರಹಿಕೆಯ ಪ್ರಶ್ನೆಗಳನ್ನು ಕೇಳುವುದು: ಇಂತಹ ಪ್ರಶ್ನೆಗಳ ಕೆಲವು ಉದಾಹರಣೆಗಳು ಹೀಗಿವೆ:

- ರೇಸ್ ಕಾರ್ ಯಾವ ದಾರಿಯಲ್ಲಿ ಹೋಯಿತು?
- ಸೈಕಲ್ ಯಾವ ದಾರಿಯಲ್ಲಿ ಹೋಯಿತು?

**ಹಂತ 5.** ಊಹಿಸಬಹುದಾದ ಉತ್ತರಗಳನ್ನು ಮಕ್ಕಳು ತಿಳಿಸುವ ರೀತಿಯಲ್ಲಿ ಅಥವಾ "ಹೀಗಾಗಿದ್ದರೆ ಏನಾಗುತ್ತಿತ್ತು" ಎನ್ನುವಂತಹ ಪ್ರಶ್ನೆಗಳನ್ನು ಕೇಳುತ್ತಾ ಹೋಗುವುದು. ಉದಾಹರಣೆಗೆ:

- ಸ್ಪರ್ಧೆಯಲ್ಲಿ ಗೆದ್ದವರು ಯಾರು?
- ಅಕಸ್ಮಾತ್ ಸೈಕಲ್ ಚಕ್ರ ಪಂಕ್ಚರಾಗಿದ್ದರೆ ಏನಾಗುತ್ತಿತ್ತು?

**ಹಂತ 6.** ಕಥೆಯ ಪಾತ್ರಗಳೊಂದಿಗೆ ಮಕ್ಕಳು ಸಂವೇದನೆಯನ್ನು ತೋರಲು ಅಗತ್ಯವಿರುವ ಸರಳವಾದ ಪ್ರಶ್ನೆಗಳನ್ನು ಕೇಳುವುದು. ಸ್ಪರ್ಧೆಯ ಕೊನೆಯಲ್ಲಿ ರೇಸ್ ಕಾರಿಗೆ ಏನನ್ನಿಸಿತು ಎಂದು ಯೋಚಿಸಿ?

**ಹಂತ 7.** ಮಕ್ಕಳಿಗೆ ತಮ್ಮ ಪದಗಳನ್ನು ಉಪಯೋಗಿಸಿಕೊಂಡು 2 ರಿಂದ 4 ವಾಕ್ಯಗಳಲ್ಲಿ ಕಥೆಯನ್ನು ಹೇಳಲು ನೆರವು ನೀಡುವುದು.




Scanned with CamScanner



ಚಟುವಟಿಕೆ 1

## ಸರಳ ಚಿತ್ರ ಬಿಡಿಸುವಿಕೆ



### ಕಲಿಕಾ ಸಾಮಗ್ರಿಗಳು

ಸೀಮೆಸುಣ್ಣ

### ಸೂಚನೆಗಳು

1. ಪ್ರತಿಯೊಂದು ಮಗುವಿಗೂ ಒಂದೊಂದು ಸೀಮೆಸುಣ್ಣವನ್ನು ಕೊಟ್ಟು ಕೊಠಡಿಯ ಸುತ್ತಲೂ ಇರುವ ಕಪ್ಪು ಹಲಗೆಯ ಮೇಲೆ ಅಥವಾ ನೆಲದ ಮೇಲೆ ತಮಗೆ ಇಷ್ಟ ಬಂದ ಚಿತ್ರವನ್ನು ಬಿಡಿಸಲು ಹೇಳುವುದು.
2. ಪ್ರತಿಯೊಂದು ಮಗುವಿನ ಬಳಿಯೂ ಹೋಗಿ ಅವರು ಏನು ಚಿತ್ರ ಬಿಡಿಸಿದ್ದಾರೆ? ಎಂದು ಕೇಳುವುದು. ಮಕ್ಕಳಲ್ಲಿ ಸಾಕ್ಷರತೆಯನ್ನು ಬೆಳೆಸುವ ಆರಂಭಿಕ ಹಂತದಲ್ಲಿ ಇದು ಮುಖ್ಯ ಹೆಜ್ಜೆಯಾಗಿರುತ್ತದೆ.
3. ಮಕ್ಕಳಿಗೆ ಈ ಪ್ರಕ್ರಿಯೆಯಲ್ಲಿ ಏನಾದರೂ ಸಹಾಯ ಬೇಕಿದ್ದರೆ ಮಾಡಿ. ಆದರೆ ಚಿತ್ರವನ್ನು ಇದೇ ರೀತಿ ಬಿಡಿಸಿ ಎಂದು ಒತ್ತಡ ಹಾಕಬೇಡಿ.
4. ಅವರು ಚಿತ್ರ ಬಿಡಿಸುವುದನ್ನು ಮುಗಿಸಿದ ಮೇಲೆ ಆ ಜಾಗವನ್ನು ಸ್ವಚ್ಛ ಮಾಡಲು ಹೇಳುವುದು.

ಚಟುವಟಿಕೆ 2

## ಹಿಟ್ಟಿನಿಂದ ಆಕೃತಿಗಳನ್ನು ಮಾಡುವುದು

### ಕಲಿಕಾ ಸಾಮಗ್ರಿಗಳು

ಗೋಧಿ ಅಥವಾ ಮೈದಾ ಹಿಟ್ಟು, ನೀರು, ಅಡುಗೆಗೆ ಬಳಸುವ ಬಣ್ಣ ಮತ್ತು ಅಂಟು.

### ಶಿಕ್ಷಕರ ಪೂರ್ವಸಿದ್ಧತೆ

ಗೋಧಿ ಅಥವಾ ಮೈದಾ ಹಿಟ್ಟು, ನೀರು, ಅಡಿಗೆಗೆ ಬಳಸುವ ಬಣ್ಣ ಮತ್ತು ಅಂಟುಗಳನ್ನು ತೆಗೆದುಕೊಳ್ಳುವುದು. ಹಿಟ್ಟನ್ನು 3 ಅಥವಾ 4 ಭಾಗಗಳನ್ನಾಗಿ ಮಾಡಿ ಪ್ರತಿಯೊಂದು ಭಾಗಕ್ಕೂ ಬೇರೆ ಬೇರೆ ಬಣ್ಣಗಳನ್ನು ಬೆರೆಸುವುದು. ಚಪಾತಿ ಮಾಡುವ ಹದಕ್ಕೆ ಹಿಟ್ಟನ್ನು ಕಲೆಸಿ ಬೇರೆ ಬೇರೆ ಬಣ್ಣದ ಹಿಟ್ಟನ್ನು ಮಾಡಿಕೊಳ್ಳುವುದು.

### ಸೂಚನೆಗಳು


1. ಮಕ್ಕಳನ್ನು ಬೇರೆ ಬೇರೆ ಗುಂಪುಗಳಾಗಿ ವಿಂಗಡಿಸಿ, ಪ್ರತಿಯೊಂದು ಗುಂಪಿಗೂ ಬೇರೆ ಬಣ್ಣದ ಹಿಟ್ಟನ್ನು ಕೊಟ್ಟು ವಿವಿಧ ವಾಹನಗಳ ಆಕಾರವನ್ನು ಮಾಡಲು ಹೇಳುವುದು.
2. ಪ್ರತಿಯೊಂದು ಗುಂಪಿಗೂ ಅವರು ತಯಾರಿಸುವ ವಾಹನಕ್ಕೆ ತಕ್ಕಂತೆ, ಉದಾಹರಣೆಗೆ: ಬಸ್ಸು, ರೈಲು ಮುಂತಾದವುಗಳ ಆಕಾರ ಮಾಡಲು ವೈಯಕ್ತಿಕ ಸಹಾಯ ನೀಡಬೇಕಾಗುತ್ತದೆ.
3. ಮಕ್ಕಳ ವಯಸ್ಸನ್ನು ಗಣನೆಗೆ ತೆಗೆದುಕೊಂಡರೆ ಅವರು ಹಿಟ್ಟನ್ನು ಚಪ್ಪಟೆಯಾಗಿ ತಟ್ಟಿ ಅದರ ಮೇಲೆ ಕಡ್ಡಿಯಿಂದ ವಾಹನಗಳ ಚಿತ್ರ ಬಿಡಿಸಬಹುದು.
4. ಅವರು ಬಳಸಿದ ಜಾಗವನ್ನು ಮಕ್ಕಳಿಗೆ ಸ್ವಚ್ಛ ಮಾಡಲು ಹೇಳಿ ಉಳಿದ ಪದಾರ್ಥಗಳನ್ನು ಅವುಗಳ ಜಾಗದಲ್ಲಿರಿಸುವಂತೆ ಹೇಳುವುದು.
5. ನಂತರ ತಮ್ಮ ಕೈಗಳನ್ನು ಸೋಪಿನಿಂದ ತೊಳೆದುಕೊಳ್ಳಲು ಹೇಳುವುದು.



Scanned with CamScanner

### ಚಟುವಟಿಕೆ 3

## ಹೆಬ್ಬೆರಳಿನ ಅಚ್ಚನ್ನು ಒತ್ತುವ ಮೂಲಕ ವಿವಿಧ ಆಕಾರಗಳನ್ನು ಮಾಡುವುದು



### ಕಲಿಕಾ ಸಾಮಗ್ರಿಗಳು

ಬಿಳಿಯ ಹಾಳೆ, ನೀರಿನಲ್ಲಿ ಕರಗುವ ಬಣ್ಣಗಳು, ನೀರು, ವಾಹನದ ಚಿತ್ರ WS6.1.2.

### ಸೂಚನೆಗಳು

1. ಮಕ್ಕಳನ್ನು 3 ಅಥವಾ 4 ಗುಂಪುಗಳಾಗಿ ವಿಂಗಡಿಸುವುದು.
2. ಸರಳವಾದ ವಾಹನಗಳ ಒಂದೊಂದು ಆಕಾರವನ್ನು ಪ್ರತಿಯೊಂದು ಮಗುವಿಗೂ ಕೊಡುವುದು.
3. 2 ಅಥವಾ 3 ಬಣ್ಣಗಳನ್ನು ಒಂದು ತಟ್ಟೆಯಲ್ಲಿರಿಸಿ ಪ್ರತಿಯೊಂದು ಗುಂಪಿಗೂ ಕೊಡುವುದು.
4. ವಾಹನದ ಆಕಾರದ ಒಳಗೆ ತಮ್ಮ ಹೆಬ್ಬೆರಳಿನ ಅಚ್ಚನ್ನು ಒತ್ತಲು ಹೇಳುವುದು.
5. ಎಲ್ಲಾ ಮಕ್ಕಳಿಗೂ ಹೇಗೆ ಮಾಡುವುದೆಂದು ತೋರಿಸಿ, ಅದನ್ನು ಪ್ರದರ್ಶನಕ್ಕೆ ಮೀಸಲಿರಿಸಿದ ಒಂದು ಮೂಲೆಯಲ್ಲಿ ಅವರಿಗೆ ನೋಡಲು ಇಡುವುದು.
6. ಅಗತ್ಯವಿದ್ದಲ್ಲಿ ಮಕ್ಕಳಿಗೆ ನೆರವು ನೀಡುವುದು.
7. ಅವರ ಹೆಸರುಗಳು ಮತ್ತು ದಿನಾಂಕವನ್ನು ಅವರಿಗೆ ಕೊಟ್ಟ ಹಾಳೆಗಳ ಮೇಲೆ ಬರೆದು ಪ್ರದರ್ಶನದ ಮೂಲೆಯಲ್ಲಿ ಅವರು ಮಾಡಿದ ಕೆಲಸವನ್ನು ಪ್ರದರ್ಶಿಸುವುದು.
8. ಚಟುವಟಿಕೆಯ ನಂತರ ಜಾಗವನ್ನು ಸ್ವಚ್ಛಗೊಳಿಸಿ, ಕೈಗಳನ್ನು ಸೋಪಿನಿಂದ ತೊಳೆದುಕೊಳ್ಳಲು ಮಕ್ಕಳಿಗೆ ಹೇಳುವುದು.

### ಚಟುವಟಿಕೆ 4

## ರಂಗೋಲಿಯ ಚಟುವಟಿಕೆ

**ಕಲಿಕಾ ಸಾಮಗ್ರಿಗಳು:** ಸೀಮೆಸುಣ್ಣ ಮತ್ತು ಬಣ್ಣ ಮಿಶ್ರಿತ ರಂಗೋಲಿ ಪುಡಿ.

**ಶಿಕ್ಷಕರ ಪೂರ್ವಸಿದ್ಧತೆ:** ಅಗತ್ಯವಿರುವ ವಸ್ತುಗಳನ್ನು ಸಿದ್ಧ ಮಾಡಿಟ್ಟುಕೊಳ್ಳುವುದು. ಇದಕ್ಕೆ ಪರ್ಯಾಯವಾಗಿ ಮಕ್ಕಳಿಗೆ ಹೊರಗಡೆಯಿಂದ ಎಲೆಗಳು, ಪಕಳೆಗಳು, ಕಡ್ಡಿಗಳು, ಕಲ್ಲುಗಳನ್ನು ಆರಿಸಿ ತರಲು ಹೇಳುವುದು ಮತ್ತು ಈ ಚಟುವಟಿಕೆಯನ್ನು ಮಾಡಲು ತಿಳಿಸುವುದು.

### ಸೂಚನೆಗಳು

1. ಮಕ್ಕಳಿಗೆ ಎದಿರು ಬದಿರಾಗಿ ನಾಲ್ಕು ಸಮಾನಾಂತರ ಸಾಲುಗಳಲ್ಲಿ ಕುಳಿತುಕೊಳ್ಳಲು ಹೇಳುವುದು.
2. ನೆಲದ ಮೇಲೆ ವಿವಿಧ ವಾಹನಗಳ ಆಕಾರಗಳನ್ನು ಅಂದರೆ ಕಾರು, ರೈಲು, ಆಟೋ ಮುಂತಾದವುಗಳನ್ನು ಬರೆಯುವುದು.
3. ಮಕ್ಕಳಿಗೆ ತಮ್ಮಲ್ಲಿ ಹಂಚಿಕೊಳ್ಳಲು ಬಣ್ಣದ ರಂಗೋಲಿ ಪುಡಿಯನ್ನು ಬಟ್ಟಲುಗಳಲ್ಲಿ ಕೊಡುವುದು.
4. ಬರೆದ ಆಕಾರಗಳಲ್ಲಿ ಅದನ್ನು ತುಂಬಲು ಹೇಳುವುದು.
5. ತಾವು ಬಣ್ಣ ತುಂಬಿದ ಆಕಾರಗಳನ್ನು ಗುರುತಿಸಲು ಮಕ್ಕಳಿಗೆ ಹೇಳುವುದು.
6. ನಂತರ ಅವರಿಗೆ ಆ ಜಾಗವನ್ನು ಸ್ವಚ್ಛಗೊಳಿಸಲು ಹೇಳುವುದು.




Scanned with CamScanner

ಚಟುವಟಿಕೆ 1

## ದೂರವನ್ನು ಊಹಿಸಿ–ದೂರಕ್ಕನುಗುಣವಾಗಿ ಕೈ ಎತ್ತಿ ಮುಂದಕ್ಕೆ ಅಥವಾ ಹಿಂದಕ್ಕೆ ಹೋಗುವುದು

### ಕಲಿಕಾ ಸಾಮಗ್ರಿಗಳು

ತಟ್ಟೆ ಮತ್ತು ಚಮಚ ಅಥವಾ ಖಂಜರ (ಸದ್ದು ಮಾಡಲು ಉಪಯೋಗಿಸುವ ಯಾವುದಾದರೂ ವಸ್ತು).



### ಸೂಚನೆಗಳು

1. ತಟ್ಟೆ ಮತ್ತು ಚಮಚ ಅಥವಾ ಖಂಜೀರಗಳೊಡನೆ ತರಗತಿಯ ಹೊರಗೆ ನಿಂತುಕೊಳ್ಳುವುದು.
2. ಮಕ್ಕಳು ನಿಮ್ಮಿಂದ ದೂರದಲ್ಲಿ ಗೋಡೆಯ ಕಡೆ ಮುಖ ಮಾಡಿ ಸಾಲಿನಲ್ಲಿ ನಿಂತುಕೊಳ್ಳಲಿ.
3. ಮೂರು ಮಕ್ಕಳನ್ನು ತೀರ್ಪುಗಾರರನ್ನಾಗಿ ಮಾಡಿ ಮಕ್ಕಳು ಸರಿಯಾಗಿ ಆಟವಾಡುತ್ತಿದ್ದಾರೆಯೇ ಎಂದು ಗಮನಿಸಲು ಹೇಳುವುದು.
4. ಮಕ್ಕಳಿಗೆ ಮುಂದೆ ಹೇಳಿರುವುದನ್ನು ಮಾಡಿ ತೋರಿಸುವುದು– ನೀವು ನಿಮ್ಮ ಜಾಗದಿಂದ ತಟ್ಟೆ ಮತ್ತು ಲೋಟ ಅಥವಾ ಖಂಜೀರವನ್ನು ಬಡಿಯುತ್ತಾ ಹತ್ತಿರ ಹೋದರೆ ಶಬ್ದವು ಜೋರಾಗಿ ಕೇಳುತ್ತದೆ ಏಕೆಂದರೆ ನೀವು ಮಕ್ಕಳ ಹತ್ತಿರಕ್ಕೆ ಹೋಗುತ್ತಿರುವಿರಿ. ನೀವು ದೂರ ಹೋದರೆ ಶಬ್ದವು ಕಡಿಮೆಯಾಗುತ್ತದೆ. ಏಕೆಂದರೆ ದೂರವು ಹೆಚ್ಚಾಗುತ್ತದೆ. ಮಕ್ಕಳು ಶಬ್ದ ಜೋರಾಗಿದ್ದಕ್ಕೆ ಅಥವಾ ಕಡಿಮೆಯಾಗಿದ್ದಕ್ಕೆ ಅನುಸಾರವಾಗಿ ಹಿಂದೆ ಅಥವಾ ಮುಂದೆ ಚಲಿಸಲು ಸೂಚನೆ ನೀಡಬೇಕು. ಮಕ್ಕಳು ಶಬ್ದ ಕೇಳಿಸಿಕೊಂಡು ಅದು ಜೋರಾಗಿ ಕೇಳುತ್ತಿದೆಯಾ? ಅಥವಾ ಕಡಿಮೆಯಾಗಿದೆಯಾ? ಎನ್ನುವುದನ್ನು ಆಲಿಸಿ ಹಿಂದೆ ಅಥವಾ ಮುಂದೆ ಚಲಿಸಬೇಕು.
5. ಮಕ್ಕಳು ಹಿಂದೆ–ಮುಂದೆ ಚಲಿಸುವುದನ್ನು ಅಭ್ಯಾಸ ಮಾಡಿದ ಮೇಲೆ, ಚಟುವಟಿಕೆಯನ್ನು ಬದಲಿಸುವುದು. ಶಬ್ದವು ಜೋರಾಗಿ ಕೇಳಿಸಿದರೆ ಮಕ್ಕಳು ತಮ್ಮ ಬಲಗೈಯನ್ನು ಮೇಲೆತ್ತಬೇಕು. ಆಗ ಶಿಕ್ಷಕರು ಹತ್ತಿರ ಬರುತ್ತಿರುತ್ತಾರೆ. ಅವರು ದೂರ ಹೋಗುತ್ತಿದ್ದರೆ ಅಥವಾ ಶಬ್ದವು ಕಡಿಮೆಯಾದರೆ ಮಕ್ಕಳು ತಮ್ಮ ಎಡಗೈಯನ್ನು ಮೇಲೆತ್ತಬೇಕು. ಶಿಕ್ಷಕರು ನಿಂತಲ್ಲಿಯೇ ನಿಂತಿದ್ದರೆ/ ಶಬ್ದ ಮಾಡದಿದ್ದರೆ ಮಕ್ಕಳು ಏನೂ ಮಾಡಬಾರದು.
6. ತೀರ್ಪುಗಾರರಾದ ಮಕ್ಕಳು ಆಟಗಾರರು ಯಾರಾದರೂ ತಪ್ಪಾಗಿ ಚಲಿಸಿದರೆ ಅಥವಾ ಕೈಯನ್ನು ಮೇಲೆತ್ತಿದರೆ ಅವರು ಔಟಾದರು ಎಂದು ಹೇಳುವುದು ಹಾಗೂ ಅವರನ್ನು ಆಟದಿಂದ ಹೊರಗಿರಿಸುವುದು.
7. ಈ ಚಟುವಟಿಕೆಯನ್ನು ಕೆಲವು ಬಾರಿ ಅಭ್ಯಾಸ ಮಾಡಿದರೆ ಖುಷಿ ಕೊಡುತ್ತದೆ. ಮಕ್ಕಳು ಈ ಚಟುವಟಿಕೆಗೆ ಹೊಂದಿಕೊಳ್ಳುತ್ತಿದ್ದಂತೆ ಬೇರೆ ಬೇರೆ ಚಲನೆಗಳಿಗೆ ಬದಲಾಯಿಸಿಕೊಳ್ಳಬಹುದು.

ಚಟುವಟಿಕೆ 2

## ವಿಮಾನದಂತೆ ಹಾರೋಣ

### ಸೂಚನೆಗಳು


1. ಮಕ್ಕಳನ್ನು ವೃತ್ತಾಕಾರದಲ್ಲಿ ನಿಲ್ಲುವಂತೆ ಹೇಳಿ, ಅವರ ಕೈಗಳನ್ನು ವಿಮಾನದ ರೆಕ್ಕೆಗಳಂತೆ ಅಗಲಿಸಲು ಹೇಳುವುದು.
2. ನೀವು "ಮೇಲೆ ಹಾರಿ..." ಎಂದು ಸೂಚನೆ ಕೊಟ್ಟಾಗ ಮಕ್ಕಳು ತಮ್ಮ ಕೈಗಳನ್ನು ಮೇಲಕ್ಕೆತ್ತಿ ವೃತ್ತದಲ್ಲಿ ವಿಮಾನದಂತೆ ಶಬ್ದ ಮಾಡುತ್ತಾ ಸುತ್ತಲು ಪ್ರಾರಂಭಿಸುವುದು.
3. ನಂತರ ಸೂಚನೆ ನೀಡಿದಾಗ ಕೈ ಇಳಿಸುವುದು.



Scanned with CamScanner

ಚಟುವಟಿಕೆ 3

## ವಿಮಾನವನ್ನು ಹಾರಿಸುವುದು



### ಕಲಿಕಾ ಸಾಮಗ್ರಿಗಳು

ಕಾಗದದ ವಿಮಾನ

### ಶಿಕ್ಷಕರ ಪೂರ್ವಸಿದ್ಧತೆ

ಕಾಗದದ ವಿಮಾನಗಳನ್ನು ಮೊದಲೇ ಸಿದ್ಧ ಮಾಡಿಟ್ಟುಕೊಳ್ಳಬೇಕಾಗುತ್ತದೆ. ಪೋಷಕರ ಮತ್ತು ಇತರ ಹಿರಿಯ ತರಗತಿಯ ಮಕ್ಕಳ ಸಹಾಯವನ್ನು ಇದಕ್ಕೆ ತೆಗೆದುಕೊಳ್ಳಬಹುದು.

### ಸೂಚನೆಗಳು

1. ಪ್ರತಿಯೊಂದು ಮಗುವಿಗೂ ಒಂದು ಕಾಗದದ ವಿಮಾನ ಕೊಡುವುದು.
2. ಒಂದು ದೊಡ್ಡ ಕಾಗದದ ಡಬ್ಬವನ್ನಿಟ್ಟು ಮಕ್ಕಳಿಗೆ ತಮ್ಮ ವಿಮಾನಗಳನ್ನು ಡಬ್ಬದೊಳಗೆ ಬೀಳುವಂತೆ ಹಾರಿಸಲು ಹೇಳುವುದು.
3. ಅವರಿಗೆ ನೀವೀಗ ವಿಮಾನ ಚಾಲಕರು. ವಿಮಾನವನ್ನು ಹಾರಿಸುತ್ತಿದ್ದೀರಿ ಎಂದು ತಿಳಿಸುವುದು.

---

ಚಟುವಟಿಕೆ 4

## ಒಗಟುಗಳು

### ಸೂಚನೆಗಳು

1. ವಾಹನಗಳ ಬಗ್ಗೆ ಕೆಲವು ಒಗಟುಗಳನ್ನು ರಚಿಸಿ ಹೇಳುವುದು.
2. ಮಕ್ಕಳಿಗೆ ವಾಹನಗಳನ್ನು ಊಹಿಸಲು ಪ್ರೋತ್ಸಾಹಿಸುವುದು.
3. ಉದಾಹರಣೆಗೆ–"ನನಗೆ ಎರಡು ಚಕ್ರಗಳಿವೆ. ನಾನು ಇಬ್ಬರನ್ನು ಕರೆದೊಯ್ಯುವೆ, ನನಗೆ ಪೆಟ್ರೋಲ್ ಅಥವಾ ಯಾವುದೇ ಇಂಧನ ಬೇಕಿಲ್ಲ. ನಾನು ಯಾರು?"



Scanned with CamScanner

### ಚಟುವಟಿಕೆ 1

## ದಾಳದ ಆಟ



### ಕಲಿಕಾ ಸಾಮಗ್ರಿಗಳು

ದಾಳ ಮತ್ತು ಸೀಮೆಸುಣ್ಣ.

### ಶಿಕ್ಷಕರ ಪೂರ್ವಸಿದ್ಧತೆ

ಇದೊಂದು ಹೊರಾಂಗಣ ಆಟ. ಆಟದ ಬಯಲಿನಲ್ಲಿ ಮೂರು ಸಮಾನಾಂತರ ಗೆರೆಗಳನ್ನು ಎಳೆದು ಅವುಗಳಲ್ಲಿ ದೊಡ್ಡ ಚೌಕಗಳನ್ನು ಗುರುತು ಮಾಡುವುದು. ಪ್ರತಿಯೊಂದು ಟ್ರ್ಯಾಕ್‌ನಲ್ಲೂ ಇಪ್ಪತ್ತಕ್ಕಿಂತ ಹೆಚ್ಚು ಚೌಕಗಳು ಇರಬಾರದು.

### ಸೂಚನೆಗಳು

1. ನೀವು ಆಟದ ಬಯಲಿನಲ್ಲಿ ಬರೆದ ಚೌಕಗಳ ಬಳಿ ಮಕ್ಕಳನ್ನು ಕುಳಿತುಕೊಳ್ಳಲು ತಿಳಿಸುವುದು.
2. ಒಮ್ಮೆಗೆ ಮೂರು ಮಕ್ಕಳಿಗೆ ಆಡುವುದಕ್ಕೆ ಹೇಳುವುದು.
3. ಉಳಿದ ಮಕ್ಕಳು ಆಟವನ್ನು ನೋಡುವುದು.
4. ಮಕ್ಕಳು ತಮ್ಮ ಸರತಿಯಂತೆ ದಾಳವನ್ನು ಹಾಕುವುದು, ಅದರಲ್ಲಿ ಬಂದ ಸಂಖ್ಯೆಯಷ್ಟು ಚೌಕಗಳನ್ನು ದಾಟುವುದು.
5. ಮೂರು ಮಕ್ಕಳೂ ಮೊದಲ ಸುತ್ತು ಮುಗಿಸಿದ ನಂತರ ಎರಡನೇ ಸುತ್ತು ಆಡಿಸುವುದು.
6. ಯಾವ ಮಗು ಕೊನೆಯ ಚೌಕವನ್ನು ಮೊದಲು ತಲುಪುತ್ತದೆಯೋ ಅದು ಗೆದ್ದ ಹಾಗೆ.
7. ಮೂರು ಮಕ್ಕಳು ಮುಗಿಸುವವರೆಗೂ ಆಡಿಸುವುದು.
8. ನಂತರ ಬೇರೆ ಮೂರು ಮಕ್ಕಳಿಗೆ ಅವಕಾಶ ಕೊಡುವುದು.

### ಚಟುವಟಿಕೆ 2

## ಚೆಂಡು ದಾಟಿಸುವುದು

**ಕಲಿಕಾ ಸಾಮಗ್ರಿಗಳು:** ಚೆಂಡು

### ಸೂಚನೆಗಳು


1. ಮಕ್ಕಳನ್ನು ವೃತ್ತಾಕಾರದಲ್ಲಿ ನಿಲ್ಲುವಂತೆ ಹೇಳುವುದು.
2. ಚೆಂಡನ್ನು ದಾಟಿಸುವ ಆಟವನ್ನು ಪ್ರಾರಂಭಿಸಲು ಹೇಳುವುದು.
3. ಸಂಗೀತ ನಿಂತಾಗ ಯಾವ ಮಗುವಿನ ಬಳಿ ಚೆಂಡು ಇರುತ್ತದೆಯೋ, ಆ ಮಗುವಿಗೆ ರಸ್ತೆಯ ಮೇಲೆ ಚಲಿಸುವ ವಾಹನವನ್ನು ಹೆಸರಿಸಿ ಅದು ಹೇಗೆ ಚಲಿಸುತ್ತದೆ ಎಂದು ಶಬ್ದ ಮಾಡುತ್ತಾ ಅಭಿನಯಿಸಲು ಹೇಳುವುದು.
4. ಇದೇ ರೀತಿ ನೀರು, ರೈಲು ಕಂಬಿ ಮತ್ತು ಆಕಾಶದಲ್ಲಿ ಚಲಿಸುವ ವಾಹನಗಳನ್ನು ಹೆಸರಿಸುವಂತೆ ಹೇಳುವುದು.
5. ಎಲ್ಲಾ ಮಕ್ಕಳಿಗೂ ಅವಕಾಶ ಸಿಗುವ ಹಾಗೆ ನೋಡಿಕೊಳ್ಳುವುದು.
6. ಒಂದು ಸಲ ಪರಿಚಿತವಾದ ಮೇಲೆ ಮಕ್ಕಳಿಗೆ ಈ ಚಟುವಟಿಕೆಯನ್ನು ಅವರೇ ನಡೆಸುವಂತೆ ಹೇಳುವುದು. ಅಗತ್ಯವಿದ್ದಾಗ ಸಹಾಯ ಮಾಡುವುದು.



Scanned with CamScanner

ಚಟುವಟಿಕೆ 3

## ಕುಂಟೆ ಬಿಲ್ಲೆ



### ಕಲಿಕಾ ಸಾಮಗ್ರಿಗಳು

ಚಪ್ಪಟೆಯಾದ ಕಲ್ಲುಗಳು

### ಸೂಚನೆಗಳು

1. ಕುಂಟೆ ಬಿಲ್ಲೆ ಮನೆಯನ್ನು ನೆಲದ ಮೇಲೆ ಬರೆಯುವುದು. (ಎಷ್ಟು ಗುಂಪುಗಳಿವೆಯೋ ಅಷ್ಟು ಬರೆಯಬೇಕಾಗುತ್ತದೆ).
2. ಆಟವನ್ನು ಹೇಗೆ ಆಡುವುದು ಎಂದು ತೋರಿಸಿ ಕೊಡುವುದು.
3. ಮಕ್ಕಳನ್ನು ಗುಂಪುಗಳಾಗಿ ವಿಂಗಡಿಸಿ ಆಟವಾಡಲು ಬಿಡುವುದು.
4. ಎಲ್ಲಾ ಗುಂಪುಗಳ ಬಳಿ ಹೋಗುತ್ತಾ ಅಗತ್ಯವಿದ್ದಲ್ಲಿ ಸಹಾಯ ಮಾಡುವುದು.

ಚಟುವಟಿಕೆ 4

## ಹಗ್ಗದಾಟ

### ಕಲಿಕಾ ಸಾಮಗ್ರಿಗಳು

ಆಟದ ಹಗ್ಗಗಳು

### ಸೂಚನೆಗಳು

1. ಹಗ್ಗದ ಜೊತೆ ಹೇಗೆ ಆಡುವುದೆಂದು ಮಕ್ಕಳಿಗೆ ತೋರಿಸಿಕೊಡುವುದು.
2. ಅಗತ್ಯವಿದ್ದಲ್ಲಿ ಹಗ್ಗಗಳ ಉದ್ದವನ್ನು ಕಡಿಮೆ ಮಾಡುವುದು.
3. ಮಕ್ಕಳನ್ನು ಸಣ್ಣ ಗುಂಪುಗಳಾಗಿ ವಿಂಗಡಿಸಿ ಅವರಿಗೆ ಹಗ್ಗಗಳನ್ನು ಕೊಟ್ಟು ಆಟವಾಡಲು ಬಿಡುವುದು.



Scanned with CamScanner

## ವಿವಿಧ ಬಗೆಯ ಸಾರಿಗೆ ವಾಹನಗಳು

1. Drive your car
2. Fly your plane
3. Row your boat

1. Drive your car
2. Fly your plane
3. Row your boat

1. Drive your car
2. Fly your plane
3. Row your boat

1. Ride your bicycle
2. Ride a horse

1. Ride your bicycle
2. Ride a horse

1. Ride your bicycle
2. Ride a horse

- Say
- gesture
- model

1. Drive your car
2. Fly your plane
3. Row your boat
4. Ride your bicycle
5. Ride a horse

1. Ride your bicycle
2. Ride a horse
3. Drive your car
4. Row your boat
5. Fly your plane



Scanned with CamScanner

## ವಾಹನಗಳು ಮತ್ತು ಸಾರಿಗೆ

# ಸಂಚಾರ ನಿಯಮಗಳು



Scanned with CamScanner

# ಕಲಿಕಾ ಫಲಿತಗಳು

## ಉಪವಿಷಯ 6.3: ಸಂಚಾರ ನಿಯಮಗಳು

### 3–4 ವರ್ಷಗಳು

1. ರಸ್ತೆ ಮತ್ತು ಪಾದಚಾರಿ ಮಾರ್ಗದ ಉಪಯೋಗಗಳ ನಡುವಿನ ವ್ಯತ್ಯಾಸವನ್ನು ತಿಳಿಯುವುದು.
2. ಪಾದಚಾರಿ ಮಾರ್ಗವನ್ನು ಬಳಸುವ ನಿಯಮಗಳನ್ನು ತಿಳಿಯುವುದು.
3. ಪರಿಚಿತವಿರುವ ಸಂಚಾರಿ ನಿಯಮದ ಸಂಕೇತಗಳು(ಜೀಬ್ರಾ ಕ್ರಾಸಿಂಗ್, ವೇಗ ನಿಯಂತ್ರಕಗಳು, ಶಾಲಾ ಪ್ರದೇಶ), ಶಬ್ದಗಳು (ಹಾರ್ನ್, ಪೋಲೀಸ್ ಸೀಟಿ) ಇವುಗಳನ್ನು ಗುರುತಿಸುವುದು ಮತ್ತು ಅವುಗಳು ಏನನ್ನು ಸೂಚಿಸುತ್ತವೆ ಎಂದು ತಿಳಿದುಕೊಳ್ಳುವುದು.
4. ಪಾದಚಾರಿ ಮಾರ್ಗಗಳಿಲ್ಲದ ಸಣ್ಣ ಗಲ್ಲಿಗಳನ್ನು ಉಪಯೋಗಿಸುವಾಗ ಪಾದಚಾರಿಗಳ ಸುರಕ್ಷತಾ ನಿಯಮಗಳನ್ನು ತಿಳಿದುಕೊಳ್ಳುವುದು–(ಒಂದು ಬದಿಯಲ್ಲಿ ನಡೆಯುವುದು. ಹಾರ್ನ್‌ಗಳ ಮತ್ತು ಬೆಲ್ಲುಗಳ ಶಬ್ದಕ್ಕೆ ಎಚ್ಚರದಿಂದಿರುವುದು).

### 4–5 ವರ್ಷಗಳು

1. ಪಾದಚಾರಿ ಮಾರ್ಗವನ್ನು ಬಳಸುವುದರ ಉಪಯುಕ್ತತೆಯನ್ನು ಮತ್ತು ರಸ್ತೆಯನ್ನು ದಾಟುವಾಗ ಜೀಬ್ರಾ–ಕ್ರಾಸಿಂಗ್ ಬಳಸುವುದು ಹಾಗೂ ರಸ್ತೆ ದಾಟುವ ಮೊದಲು ಎಡ–ಬಲಕ್ಕೆ ನೋಡುವುದು ಮೊದಲಾದ ರಸ್ತೆ ಸುರಕ್ಷತಾ ನಿಯಮಗಳನ್ನು ಪಾಲಿಸುವುದರ ಉಪಯುಕ್ತತೆಯನ್ನು ಅರ್ಥ ಮಾಡಿಕೊಳ್ಳುವರು.
2. ಪರಿಚಿತವಿರುವ ಸಂಚಾರ ನಿಯಮದ ಸಂಕೇತಗಳು (ಜೀಬ್ರಾ–ಕ್ರಾಸಿಂಗ್, ವೇಗ ನಿಯಂತ್ರಕಗಳು, ಪ್ರವೇಶವಿಲ್ಲ, ಯೂ–ಟರ್ನ್ ಇಲ್ಲ, ಶಾಲಾ ಪ್ರದೇಶ ಮತ್ತು ವಾಹನ ನಿಲುಗಡೆಯಿಲ್ಲ) ಮತ್ತು ಶಬ್ದಗಳು (ಹಾರ್ನ್, ಸೈಕಲ್ ಬೆಲ್ಲು ಮತ್ತು ಪೋಲೀಸ್ ಸೀಟಿ) ಇವುಗಳನ್ನು ಗುರುತಿಸುವುದು ಮತ್ತು ವಾಹನಗಳು ಪಾಲಿಸಬೇಕಾದ ಸಂಚಾರ ನಿಯಮಗಳನ್ನು ಗುರುತಿಸುವುದು.

### 5–6 ವರ್ಷಗಳು

1. ಸಂಚಾರ ದಟ್ಟಣೆ ಮತ್ತು ಅಪಘಾತಗಳ ಬಗ್ಗೆ ತಿಳಿಯುವುದು ಮತ್ತು ಜವಾಬ್ದಾರಿಯುತ ವರ್ತನೆಯಿಂದ ಹೇಗೆ ಇವುಗಳನ್ನು ತಡೆಗಟ್ಟಬಹುದು ಎಂದು ತಿಳಿಯುವುದು.
2. ಪ್ರಯಾಣಿಕರು ಮತ್ತು ಸಾಮಾನುಗಳನ್ನು ಸಾಗಿಸುವಾಗ ಪಾಲಿಸುವ ಸುರಕ್ಷತಾ ನಿಯಮಗಳ ಬಗ್ಗೆ ತಿಳಿದುಕೊಳ್ಳುವುದು.
3. ಬಸ್ಸು ನಿಲ್ದಾಣ, ಪೆಟ್ರೋಲ್ ಬಂಕ್ ಮೊದಲಾದ ಸರ್ವಿಸ್ ಮಾಡುವ ಪ್ರದೇಶಗಳಲ್ಲಿ ಸುರಕ್ಷತಾ ವರ್ತನೆಗಳ ಬಗ್ಗೆ ತಿಳಿಯುವುದು.

Scanned with CamScanner

ಉಪವಿಷಯ 6.3

# ಸಂಚಾರ ನಿಯಮಗಳು



## ಕಲಿಕಾ ಉದ್ದೇಶಗಳು

- ರಸ್ತೆ ಸುರಕ್ಷತಾ ನಿಯಮಗಳನ್ನು ಪಾಲಿಸುವುದರ ಉಪಯುಕ್ತತೆಯನ್ನು ಅರ್ಥ ಮಾಡಿಕೊಳ್ಳುವುದು. (ಜೀಬ್ರಾ ಕ್ರಾಸಿಂಗ್ ಹಾಗೂ ರಸ್ತೆ ದಾಟುವಾಗ ಎಡಬಲ ನೋಡುವುದು).
- ಪರಿಚಿತವಿರುವ ಸಂಚಾರ ನಿಯಮದ ಸಂಕೇತಗಳು (ಜೀಬ್ರಾ ಕ್ರಾಸಿಂಗ್, ವೇಗ ನಿಯಂತ್ರಕ, ಶಾಲಾವಲಯ, ನಿಲ್ದಾಣವಲ್ಲ, U ಟರ್ನ್ ಇಲ್ಲ) ಮತ್ತು ಶಬ್ದಗಳನ್ನು (ಹಾರ್ನ್, ಸೈಕಲ್ ಬೆಲ್, ಪೋಲಿಸ್ ಸೀಟಿ) ಗುರುತಿಸುವುದು ಹಾಗೂ ಪಾಲಿಸಬೇಕಾದ ಸಂಚಾರ ನಿಯಮಗಳನ್ನು ಗುರುತಿಸುವುದು.



Scanned with CamScanner

ಸಂಭಾಷಣೆ 1

## ರಸ್ತೆ ಸುರಕ್ಷತಾ ಪದ್ಧತಿಗಳು



### ಕಲಿಕಾ ಫಲಿತಗಳು

- ಪಾದಚಾರಿ ಮಾರ್ಗವನ್ನು ಬಳಸುವುದರ ಉಪಯುಕ್ತತೆಯನ್ನು ಮತ್ತು ರಸ್ತೆಯನ್ನು ದಾಟುವಾಗ ಜೀಬ್ರಾ-ಕ್ರಾಸಿಂಗ್ ಬಳಸುವುದರಿಂದಾಗುವ ಅನುಕೂಲಗಳನ್ನು ಅರ್ಥಮಾಡಿಕೊಳ್ಳುವುದು.
- ವಾಹನ ಚಾಲಕರು ಪಾಲಿಸಬೇಕಾದ ಸಂಚಾರ ನಿಯಮಗಳನ್ನು ಅರ್ಥಮಾಡಿಕೊಳ್ಳುವುದು.
- ಪಾದಚಾರಿಗಳ ಜವಾಬ್ದಾರಿ ಮೊದಲಾದ ರಸ್ತೆ ಸುರಕ್ಷತಾ ಪದ್ಧತಿಗಳನ್ನು ಅಭ್ಯಾಸ ಮಾಡಿಕೊಳ್ಳುವುದರ ಅವಶ್ಯಕತೆಗಳನ್ನು ಅರ್ಥ ಮಾಡಿಕೊಳ್ಳುವುದು.

### ಕಲಿಕಾ ಸಾಮಗ್ರಿಗಳು

ಚಿತ್ರಪಟ P6.3.1

### ಶಿಕ್ಷಕರ ಪೂರ್ವಸಿದ್ಧತೆ

ಚಿತ್ರಪಟವನ್ನು ಸಿದ್ಧಪಡಿಸಿಕೊಳ್ಳುವುದು. ತರಗತಿಗೆ ಮುನ್ನ ಚಿತ್ರವನ್ನು ನೋಡಿ, ಅದಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಸಿದ್ಧಪಡಿಸಿಕೊಳ್ಳುವುದು. ಮಕ್ಕಳು ನೋಡಲು ಅನುಕೂಲವಾಗುವಂತೆ ಸರಿಯಾಗಿ ಚಿತ್ರವನ್ನು ಗೋಡೆಗೆ ತೂಗಿ ಹಾಕುವುದು. ಕಥೆಯನ್ನು ಹೇಳುವಾಗ ಹೇಗೆ ಮಕ್ಕಳನ್ನು ಸುತ್ತಲೂ ಕೂರಿಸಿಕೊಳ್ಳುತ್ತೀರೋ ಹಾಗೆ ಚಿತ್ರಪಟದ ಹತ್ತಿರ ಕೂರಿಸಿಕೊಳ್ಳುವುದು.

### ಸೂಚನೆಗಳು

**ಚಿತ್ರಪಟವನ್ನು ಬಳಸಿಕೊಂಡು ಕೆಳಗಿನ ಪ್ರಶ್ನೆಗಳನ್ನು ಕೇಳುತ್ತಾ ಚರ್ಚಿಸಿ.**

1. ಈ ಚಿತ್ರ ಯಾವುದರ ಕುರಿತಾಗಿದೆ?
2. ಚಿತ್ರದಲ್ಲಿ ಕಾಣುತ್ತಿರುವ ವಸ್ತುಗಳ ಬಗ್ಗೆ ಹೇಳುವುದು. ವೃತ್ತಾಕಾರದಲ್ಲಿ ಕುಳಿತಿರುವ ಪ್ರತಿಯೊಂದು ಮಗುವಿನ ಬಳಿಯೂ ಹೋಗಿ ಅವರಿಗೆ ಚಿತ್ರದಲ್ಲಿ ಕಾಣುತ್ತಿರುವ ಒಂದು ವಸ್ತುವಿನ ಹೆಸರು ಹೇಳುವಂತೆ ಕೇಳುವುದು. ಹೀಗೆ ಮಾಡುವುದರಿಂದ ಪ್ರತಿಯೊಬ್ಬರಿಗೂ ಅವಕಾಶ ಕೊಟ್ಟಂತಾಗುತ್ತದೆ. ಹೀಗೆ ಕೇಳುವಾಗ ಚಿತ್ರದಲ್ಲಿರುವ ವಸ್ತುಗಳು ಮತ್ತು ಕ್ರಿಯೆಗಳು ಎರಡಕ್ಕೂ ಆದ್ಯತೆ ನೀಡುವುದು.
3. ಮುಖ್ಯ ರಸ್ತೆ ಮತ್ತು ಪಕ್ಕದಲ್ಲಿರುವ ಕಿರು ರಸ್ತೆ ಎಂಬ ಎರಡು ಬಗೆಯ ರಸ್ತೆಗಳಿವೆ ಎಂದು ಮಕ್ಕಳಿಗೆ ತಿಳಿಸುವುದು. ಅವರಿಗೆ ಅವೆರಡನ್ನು ಗುರುತಿಸಲು ಸಾಧ್ಯವೇ? ಏನು ವ್ಯತ್ಯಾಸವಿದೆ? ಎರಡು ಬಗೆಯ ರಸ್ತೆಗಳನ್ನು ಗಮನಿಸಿ ಅವೆರಡರ ನಡುವಿನ ವ್ಯತ್ಯಾಸಗಳನ್ನು ಗುರುತಿಸಿ ಹೇಳಲು ಹೇಳುವುದು.
4. ಎಲ್ಲಾ ದೊಡ್ಡ ರಸ್ತೆಗಳಲ್ಲಿ ವಾಹನಗಳ ರಸ್ತೆ ಮತ್ತು ಪಾದಚಾರಿ ಮಾರ್ಗ ಎಂದು ಎರಡು ಭಾಗಗಳಿರುತ್ತವೆ ಎಂದು ಚಿತ್ರಪಟದಲ್ಲಿ ತೋರಿಸಿ, ಮಕ್ಕಳಿಗೆ ಅವುಗಳನ್ನು ಗಮನಿಸಿ ವ್ಯತ್ಯಾಸಗಳನ್ನು (ಉದಾಹರಣೆಗೆ: ವಾಹನಗಳು ರಸ್ತೆಯ ಮೇಲೆ ಚಲಿಸುತ್ತವೆ ಮತ್ತು ಪಾದಚಾರಿಗಳು ಪಾದಚಾರಿ ಮಾರ್ಗದಲ್ಲಿ ನಡೆಯುತ್ತಾರೆ) ತಿಳಿಸಲು ಹೇಳುವುದು.
5. ಪಾದಚಾರಿ ಮಾರ್ಗ ಏತಕ್ಕಾಗಿ ಇರುತ್ತದೆ? ಈ ಚಿತ್ರದಲ್ಲಿ ಅದನ್ನು ಗಮನಿಸೋಣ. ಯಾರು ಅದರ ಮೇಲೆ ನಡೆಯುತ್ತಿಲ್ಲ?
6. ಈ ಚಿತ್ರದಲ್ಲಿರುವ ಹುಡುಗನು ಎಲ್ಲಿ ನಡೆಯುತ್ತಿದ್ದಾನೆ? ಅವನು ಅಲ್ಲಿ ಏಕೆ ನಡೆಯುತ್ತಿದ್ದಾನೆ ಎಂದು ನಿಮಗೆ ಅನ್ನಿಸುತ್ತದೆ? ಅವನು ಏಕೆ ರಸ್ತೆಯ ಮೇಲೆ ನಡೆಯುತ್ತಿಲ್ಲ? ಅವನು ಪಾದಚಾರಿ ಮಾರ್ಗದ ಮೇಲೆ ಏನನ್ನು ಎಸೆಯುತ್ತಿದ್ದಾನೆ? ಅದರಿಂದ ಏನಾಗುತ್ತದೆ ಎಂದು ನಿಮಗೆ ಅನ್ನಿಸುತ್ತದೆ?
7. ಸ್ಕೂಟರ್‌ನಲ್ಲಿ ಹೋಗುತ್ತಿರುವವನು ಏನು ಮಾಡುತ್ತಿದ್ದಾನೆ? ಅವನು ಎಲ್ಲಿರಬೇಕಿತ್ತು? ಬೇರೆ ಯಾರು ತಪ್ಪು ಮಾರ್ಗದಲ್ಲಿ ವಾಹನ ಚಲಾಯಿಸುತ್ತಿದ್ದಾರೆ?
8. ಬೀದಿ ಬಳಿಯ ಹಣ್ಣಿನ ವ್ಯಾಪಾರಿಯನ್ನು ತೋರಿಸುವುದು. ಅವನು ಅಲ್ಲಿ ಏನು ಮಾಡುತ್ತಿದ್ದಾನೆ? ಅದು ವ್ಯಾಪಾರ ಮಾಡಲು ಸರಿಯಾದ ಜಾಗವೇ? ಅದರಿಂದ ಏನು ತೊಂದರೆಯಾಗುತ್ತಿದೆ?



Scanned with CamScanner

## ಮುಕ್ತ ಮತ್ತು ಮಾರ್ಗದರ್ಶನಯುಕ್ತ ಸಂಭಾಷಣೆಗಳು


**ಸಂಭಾಷಣೆ 1**

### ರಸ್ತೆ ಸುರಕ್ಷತಾ ಪದ್ಧತಿಗಳು

9. ಈ ಮನುಷ್ಯ (ಕಸ ಎಸೆಯುತ್ತಿರುವವನು) ಏನು ಮಾಡಲು ಪ್ರಯತ್ನಿಸುತ್ತಿದ್ದಾನೆ? ಆದರಿಂದ ಏನಾಯಿತು? ಅವನು ಏನು ಮಾಡಬೇಕಿತ್ತು? ಪಾದಚಾರಿ ಮಾರ್ಗದಲ್ಲಿ ಅಲ್ಲದಿದ್ದರೆ ಬೇರೆಲ್ಲಿ ಅವನು ಕಸವನ್ನು ಎಸೆಯಬೇಕು ಎಂದು ನಿಮಗೆ ಅನ್ನಿಸುತ್ತದೆ?
10. ಈ ಹುಡುಗಿ ರಸ್ತೆಯನ್ನು ಏಕೆ ದಾಟುತ್ತಿಲ್ಲ? ಅವಳು ಏಕೆ ಅಲ್ಲಿ ನಿಂತು ಕಾಯುತ್ತಿದ್ದಾಳೆ? ರಸ್ತೆ ದಾಟಲು ಅದು ಸರಿಯಾದ ಜಾಗವೇ?
11. ಈ ಮನುಷ್ಯ (ಫೋನಿನಲ್ಲಿ ಮಾತನಾಡುತ್ತಿರುವವನು) ನಡೆಯುವಾಗ ಏನು ಮಾಡುತ್ತಿದ್ದಾನೆ? ಅದು ಸರಿಯೇ? ಅದರಿಂದ ಏನಾಗಬಹುದು?
12. ಈ ಬಸ್ಸು ನಿಂತಿರುವ ರೀತಿಯಲ್ಲಿ ಏನಾದರೂ ತಪ್ಪು ಇದೆಯೇ? ಏನದು? ಆದರಿಂದ ಏನಾಗಬಹುದು?
13. ಸಂಭಾಷಣೆಯ ಕೊನೆಯಲ್ಲಿ ಸರಿಯಾದ ಸಂಚಾರದ ನಿಯಮಗಳನ್ನು ಮತ್ತೊಮ್ಮೆ ದೃಢೀಕರಿಸುವುದು.

ಗಮನಿಸಿ: ಈ ಸಂಭಾಷಣೆಯನ್ನು ವಿವಿಧ ಹಂತಗಳಲ್ಲಿ ಮಾಡಬಹುದು. ಮೊದಲನೆಯ ದಿನ ಚಿತ್ರದ ವಿವರಗಳನ್ನು ನೋಡಲು ಹೇಳುವುದು– ಏನಾಗುತ್ತಿದೆ? ಯಾರು ಏನು ಮಾಡುತ್ತಿದ್ದಾರೆ? ಎಂಬ ಪ್ರಶ್ನೆಗಳೊಂದಿಗೆ ಕೆಲವು ವಿಶಾಲ ನೆಲೆಯಲ್ಲಿ ಸರಿ ಮತ್ತು ತಪ್ಪು ನಡವಳಿಕೆಗಳ ಬಗ್ಗೆ ಹೆಚ್ಚು ಒತ್ತು ಕೊಡುವುದು. ಎರಡನೆಯ ದಿನ ನಿರ್ದಿಷ್ಟವಾದ ಪ್ರಶ್ನೆಗಳನ್ನು ಕೇಳುವುದು ಮತ್ತು ರಸ್ತೆ ಸುರಕ್ಷತಾ ನಿಯಮಗಳ ಬಗ್ಗೆ ತಿಳುವಳಿಕೆ ಮೂಡಿಸುವುದು.

ದೂರದ ಹಳ್ಳಿ ಅಥವಾ ದೂರದ ಪ್ರದೇಶಗಳಲ್ಲಿರುವ ಮಕ್ಕಳಿಗೆ ಟ್ರಾಫಿಕ್ ಸಿಗ್ನಲ್‌ಗಳು (ಸಂಚಾರ ಸಂಕೇತಗಳು), ಜೀಬ್ರಾ–ಕ್ರಾಸಿಂಗ್ ಇತ್ಯಾದಿಗಳು ಬಹುಶಃ ಹೊಸ ವಿಷಯವಾಗಿರಬಹುದು. ಚಿತ್ರದಲ್ಲಿರುವ ವಿವರಗಳನ್ನು ಅವರ ಹತ್ತಿರದ ಪರಿಸರದಲ್ಲಿನ ಅನುಭವಗಳಿಗೆ ತಕ್ಕ ಹಾಗೇ ಅರ್ಥೈಸುವುದು.



ಚಿಲಿಪಿಲಿ P6.3.1 ಸಂಚಾರ ದೃಶ್ಯ | TRAFFIC SCENE



Scanned with CamScanner

ಸಂಭಾಷಣೆ 2

## ಸಂಚಾರ ನಿಯಮದ ಸಂಕೇತಗಳು ಮತ್ತು ಸಂಕೇತ ಫಲಕಗಳು

### ಕಲಿಕಾ ಫಲಿತಗಳು

**ಈ ಚಟುವಟಿಕೆಯ ಅಂತ್ಯದಲ್ಲಿ ಮಕ್ಕಳು ಈ ಕೆಳಗಿನವುಗಳನ್ನು ಅರಿತಿರುತ್ತಾರೆ.**


- ಪರಿಚಿತವಿರುವ ಸಂಚಾರ ನಿಯಮದ ಸಂಕೇತಗಳನ್ನು (ಜೀಬ್ರಾ-ಕ್ರಾಸಿಂಗ್, ರಸ್ತೆ-ಉಬ್ಬುಗಳು, ಪ್ರವೇಶವಿಲ್ಲ, ಯೂ-ಟರ್ನ್ ಇಲ್ಲ, ಶಾಲಾ ಪ್ರದೇಶ ಮತ್ತು ವಾಹನ ನಿಲುಗಡೆಯಿಲ್ಲ ಇತ್ಯಾದಿ) ಗುರುತಿಸುತ್ತಾರೆ.
- ವಾಹನಗಳು ಪಾಲಿಸಬೇಕಾದ ಸಂಚಾರ ನಿಯಮಗಳನ್ನು ಹಾಗೂ ಅದಕ್ಕೆ ಸಂಬಂಧಿಸಿದ ಸಂಕೇತಗಳನ್ನು ಗುರುತಿಸುತ್ತಾರೆ.

### ಹಂತ 1: ಸಂಚಾರ ನಿಯಮದ ಸಂಕೇತಗಳು

### ಕಲಿಕಾ ಸಾಮಗ್ರಿಗಳು

**ಮಿಂಚುಪಟ್ಟಿಗಳ ಸರಣಿ F6.3.1 (1–4):** 1. ಕೆಂಪು 2. ಹಳದಿ 3. ಹಸಿರು ಬಣ್ಣಗಳ ಸಂಚಾರ ದೀಪಗಳು 4. ಪಾದಚಾರಿ ದಾಟು ಮಾರ್ಗ ಹೊಂದಿರುವ ರಸ್ತೆ, ನಿಂತಿರುವ ವಾಹನಗಳು, ಸಂಚಾರ ದೀಪದ ಸಂಕೇತದ ಬಳಿ ರಸ್ತೆ ದಾಟುತ್ತಿರುವ ಒಬ್ಬ ಪಾದಚಾರಿ. **ಚಿತ್ರಪಟ P6.3.1.**




### ಶಿಕ್ಷಕರ ಪೂರ್ವಸಿದ್ಧತೆ

ಸಂಭಾಷಣೆಗೆ ಹೊಂದಿಕೊಳ್ಳುವಂತೆ ಅನುಕೂಲವಾಗಲು ಮಿಂಚು ಪಟ್ಟಿಗಳನ್ನು ಇಟ್ಟುಕೊಳ್ಳುವುದು.

### ಸೂಚನೆಗಳು

ಒಂದು ಬಾರಿಗೆ ಒಂದು ಕಾರ್ಡ್ ತೋರಿಸುತ್ತಾ ಮಕ್ಕಳಿಗೆ ಈ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವುದು.

**ಕೆಂಪು ಬಣ್ಣದ ಸಂಚಾರ ದೀಪ**

1. ಇದು ಯಾವ ಬಣ್ಣದ ದೀಪ?
2. ಈ ಬಣ್ಣದ ಬೇರೆ ಯಾವ ವಸ್ತುಗಳನ್ನು ನೀವು ನೋಡಿದ್ದೀರಾ?
3. ರಸ್ತೆಯಲ್ಲಿ ಎಲ್ಲಾದರೂ ಈ ಬಣ್ಣದ ದೀಪವನ್ನು ನೋಡಿದ್ದೀರಾ?
4. ಕೆಂಪು ದೀಪ ಬಂದಾಗ ವಾಹನಗಳನ್ನು ನೋಡಿ. ಕಾರುಗಳು ಏನು ಮಾಡುತ್ತಿವೆ? ಚಿತ್ರದಲ್ಲಿರುವ ಮನುಷ್ಯ ಏನು ಮಾಡುತ್ತಿದ್ದಾನೆ?
5. ಈ ಬಣ್ಣದ ದೀಪ ಉರಿಯುತ್ತಿದ್ದರೆ ಇದರ ಅರ್ಥ ಏನು?
6. ನೀವು ಪಾದಚಾರಿಯಾಗಿದ್ದರೆ, ಈ ದೀಪ ಹತ್ತಿದಾಗ ನೀವು ಏನು ಮಾಡಬೇಕು?
7. ನಾವು ವಾಹನ ಚಲಾಯಿಸುತ್ತಿದ್ದರೆ ಈ ದೀಪ ಹತ್ತಿದಾಗ ಏನು ಮಾಡಬೇಕು?

**ಹಸಿರು ಮತ್ತು ಹಳದಿ ಬಣ್ಣದ ಸಂಚಾರ ದೀಪದ ಸಂಕೇತಗಳು:**

1. ಹಸಿರು ಮತ್ತು ಹಳದಿ ಬಣ್ಣದ ಸಂಕೇತವಿರುವ ಮಿಂಚುಪಟ್ಟಿಗಳನ್ನು ಪ್ರತ್ಯೇಕವಾಗಿ ತೋರಿಸಿ ಮೇಲಿನ ರೀತಿಯ ಪ್ರಶ್ನೆಗಳನ್ನು ಕೇಳುವುದು.



Scanned with CamScanner

ಸಂಭಾಷಣೆ 2

## ಸಂಚಾರ ನಿಯಮದ ಸಂಕೇತಗಳು ಮತ್ತು ಸಂಕೇತ ಫಲಕಗಳು



**ಮತ್ತೆ ಚಿತ್ರಪಟವನ್ನು ತೋರಿಸುತ್ತಾ ಉರಿಯುತ್ತಿರುವ ದೀಪಗಳು ಕೆಂಪು ಅಥವಾ ಹಸಿರು ಅಥವಾ ಹಳದಿ ಬಣ್ಣದ್ದಾಗಿವೆಯೇ? ಎಂದು ಕೇಳುವುದು.**

1. ಈ ದೀಪಗಳು ಏಕೆ ಇವೆ ಎಂದು ನಿಮಗನಿಸುತ್ತಿದೆ?
2. ನಿಮಗೆ ಚಿತ್ರದಲ್ಲಿ ಯಾವ ಬಣ್ಣಗಳು ಕಾಣಿಸುತ್ತಿವೆ?
3. ವಾಹನಗಳು ನಿಲ್ಲಬೇಕಾದರೆ ಯಾವ ಬಣ್ಣದ ದೀಪ ಉರಿಯುತ್ತಿರಬೇಕು?
4. ಎಷ್ಟು ದೀಪಗಳಿವೆ?
5. ಎಲ್ಲಾ ದೀಪಗಳು ಒಂದೇ ಆಕಾರದಲ್ಲಿವೆಯೇ? ಏನಾದರೂ ವ್ಯತ್ಯಾಸವಿದ್ದರೆ (ನಿರ್ದಿಷ್ಟವಾಗಿ ಪಾದಚಾರಿಗಳ ದೀಪಗಳು), ಅದು ಏನನ್ನು ಸೂಚಿಸುತ್ತದೆ?
6. ಸಂಚಾರ ದೀಪಗಳ ಅಗತ್ಯವಿದೆ ಎಂದು ನಿಮಗೆ ಅನ್ನಿಸುತ್ತದೆಯೇ? ಏಕೆ? ಅವುಗಳು ಇಲ್ಲದಿದ್ದರೆ ಏನಾಗುತ್ತದೆ?
7. ಪ್ರತಿಯೊಂದು ಬೀದಿಯಲ್ಲಿ ಅಥವಾ ಹಳ್ಳಿಯಲ್ಲಿ ಸಂಚಾರ ದೀಪಗಳಿವೆಯೇ? ಏಕಿಲ್ಲ?
8. ಕೆಂಪು ದೀಪ ಉರಿಯುತ್ತಿದ್ದರೂ ಮುಂದೆ ಹೋಗುತ್ತಿರುವ ಚಿತ್ರಪಟದಲ್ಲಿರುವ ಕಾರನ್ನು ತೋರಿಸಿ. ಈ ವಾಹನದ ಚಾಲಕ ಸಂಚಾರ ನಿಯಮವನ್ನು ಪಾಲಿಸುತ್ತಿದ್ದಾನೆಯೇ? ಹೀಗೆ ಮಾಡುವುದರಿಂದ ಏನಾಗುತ್ತದೆ?
9. ಜೀಬ್ರಾ-ಕ್ರಾಸಿಂಗ್, ಪ್ರವೇಶವಿಲ್ಲ, ಯೂ-ಟರ್ನ್ ಮೊದಲಾದ ಬೇರೆ ಬೇರೆ ಸಂಕೇತಗಳನ್ನು ತೋರಿಸಿ ಮಕ್ಕಳು ಅವುಗಳನ್ನು ಪರಿಚಯಿಸಿ ಕೊಳ್ಳುವಂತೆ ಮಾಡುವುದು. ಅವರು ಅವುಗಳನ್ನು ತಮ್ಮ ಸುತ್ತಮುತ್ತಲೂ ಎಲ್ಲಿಯಾದರೂ ನೋಡಿದ್ದಾರೆಯೇ? ಎಂದು ಚರ್ಚಿಸುವುದು.

### ಹಂತ 2: ಸಂಕೇತ ಫಲಕಗಳು

**(ಗಮನಿಸಿ: ಈ ಹಂತವನ್ನು ಮರುದಿನದ ಸಂಭಾಷಣೆಯ ವಿಷಯವನ್ನಾಗಿ ತೆಗೆದುಕೊಳ್ಳಬಹುದು).**

### ಕಲಿಕಾ ಸಾಮಗ್ರಿಗಳು

**ಮಿಂಚುಪಟ್ಟಿಗಳ ಸರಣಿ F6.3.2 (1–8):** 1. ನಿಲ್ಲಿ 2. ವೇಗ ನಿಯಂತ್ರಕಗಳು 3. ಶಾಲಾ ಪ್ರದೇಶ 4. ಪ್ರವೇಶವಿಲ್ಲ 5. ನಿರ್ಗಮನ 6. ಜೀಬ್ರಾ-ಕ್ರಾಸಿಂಗ್ 7. ಯೂ-ಟರ್ನ್ 8. ನಿಲುಗಡೆಯಿಲ್ಲ **ಚಿತ್ರಪಟ P6.3.1.**

### ಶಿಕ್ಷಕರ ಪೂರ್ವಸಿದ್ಧತೆ

ಮೇಲಿನ ಮಿಂಚುಪಟ್ಟಿಗಳನ್ನು ಸಿದ್ಧಪಡಿಸಿಟ್ಟುಕೊಳ್ಳುವುದು.






Scanned with CamScanner

## ಚಟುವಟಿಕೆ 2

## ಸಂಚಾರ ನಿಯಮಗಳ ಸಂಕೇತಗಳು ಮತ್ತು ಸಂಕೇತ ಫಲಕಗಳು

### ಸೂಚನೆಗಳು

1. ಮಕ್ಕಳನ್ನು ವೃತ್ತಾಕಾರವಾಗಿ ಕುಳಿತುಕೊಳ್ಳುವಂತೆ ಹೇಳುವುದು.
2. ಒಂದು ಬಾರಿಗೆ ಒಂದು ಕಾರ್ಡ್ ತೋರಿಸುತ್ತಾ (ಜೀಬ್ರಾ ಕ್ರಾಸಿಂಗ್ ಮೊದಲಾದ ಸಂಕೇತ ಫಲಕಗಳು) ಮಕ್ಕಳಿಗೆ ಕೆಳಗಿನ ಪ್ರಶ್ನೆಗಳನ್ನು ಕೇಳುವುದು.
   - ನೀವು ಈ ಸಂಕೇತವನ್ನು ಎಲ್ಲಿಯಾದರೂ ನೋಡಿದ್ದೀರಾ? ಎಲ್ಲಿ?
   - ಈ ಚಿತ್ರವು ಏನು ಹೇಳುತ್ತಿದೆ?
   - ರಸ್ತೆ ಬದಿಯಲ್ಲಿ ಚಿತ್ರವನ್ನು ನಾವು ಏಕೆ ಪ್ರದರ್ಶಿಸಬೇಕು?
   - ಈ ಸಂಕೇತ ಫಲಕಗಳಿಲ್ಲದಿದ್ದರೆ ಏನಾಗಬಹುದು?
3. ಇದೇ ರೀತಿ ನಿಲುಗಡೆಯಿಲ್ಲ, ವೇಗ ನಿಯಂತ್ರಕಗಳು (ರಸ್ತೆ ಉಬ್ಬುಗಳು), ಶಾಲಾ ಪ್ರದೇಶ, ಪ್ರವೇಶವಿಲ್ಲ ಮೊದಲಾದ ಸಂಕೇತಗಳಿರುವ ಮಿಂಚುಪಟ್ಟಿಗಳನ್ನು ತೋರಿಸಿ ಅವುಗಳ ಬಗ್ಗೆ ಮಾತನಾಡುವುದು.
4. ಚಿತ್ರಪಟವನ್ನು ತೆಗೆದು ತೋರಿಸುತ್ತಾ ಅದರಲ್ಲಿರುವ ಸಂಕೇತಗಳನ್ನು ಗುರುತಿಸಲು ಹೇಳುವುದು. ಆ ನಿರ್ದಿಷ್ಟ ಸಂದರ್ಭದಲ್ಲಿ ಪ್ರತಿಯೊಂದು ಸಂಕೇತವೂ ಏನನ್ನು ತಿಳಿಸುತ್ತಿದೆ ಮತ್ತು ಜನರು ಅದನ್ನು ಪಾಲಿಸುತ್ತಿದ್ದಾರೆಯೇ? ಎಂದು ಕೇಳುವುದು. ಯಾರು ಪಾಲಿಸುತ್ತಿದ್ದಾರೆ ಮತ್ತು ಯಾರು ಇಲ್ಲ? ಅದರ ಪರಿಣಾಮವೇನು ಎಂಬ ಬಗ್ಗೆ ಚರ್ಚಿಸುವುದು?
   - ಜೀಬ್ರಾ ಕ್ರಾಸಿಂಗ್‌ನ ಬಳಿ ನಿಂತಿರುವ ಕಾರನ್ನು ತೋರಿಸುತ್ತಾ, ಅದು ಎಲ್ಲಿ ನಿಂತಿರಬೇಕಿತ್ತು? ಜೀಬ್ರಾ ಕ್ರಾಸಿಂಗ್‌ನ ಬಳಿ ನಿಂತಿರುವುದರಿಂದ ಏನಾಗಬಹುದು?
   - ನಿಲುಗಡೆಯಿಲ್ಲ ಎಂಬ ಫಲಕದಡಿ ನಿಂತಿರುವ ವಾಹನಗಳನ್ನು ತೋರಿಸಿ ಮುಂದಿನ ಪ್ರಶ್ನೆಗಳನ್ನು ಕೇಳುವುದು – ಇಲ್ಲಿ ವಾಹನಗಳನ್ನು ನಿಲ್ಲಿಸಿರುವುದು ತಪ್ಪು, ಏಕೆ? ಅದರಿಂದ ಏನಾಗಬಹುದು? ಇದಕ್ಕೆ ಬದಲಾಗಿ ವಾಹನಗಳನ್ನು ಎಲ್ಲಿ ನಿಲ್ಲಿಸಬಹುದು?
   - ರಸ್ತೆಯನ್ನು ಎಲ್ಲಿ ದಾಟಬಹುದು? ಜೀಬ್ರಾ ಕ್ರಾಸಿಂಗ್ ಇಲ್ಲದಿದ್ದರೆ ರಸ್ತೆ ದಾಟುವಾಗ ನೀವು ಏನು ಮಾಡಬೇಕು?–ಮೊದಲು ಎಡಕ್ಕೆ ನೋಡಬೇಕು, ನಂತರ ಬಲಕ್ಕೆ ನೋಡಬೇಕು ಮತ್ತು ಮತ್ತೊಮ್ಮೆ ಎಡಕ್ಕೆ ನೋಡಿ ನಂತರ ರಸ್ತೆಯನ್ನು ದಾಟಬೇಕು ಎಂದು ಅವರಿಗೆ ಅರ್ಥೈಸುವುದು. ಮಕ್ಕಳಿಗೆ ಚಲಿಸುತ್ತಿರುವ ವಾಹನಗಳಂತೆ ಮತ್ತು ರಸ್ತೆ ದಾಟುತ್ತಿರುವ ಪಾದಚಾರಿಗಳಂತೆ ಅಭಿನಯಿಸಲು ಹೇಳಿ, ರಸ್ತೆ ದಾಟುವ ಮೊದಲು ಎರಡೂ ಕಡೆ ನೋಡಿ ದಾಟುವಂತೆ ಹೇಳುವುದು.



Scanned with CamScanner

ಯೋಜನಾ ಕಾರ್ಯ 1

# ಹೊರ ಸಂಚಾರ

## ಕಲಿಕಾ ಫಲಿತಗಳು (ಯೋಜನಾ ಕಾರ್ಯ 1,2ಕ್ಕೂ ಇದೇ ಕಲಿಕಾ ಫಲಿತಗಳು ಅನ್ವಯವಾಗುತ್ತವೆ.)

- ನಕ್ಷೆಗಳು–ಸ್ಥಳಗಳು ಮತ್ತು ದಿಕ್ಕುಗಳನ್ನು ಅರ್ಥ ಮಾಡಿಕೊಳ್ಳುವುದು.
- ಸಂಚಾರವನ್ನು ನಿಯಂತ್ರಿಸಲು ಸಹಾಯ ಮಾಡುವ ಸಂಚಾರ ಪೋಲೀಸ್ (ಟ್ರಾಫಿಕ್ ಪೋಲೀಸ್)ರನ್ನು ಭೇಟಿ ಮಾಡಿ ಮಾಹಿತಿ ಪಡೆಯುವುದು.
- ಸಂಚಾರ ನಿಯಮಗಳ ಮತ್ತು ಸಂಚಾರ ಸುರಕ್ಷಾ ಚಿಹ್ನೆ ಪರಿಕಲ್ಪನೆಗಳನ್ನು ಭೇಟಿ, ಚರ್ಚೆ ಮತ್ತು ಕ್ರಿಯಾತ್ಮಕ ಚಟುವಟಿಕೆಗಳ ಮೂಲಕ ಬಲಪಡಿಸುವುದು.

## ಶಿಕ್ಷಕರ ಪೂರ್ವಸಿದ್ಧತೆ

ಸಂಚಾರ ದೀಪಗಳು (ಟ್ರಾಫಿಕ್ ಸಿಗ್ನಲ್) ಇರುವ ಸ್ಥಳಕ್ಕೆ ಹಿಂದಿನ ದಿನವೇ ಭೇಟಿ ನೀಡಿ. ಮಕ್ಕಳ ಸುರಕ್ಷತೆ ಮತ್ತು ಎಲ್ಲವನ್ನೂ ಗಮನಿಸಬಹುದಾದ ಸ್ಥಳವನ್ನು ನಿಗದಿಪಡಿಸಿಕೊಂಡು ಬರುವುದು. ಸಂಚಾರ ಪೋಲೀಸರು ಮರುದಿನ ಅಲ್ಲಿ ಇರುವರೇ ಎಂದು ಖಚಿತಪಡಿಸಿಕೊಂಡು ನಿಮ್ಮ ಭೇಟಿಯ ಬಗ್ಗೆ ಅವರಿಗೆ ತಿಳಿಸುವುದು. ಪೋಷಕರಿಗೂ ಮೊದಲೇ ತಿಳಿಸಿರುವುದು.

ಮುಖ್ಯ ರಸ್ತೆಯಲ್ಲಿರಬೇಕಾದರೆ ಒಬ್ಬರ ಕೈ ಇನ್ನೊಬ್ಬರು ಹಿಡಿದು, ಜೊತೆಯಾಗಿ ಸಾಲಿನಲ್ಲಿ ಬರುವಂತೆ ಎಚ್ಚರಿಕೆಗಳನ್ನು ಮುಂಚೆಯೇ ಮಕ್ಕಳಿಗೆ ಕೊಡುವುದು. ಅವರಿಗೆ ತಮ್ಮ ಭೇಟಿಯಲ್ಲಿ ಕಾಣುವ ಮತ್ತು ಕೇಳುವ ಎಲ್ಲಾ ವಾಹನಗಳ ಶಬ್ದ ಹಾಗು ಚಲನೆಗಳನ್ನು ಗಮನಿಸಲು ಹೇಳುವುದು.

## ಸೂಚನೆಗಳು

1. ಮಕ್ಕಳನ್ನು ಸಂಚಾರ ದೀಪಗಳು ಇರುವ ಸ್ಥಳಕ್ಕೆ ಕರೆದೊಯ್ಯು ಅವರಿಗೆ ಸಂಚಾರ ದೀಪಗಳ ನಿಯಮಗಳನ್ನು ಪರಿಚಯ ಮಾಡಿಸುವುದು. ಅವರಿಗೆ ವಾಹನಗಳು ಯಾವಾಗ ನಿಲ್ಲುತ್ತವೆ ಮತ್ತು ಯಾವಾಗ ಚಲಿಸುತ್ತವೆ? ಎಂದು ಗಮನಿಸಲು ಹೇಳುವುದು. ಸಾಧ್ಯವಾದರೆ ಸಂಚಾರ ಪೋಲೀಸರು ಮಕ್ಕಳೊಂದಿಗೆ ಮಾತನಾಡಲಿ ಮತ್ತು ಮಕ್ಕಳು ಅವರಿಗೆ ಪ್ರಶ್ನೆಗಳನ್ನು ಕೇಳಲು ಪ್ರೋತ್ಸಾಹಿಸುವುದು.
2. ಸೈಕಲ್, ಆಟೋ, ಮೋಟರ್ ಬೈಕ್, ಕಾರು, ಲಾರಿ ಮತ್ತು ಪೊಲೀಸ್ ಸೀಟಿ ಇವುಗಳಿಗೆ ಹೇಗೆ ವಿಭಿನ್ನ ಹಾರ್ನ್ ಶಬ್ದಗಳಿರುತ್ತವೆ ಎಂದು ಗಮನಿಸಲು ಹೇಳುವುದು.
3. ತರಗತಿಗೆ ಹಿಂದಿರುಗಿದ ಮೇಲೆ, ತಾವು ಗಮನಿಸಿದ್ದನ್ನು ಮತ್ತು ತಮ್ಮ ಅನುಭವಗಳನ್ನು ಹಂಚಿಕೊಳ್ಳಲು ಮಕ್ಕಳಿಗೆ ಹೇಳುವುದು.
4. ಸಂಚಾರ ದೀಪಗಳ ಸಂಕೇತದ ವ್ಯವಸ್ಥೆ ಇರುವಾಗ ಮತ್ತು ಅದು ಇಲ್ಲದಿರುವಾಗ ಸಂಚಾರ ಪೋಲೀಸರ ಪಾತ್ರದ ಬಗ್ಗೆ ಚರ್ಚಿಸುವುದು.
5. ನಾಲ್ಕು ರಸ್ತೆಗಳು ಕೂಡುವ ಮುಖ್ಯ ರಸ್ತೆಗೆ ಮಕ್ಕಳನ್ನು ಕರೆದುಕೊಂಡು ಹೋಗಿ ವಾಹನಗಳು ಹೇಗೆ ಚಲಿಸುತ್ತವೆ ಗಮನಿಸಲು ಹೇಳುವುದು.
6. ಸಂಚಾರವನ್ನು ತಾವು ಹೇಗೆ ನಿರ್ವಹಿಸುತ್ತೇವೆ ಎಂದು ಸಂಚಾರ ಪೋಲೀಸರು ಮಕ್ಕಳಿಗೆ ತಿಳಿಸಲು ಹೇಳುವುದು.



Scanned with CamScanner

## ಯೋಜನಾ ಕಾರ್ಯ 2: ಬಸ್ಸು ನಿಲ್ದಾಣ. ಆಟೋ ನಿಲ್ದಾಣ. ಪೆಟ್ರೋಲ್ ಬಂಕ್. ಸೈಕಲ್ ಶಾಪ್. ರಸ್ತೆಗಳು ಮತ್ತು ಸಾರಿಗೆಗೆ ಸಂಬಂಧಿಸಿದ ಇತರ ಸ್ಥಳಗಳು ಇವುಗಳನ್ನೊಳಗೊಂಡ ಒಂದು ಹಳ್ಳಿಯ ನಕ್ಷೆಯನ್ನು ತಯಾರಿಸುವುದು

### ಕಲಿಕಾ ಸಾಮಗ್ರಿಗಳು

ವಾಹನ ನಿಲ್ದಾಣಗಳ ಚಿತ್ರಗಳು. ಚಾರ್ಟ್. ಅಂಟು.

### ಶಿಕ್ಷಕರ ಪೂರ್ವಸಿದ್ಧತೆ

ಹಳ್ಳಿಯ ವಾಹನ ನಿಲ್ದಾಣಗಳು ಮತ್ತು ವಾಹನ ಸೇವಾ ಕೇಂದ್ರಗಳ ವಿಭಿನ್ನ ಚಿತ್ರಗಳನ್ನು (ಬಸ್ಸು ಮತ್ತು ಆಟೋ ನಿಲ್ದಾಣಗಳು. ಪೆಟ್ರೋಲ್ ಬಂಕ್, ಸೈಕಲ್ ಶಾಪ್ ಮತ್ತು ರಸ್ತೆಗಳು ಇತ್ಯಾದಿ) ಹಳೆಯ ದಿನಪತ್ರಿಕೆಗಳು. ನಿಯತಕಾಲಿಕೆಗಳು ಮತ್ತು ಪುಸ್ತಕಗಳಿಂದ ಮುಂಚಿತವಾಗಿ ಕತ್ತರಿಸಿ ತೆಗೆದಿಟ್ಟುಕೊಳ್ಳುವುದು.

### ಸೂಚನೆಗಳು

1. ಅವರ ಹಳ್ಳಿಯಲ್ಲಿ ಮೇಲಿನ ಸ್ಥಳಗಳು ಎಲ್ಲಿವೆ? ಎಂದು ಮಕ್ಕಳನ್ನು ಕೇಳುವುದು.
2. ಮಕ್ಕಳ ಸಹಾಯದಿಂದ (ಚಿತ್ರದಲ್ಲಿ ತೋರಿಸಿರುವಂತೆ) ಚಿತ್ರಗಳನ್ನು ಚಾರ್ಟಿನಲ್ಲಿ ಅಂಟಿಸಿ ಹಳ್ಳಿಯ ನಕ್ಷೆಯನ್ನು ತಯಾರಿಸುವುದು.
3. ಇದನ್ನು ಇಡೀ ತರಗತಿಯ ಚಟುವಟಿಕೆಯನ್ನಾಗಿ ಮಾಡಬಹುದು ಅಥವಾ ಮಕ್ಕಳನ್ನು 2-3 ಗುಂಪುಗಳಾಗಿ ವಿಂಗಡಿಸಿ ಪ್ರತಿಯೊಂದು ಗುಂಪು ಒಂದೊಂದು ನಕ್ಷೆಯನ್ನು ತಯಾರಿಸಬಹುದು.






Scanned with CamScanner

## ಶಿಶುಗೀತೆಗಳ ಸೂಚನೆಗಳು

### ಕಲಿಕಾ ಫಲಿತಗಳು

ಮಕ್ಕಳು "ಬರುತಿದೆ ರೈಲು", "ಉದ್ದದ ಅಗಲದ ರಸ್ತೆ", "Red light, red light" ಶಿಶುಗೀತೆಗಳನ್ನು ಸರಿಯಾದ ಪದಗಳು, ಉಚ್ಚಾರ ಮತ್ತು ಅಭಿನಯಗಳೊಂದಿಗೆ ಹಾಡುವ ಸಾಮರ್ಥ್ಯವನ್ನು ಹೊಂದುವುದು.

### ಕಲಿಕಾ ಸಾಮಗ್ರಿಗಳು

ಶಿಶುಗೀತೆಗಳ ಮುದ್ರಿತ ಪ್ರತಿ, ಚಾರ್ಟ್ ಪೇಪರ್, ಸ್ಕೆಚ್ ಪೆನ್ನು.

### ಶಿಕ್ಷಕರ ಪೂರ್ವಸಿದ್ಧತೆ

ಶಿಶುಗೀತೆ ಮತ್ತು ಅದಕ್ಕನುಗುಣವಾದ ಅಭಿನಯವನ್ನು ಚೆನ್ನಾಗಿ ಅರಿತಿರುವುದು. ಶಿಶುಗೀತೆಯನ್ನು ದೊಡ್ಡ ಅಕ್ಷರಗಳಲ್ಲಿ ಚಾರ್ಟ್ ಪೇಪರಿನ ಮೇಲೆ ಬರೆದು ಚಾರ್ಟಿನ ಮೂಲೆಯಲ್ಲಿ ಅದಕ್ಕೆ ಸಂಬಂಧಿಸಿದ ಸಚಿತ್ರ ವಿವರಣೆಯನ್ನು ಬರೆದು ಮಕ್ಕಳ ಕಣ್ಣಿನ ಮಟ್ಟಕ್ಕೆ ಗೋಡೆಯ ಮೇಲೆ ತೂಗು ಹಾಕುವುದು. ಮಕ್ಕಳು ಶಿಶುಗೀತೆಯನ್ನು ನೋಡಲಿ.

ಗಮನಿಸಿ: ಎಲ್ಲಾ ಶಿಶುಗೀತೆಗಳನ್ನು 3–4 ಬಾರಿ ಹೇಳಿಸಬೇಕು ಹಾಗೂ 'ವಾಹನ ಮತ್ತು ಸಾರಿಗೆ' ಮುಖ್ಯ ವಿಷಯದ ತರಗತಿಯುದ್ದಕ್ಕೂ ಇದನ್ನು ಪುನರಾವರ್ತಿಸಬೇಕು.

### ಸೂಚನೆಗಳು

1. ಶಿಶುಗೀತೆಯನ್ನು ಪರಿಚಯಿಸುವುದು ಮತ್ತು ಅದು ಯಾವುದನ್ನು ಕುರಿತಾದದ್ದು ಎಂದು ಮಕ್ಕಳಿಗೆ ವಿವರಿಸುವುದು.
2. ಶಿಶುಗೀತೆಯನ್ನು ಲಯಬದ್ಧವಾಗಿ ಭಾವಾಭಿನಯದೊಂದಿಗೆ ಪೂರ್ತಿಯಾಗಿ ಮಕ್ಕಳು ಕೇಳಿಸಿಕೊಳ್ಳುವಂತೆ ಹಾಡುವುದು.
3. ಗೀತೆಯ ಪ್ರತಿಯೊಂದು ಸಾಲನ್ನೂ ನೀವು ಹಾಡಿದ ಮೇಲೆ ಹಾಡುವಂತೆ ಮಕ್ಕಳಿಗೆ ಹೇಳುವುದು ಮತ್ತು ಚಿತ್ರವನ್ನು ತೋರಿಸಿ ಅದರ ಅರ್ಥವನ್ನು ವಿವರಿಸುವುದು.
4. ಪದಗಳಿಗೆ ಹೊಂದುವ ಅಭಿನಯವನ್ನು ತೋರಿಸಿ, ಅದನ್ನು ಮಕ್ಕಳು ಅನುಸರಿಸಲು ಹೇಳುವುದು.
5. ಈಗ ನಿಮ್ಮ ಜೊತೆಗೆ ಅಭಿನಯ ಮಾಡುತ್ತಾ ಹಾಡಲು ಹೇಳುವುದು.
6. ಮಕ್ಕಳು ಗುಂಪಿನಲ್ಲಿ ಅಥವಾ ಒಬ್ಬೊಬ್ಬರಾಗಿ ಹಾಡಲು ಪ್ರೋತ್ಸಾಹಿಸುವುದು.




Scanned with CamScanner

ಶಿಶುಗೀತೆ 1

## ಬರುತಿದೆ ರೈಲು

# ಬರುತಿದೆ ರೈಲು

ಬರುತಿದೆ ಬರುತಿದೆ ಬರುತಿದೆ ರೈಲು
ಹಳಿಗಳ ಮೇಲೆ ಚುಕು ಬುಕು ರೈಲು
ಜನಗಳು ತುಂಬಿದ ಅಂದದ ರೈಲು
ಹೊಗೆಯನು ಉಗುಳುವ ಉದ್ದದ ರೈಲು
ಮಕ್ಕಳು ಮೆಚ್ಚುವ ಚೆಂದದ ರೈಲು
ಮಕ್ಕಳ ಪ್ರೀತಿಯ ಚುಕು ಬುಕು ರೈಲು





Scanned with CamScanner


ಶಿಶುಗೀತೆ 2

## ಉದ್ದದ ಅಗಲದ ರಸ್ತೆ

# ಉದ್ದದ ಅಗಲದ ರಸ್ತೆ

ಉದ್ದದ ಅಗಲದ ರಸ್ತೆಯು ನೋಡಿ
ಅದರಲಿ ಬರುವುದು ಮೋಟಾರ್ ಗಾಡಿ
ಮಕ್ಕಳೆಲ್ಲರೂ ರಸ್ತೆಯು ಬಿಟ್ಟು
ಪಕ್ಕಕೆ ಬನ್ನಿ (2)

ರಸ್ತೆಯು ಮಧ್ಯಕೆ ಹೋಗದಿರಿ
ಅಪಘಾತದಿಂದ ದೂರವಿರಿ (2)
ತಿಳಿದು ತಪ್ಪನು ಮಾಡದಿರಿ (2)






Scanned with CamScanner

ಶಿಶುಗೀತೆ 3

## Red light, Red light

### Red light, red light

Red light, red light
What do you say?
I say stop and stop right there!
Yellow light, yellow light
What do you mean?
I say wait, till the light turns green
Green light, green light
What do you say?
I say go and go right away








Scanned with CamScanner



## ಶಿಲ್ಪ ಎಂಜಿನ್ ಮತ್ತು ಗೆಳೆಯರು

### ಕಲಿಕಾ ಫಲಿತಗಳು

ಮಕ್ಕಳು "ಶಿಲ್ಪ ಎಂಜಿನ್" ಕಥೆಯನ್ನು ಅರ್ಥಮಾಡಿಕೊಳ್ಳುತ್ತಾರೆ. "ಏನು? ಏಕೆ? ಹೇಗೆ? ಮತ್ತು ಯಾವಾಗ?" ಎಂಬ ಪ್ರಶ್ನೆಗಳನ್ನು ಅರ್ಥಮಾಡಿಕೊಂಡು ಉತ್ತರಿಸುತ್ತಾರೆ.

### ಶಿಕ್ಷಕರ ಪೂರ್ವಸಿದ್ಧತೆ


ಕಥೆಯನ್ನು ಮೊದಲೇ ಓದಿ ಅದನ್ನು ಸರಿಯಾಗಿ ಅರ್ಥೈಸಿಕೊಳ್ಳುವುದು ಹಾಗೂ ಕಥೆಯನ್ನು ಧ್ವನಿಯ ಏರಿಳಿತಗಳೊಂದಿಗೆ ನಿರೂಪಿಸುವುದನ್ನು ಅಭ್ಯಾಸ ಮಾಡಿಕೊಳ್ಳುವುದು.

### ಕಲಿಕಾ ಸಾಮಗ್ರಿ

ಕಥೆ ಪುಸ್ತಕ.

### ಕಥೆಯ ಸಂಕ್ಷಿಪ್ತ ರೂಪ

ಶಿಲ್ಪ ಎಂಬ ಒಂದು ರೈಲಿನ ಎಂಜಿನ್ ಇತ್ತು. ಒಂದು ದಿನ ಅದು ಮೂರು ಬೋಗಿಗಳನ್ನು ವಿಹಾರಕ್ಕೆಂದು ಕರೆದೊಯ್ಯಿತು. ಮೂರು ಬೋಗಿಗಳು ಬಹಳ ಸಂತೋಷದಿಂದಿದ್ದವು. ಅಷ್ಟರಲ್ಲಿ ಅವರು ದಾಟಬೇಕಾಗಿರುವ ಒಂದು ಬೆಟ್ಟವು ಅಡ್ಡ ಬಂತು. ಶಿಲ್ಪ ಎಂಜಿನ್ ಬಹಳ ಕಷ್ಟ ಪಟ್ಟು ಬೆಟ್ಟವನ್ನು ಹತ್ತಲು ಪ್ರಯತ್ನಿಸಿತು. ಅದು ಏದುಸಿರು ಬಿಡುತ್ತಾ ಬೆಟ್ಟವನ್ನು ಹತ್ತಲು ಪ್ರಯತ್ನಿಸಿದರೂ ಬೆಟ್ಟವನ್ನು ಹತ್ತಲು ಆಗಲಿಲ್ಲ. ಅದು ಬೋಗಿಗಳನ್ನು ಅಲ್ಲಿಯೇ ಬಿಟ್ಟು ಬೇರೆ ಯಾರಿಂದಾದರೂ ಸಹಾಯ ಕೇಳಲೆಂದು ಹೊರಟಿತು. ಅದು ವಯಸ್ಸಾದ ಹಳೆಯ ಎಂಜಿನ್ ತಿಮ್ಮು ತಾತನ ಸಹಾಯ ಕೇಳಿತು. ತಿಮ್ಮು ತಾತ ಎಂಜಿನ್ ಹೇಳಿತು " ನಾನು ಬಹಳ ಬಲಹೀನನಾಗಿದ್ದೇನೆ. ಕ್ಷಮಿಸು, ನಿನಗೆ ಸಹಾಯ ಮಾಡಲು ಆಗುವುದಿಲ್ಲ." ನಂತರ ಶಿಲ್ಪ ಬಲಶಾಲಿಯಾದ ಚಂದು ಮಾಮ






Scanned with CamScanner

## ಶಿಲ್ಪ ಎಂಜಿನ್ ಮತ್ತು ಗೆಳೆಯರು



ಎಂಜಿನ್‌ನ ಸಹಾಯ ಕೇಳಿತು. ಆಗ ಅದು "ನಾನು ಈಗ ತಾನೇ ನನ್ನ ಕೆಲಸವನ್ನು ಮುಗಿಸಿ ಬಂದಿದ್ದೇನೆ. ನನಗೆ ಆಯಾಸವಾಗಿದೆ. ಆದ್ದರಿಂದ ನಿನಗೆ ಸಹಾಯ ಮಾಡಲು ಆಗುವುದಿಲ್ಲ." ಎಂದು ಹೇಳಿತು. ಶಿಲ್ಪಾಗೆ ಬಹಳ ದುಃಖವಾಯಿತು.

ಯಾರ ಸಹಾಯವೂ ಸಿಕ್ಕದೆ ಅದು ಹಿಂದಿರುಗತೊಡಗಿತು. ದಾರಿಯಲ್ಲಿ ಅದಕ್ಕೆ ಅದರ ಸ್ನೇಹಿತನಾದ ಬಾಲು ಎಂಜಿನ್ ಸಿಕ್ಕಿತು. ಅದು ಶಿಲ್ಪಾಳನ್ನು ಏಕೆ ದುಃಖಿತಳಾಗಿರುವೆ? ಎಂದು ಕೇಳಿತು. ಅದು ಬಾಲುಗೆ ತನ್ನ ಕಥೆಯನ್ನೆಲ್ಲಾ ಹೇಳಿತು. ಬಾಲು ಶಿಲ್ಪಾಗೆ ಸಹಾಯ ಮಾಡಲು ಸಂತೋಷದಿಂದ ಮುಂದಾಯಿತು. ಶಿಲ್ಪಾ ಎಂಜಿನ್ ಮತ್ತು ಅದರ ಮೂರು ಬೋಗಿಗಳನ್ನು ಹಿಂದಿನಿಂದ ಬಾಲು ಎಂಜಿನ್ ದೂಡತೊಡಗಿತು. ಶಿಲ್ಪ ಮುಂದಿನಿಂದ ಎಳೆಯತೊಡಗಿತು. ಶಿಲ್ಪಾಗೆ ಈಗ ಸುಲಭವಾಗಿ ಮೇಲೆ ಏರಲು ಸಾಧ್ಯವಾಯಿತು. "ಚುಕ್ ಬುಕ್ ಚುಕ್ ಬುಕ್" ಎಂದು ಅದು ಮುಂದೆ ಹೋಯಿತು. ಬೋಗಿಗಳು ಗಡಗಡ ಸದ್ದು ಮಾಡುತ್ತಾ ಮೇಲೆ ಹೋದವು. ಕ್ಲಿಂಗ್ ಕ್ಲಾಂಗ್ ಕ್ಲಿಂಗ್ ಕ್ಲಾಂಗ್ ಎಂದು ಬಾಲು ಎಂಜಿನ್ ಎಲ್ಲರನ್ನೂ ಹಿಂದಿನಿಂದ ದಬ್ಬಿತು.

ಬೆಟ್ಟದಲ್ಲಿರುವ ಎಲ್ಲಾ ಪಶು ಪಕ್ಷಿಗಳು ಎಚ್ಚರಗೊಂಡವು. ಶಿಲ್ಪ ಮತ್ತು ಅದರ ಬೋಗಿಗಳನ್ನು ಕಂಡು ಅವು ವಿಭಿನ್ನ ಭಾವನೆಗಳನ್ನು ತೋರಿದವು. ಬನ್ನಿ, ಅವುಗಳು ಏನೇನು ತೋರಿದವು ಎಂದು ನೋಡೋಣ.

ಅಜ್ಜಿ ಗೂಬೆಗೆ ಏನನ್ನಿಸಿತು? ಅದರ ಮುಖವನ್ನು ನೋಡಿ. ಅದಕ್ಕೆ ಏಕೆ ಬೇಸರವಾಗಿದೆ? (ಸುಳಿವು: ಅದಕ್ಕೆ ಗಲಾಟೆ/ಶಬ್ದ ಇಷ್ಟವಾಗುವುದಿಲ್ಲವೇ?)

ಪುಟ್ಟ ಗುಬ್ಬಿಗೆ ಏನನ್ನಿಸುತ್ತಿದೆ? ಅದು ಏಕೆ ಹಾರಿ ಹೋಗುತ್ತಿದೆ? (ಸುಳಿವು: ಅದಕ್ಕೆ ಭಯವಾಗಿರಬಹುದು)

ಕೋತಿಗೆ ಏನನ್ನಿಸುತ್ತಿದೆ? ಅದು ಏಕೆ ನಗುತ್ತಿದೆ ಮತ್ತು ಖುಷಿಯಾಗಿದೆ? (ಸುಳಿವು: ಕೋತಿಗಳಿಗೆ ಗಲಾಟೆ ಮತ್ತು ಸಾಹಸವೆಂದರೆ ಇಷ್ಟವೇ?)

ಮೊಲಕ್ಕೆ ಏಕೆ ಅಷ್ಟು ಸಂತೋಷವಾಗಿದೆ? (ಅವರೆಲ್ಲರಿಗೂ ರೈಲನ್ನು ನೋಡಲು ಇಷ್ಟವಾಗುತ್ತದೆಯೇ? ಅಥವಾ ಅವರ ಸ್ನೇಹಿತರಿಗೆ ಕೋಪ ಬರುತ್ತಿದೆಯೇ? ಭಯವಾಗುತ್ತಿದೆಯೇ? ಸಣ್ಣ ಪ್ರಾಣಿಗಳಿಗೂ ತಮ್ಮ ಪರಿಸರದಲ್ಲಿ ಇಂತಹ ವಾಹನಗಳಿಂದ ತೊಂದರೆಯಾಗುತ್ತದೆಯೇ?)

ಅವರು ಬೆಟ್ಟದ ಇನ್ನೊಂದು ಬದಿಯನ್ನು ತಲುಪಿದಾಗ ಶಿಲ್ಪ ಮತ್ತು ಅದರ ಬೋಗಿಗಳಿಗೆ ಬಹಳ ಸಂತೋಷವಾಯಿತು. ಬಾಲು ಎಂಜಿನ್‌ಗೆ ತಮ್ಮ ಜೊತೆ ಇರಲು ಮತ್ತು ವನಭೋಜನವನ್ನು ಸವಿಯಲು ಆಮಂತ್ರಣ ನೀಡಿದವು.

### ಸೂಚನೆಗಳು

**ಹಂತ 1.** ಮೇಲಿನ ಕಥೆಯನ್ನು ಪರಿಚಯಿಸುವುದು (ಮಕ್ಕಳೊಂದಿಗೆ ವಿಷಯದ ಬಗ್ಗೆ ಚರ್ಚಿಸುತ್ತಾ ಅದನ್ನು ಅವರ ದಿನನಿತ್ಯದ ಅನುಭವಗಳಿಗೆ ಹೋಲಿಸುವುದು. ಪುಸ್ತಕದ ಮುಖಪುಟವನ್ನು ತೋರಿಸುತ್ತಾ ಕಥೆ ಯಾವುದರ ಬಗ್ಗೆ ಇರಬಹುದು ಎಂಬುದರ ಬಗ್ಗೆ ಚರ್ಚಿಸುವುದು.)

**ಹಂತ 2.** ಕಥೆಯನ್ನು ನಿಮ್ಮದೇ ಆದ ಪದಗಳಲ್ಲಿ ಸೂಕ್ತವಾದ ಹಾವಭಾವ ಹಾಗೂ ಧ್ವನಿಯ ಏರಿಳಿತದೊಂದಿಗೆ ಹೇಳುವುದು.

**ಹಂತ 3.** ಕಥೆ ಓದುತ್ತಾ ಅದಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಕೇಳುತ್ತಾ ಹೋಗುವುದು ಮತ್ತು ಮುಖ್ಯ ಪದಗಳನ್ನು ವಿವರಿಸುತ್ತಾ ಕಥೆಯಲ್ಲಿನ ಮುಖ್ಯ ಪಾತ್ರಗಳು ಹಾಗೂ ಘಟನೆಗಳ ಕಡೆಗೆ ಗಮನ ಸೆಳೆಯುವುದು.

**ಪ್ರತಿಧ್ವನಿ ಪ್ರಶ್ನೆಗಳಿಗೆ ಉದಾಹರಣೆಗಳು.**

- "ಒಂದು ದಿನ ಶಿಲ್ಪ ಎಂಜಿನ್ ಮೂರು ಬೋಗಿಗಳನ್ನು ವಿಹಾರ(ವನಭೋಜನ)ಕ್ಕೆಂದು ಕರೆದೊಯ್ಯಿತು."–ಬೋಗಿಗಳನ್ನು ವಿಹಾರಕ್ಕೆಂದು ಯಾರು ಕರೆದೊಯ್ದರು? ಶಿಲ್ಪ ಯಾರನ್ನು ವಿಹಾರಕ್ಕೆಂದು ಕರೆದೊಯ್ಯಿತು? ಎಷ್ಟು ಬೋಗಿಗಳನ್ನು ವಿಹಾರಕ್ಕೆಂದು ಕರೆದೊಯ್ಯಿತು?
- "ಅದು ವಯಸ್ಸಾದ ಹಳೆಯ ಎಂಜಿನ್ ತಿಮ್ಮು ತಾತನ ಸಹಾಯ ಕೇಳಿತು." ಅದು ಯಾರ ಸಹಾಯ ಕೇಳಿತು?
- "ನಾನು ಈಗ ತಾನೇ ನನ್ನ ಕೆಲಸವನ್ನು ಮುಗಿಸಿ ಬಂದಿದ್ದೇನೆ. ನನಗೆ ಆಯಾಸವಾಗಿದೆ. ಆದ್ದರಿಂದ ನಿನಗೆ ಸಹಾಯ ಮಾಡಲು ಆಗುವುದಿಲ್ಲ" ಎಂದು ಚಂದು ಮಾಮ ಹೇಳಿತು. ಚಂದು ಮಾಮ ಏನೆಂದು ಹೇಳಿತು?



Scanned with CamScanner

## ಶಿಲ್ಪ ಎಂಜಿನ್ ಮತ್ತು ಗೆಳೆಯರು



**ಹಂತ** 4. ಕಥೆಯ ಕೊನೆಯಲ್ಲಿ ಸರಳವಾದ, ನೆನಪಿಸಿಕೊಳ್ಳುವ ಮತ್ತು ಗ್ರಹಿಕೆಯ ಪ್ರಶ್ನೆಗಳನ್ನು ಕೇಳುವುದು. ನೆನಪಿಸಿಕೊಳ್ಳುವ ಮತ್ತು ಗ್ರಹಿಕೆಯ ಪ್ರಶ್ನೆಗಳಿಗೆ ಉದಾಹರಣೆಗಳು.

- ಶಿಲ್ಪ ಎಂಬ ಎಂಜಿನ್ ಮತ್ತು ಬೋಗಿಗಳು ಎಲ್ಲಿಗೆ ಹೋಗುತ್ತಿದ್ದವು?
- ವಿಹಾರಕ್ಕೆಂದು ಹೋಗುತ್ತಿರುವಾಗ ದಾರಿಯಲ್ಲಿ ಏನಾಯಿತು?
- ಶಿಲ್ಪ ಎಂಜಿನ್‌ಗೆ ಯಾರು ಸಹಾಯ ಮಾಡಿದರು?

**ಹಂತ** 5. ಊಹಿಸಲು ಅವಕಾಶವಿರುವ ಅಥವಾ "ಹೀಗಾಗಿದ್ದರೆ ಏನಾಗುತ್ತಿತ್ತು" ಪ್ರಶ್ನೆಗಳನ್ನು ಕೇಳುತ್ತಾ ಹೋಗುವುದು:

- ನೀವು ಚಂದು ಮಾಮ ಆಗಿದ್ದರೆ ಶಿಲ್ಪಾಗೆ ಸಹಾಯ ಮಾಡುತ್ತಿದ್ದಿರಾ? ಏಕೆ?

**ಹಂತ** 6. ಕಥೆಯ ಪಾತ್ರಗಳೊಂದಿಗೆ ಮಕ್ಕಳು ಸಂವೇದನಾಶೀಲತೆಯನ್ನು ತೋರಲು ಅಗತ್ಯವಿರುವ ಸರಳವಾದ ಪ್ರಶ್ನೆಗಳನ್ನು ಕೇಳುವುದು.

- ಶಿಲ್ಪ ಎಂಜಿನ್‌ಗೆ ಮಾತ್ರ ಬೋಗಿಗಳನ್ನು ಎಳೆಯಲು ಏಕೆ ಆಗಲಿಲ್ಲ?
- ಶಿಲ್ಪಾಗೆ ಸಹಾಯ ಮಾಡಲು ಯಾರೂ ಸಿಗದಿದ್ದರೆ ಏನಾಗುತ್ತಿತ್ತು?
- ತಿಮ್ಮು ತಾತನಿಗೆ ಶಿಲ್ಪಾಗೆ ಸಹಾಯ ಮಾಡಲು ಏಕೆ ಆಗಲಿಲ್ಲ?
- ತಾತ ಎಂಜಿನ್ ಬಲಹೀನವಾಗಿತ್ತು / ಆದರೆ ಚಂದು ಎಂಜಿನ್ ಬಲಶಾಲಿಯಾಗಿತ್ತು. ಆದರೂ ಅದು ಏಕೆ ಸಹಾಯ ಮಾಡಲಿಲ್ಲ?
- ನಿಮಗೆ ಆಯಾಸವಾಗಿದ್ದರೆ ಏನಾಗುತ್ತದೆ?

**ಹಂತ** 7. ಮಕ್ಕಳಿಗೆ ತಮ್ಮ ಪದಗಳನ್ನು ಉಪಯೋಗಿಸಿಕೊಂಡು 2–4 ವಾಕ್ಯಗಳಲ್ಲಿ ಕಥೆಯನ್ನು ಹೇಳಲು ನೆರವು ನೀಡುವುದು.



Scanned with CamScanner

# ಸೃಜನಾತ್ಮಕ ಚಟುವಟಿಕೆಗಳು

ಚಟುವಟಿಕೆ 1

## ನಮೂನೆ ತಯಾರಿಸುವುದು

### ಕಲಿಕಾ ಸಾಮಗ್ರಿಗಳು

ವಿವಿಧ ಗಾತ್ರದ ಎಲೆಗಳು, ಕತ್ತರಿಸಿದ ತರಕಾರಿ ತುಂಡುಗಳು, ಬಿಳಿಯ ಹಾಳೆಗಳು, ಬಣ್ಣಗಳು.

### ಸೂಚನೆಗಳು

1. ಮಕ್ಕಳನ್ನು ಒಟ್ಟು ಮಕ್ಕಳ ಸಂಖ್ಯೆಯ ಆಧಾರದ ಮೇಲೆ ಸಣ್ಣ ಸಣ್ಣ ಗುಂಪುಗಳಾಗಿ ವಿಂಗಡಿಸುವುದು.
2. ವಿವಿಧ ಗಾತ್ರದ ಎಲೆಗಳು, ಹೆಚ್ಚಿದ ತರಕಾರಿ ತುಂಡುಗಳು ಮತ್ತು 2–3 ಬಣ್ಣಗಳನ್ನು ಪ್ರತಿಯೊಂದು ಗುಂಪಿಗೂ ಕೊಡುವುದು.
3. ಒಂದೊಂದು ಬಿಳಿಯ ಹಾಳೆಯನ್ನು ಪ್ರತಿಯೊಂದು ಮಗುವಿಗೂ ಕೊಡುವುದು.
4. ಎಲೆಗಳನ್ನು ಮತ್ತು ಹೆಚ್ಚಿದ ತರಕಾರಿ ತುಂಡುಗಳನ್ನು ಬಣ್ಣಗಳಲ್ಲಿ ಅದ್ದಿ ಅವುಗಳ ಅಚ್ಚನ್ನು ಹಾಳೆಯ ಮೇಲೆ ಒತ್ತುವಂತೆ ಹೇಳುವುದು.

ಚಟುವಟಿಕೆ 2

## ರಂಗೋಲಿ

### ಕಲಿಕಾ ಸಾಮಗ್ರಿಗಳು

ವಿವಿಧ ಎಲೆಗಳು, ಸಣ್ಣ ರೆಂಬೆಗಳು, ಹೂವುಗಳು ಮತ್ತು ಕಡ್ಡಿಗಳು.

### ಸೂಚನೆಗಳು

1. ಮಕ್ಕಳಿಗೆ ಶಾಲೆಯ ಆವರಣದ ಸುತ್ತಲೂ ಹೋಗಿ ವಿವಿಧ ಒಣ ಎಲೆಗಳು, ಸಣ್ಣ ರೆಂಬೆಗಳು ಮತ್ತು ಹೂವುಗಳನ್ನು ಆರಿಸಿಕೊಂಡು ಬರಲು ಹೇಳುವುದು.
2. ತಾವು ಸಂಗ್ರಹಿಸಿದ ಎಲ್ಲಾ ವಸ್ತುಗಳನ್ನು ಒಂದು ಕಡೆ ಇಡಲು ಹೇಳುವುದು.
3. ಮಕ್ಕಳನ್ನು ಸಣ್ಣ ಗುಂಪುಗಳಾಗಿ ವಿಂಗಡಿಸಿ ಸಂಗ್ರಹಿಸಿದ ವಸ್ತುಗಳನ್ನು ಅವರಿಗೆ ಕೊಟ್ಟು ಅವುಗಳನ್ನು ಉಪಯೋಗಿಸಿಕೊಂಡು ರಂಗೋಲಿಗಳನ್ನು/ವಿವಿಧ ನಮೂನೆಗಳನ್ನು ತಯಾರಿಸಲು ಹೇಳುವುದು.
4. ಚಟುವಟಿಕೆ ಮುಗಿದ ಮೇಲೆ ಆ ಜಾಗವನ್ನು ಸ್ವಚ್ಛ ಮಾಡಲು ಮಕ್ಕಳಿಗೆ ಹೇಳುವುದು.
5. ಶಿಕ್ಷಕರು ಮಕ್ಕಳೊಂದಿಗೆ ಹೋಗಿ ಸಂಗ್ರಹಿಸಲು ಸಹಕರಿಸುವುದು.



Scanned with CamScanner

## ಸೃಜನಾತ್ಮಕ ಚಟುವಟಿಕೆಗಳು

ಚಟುವಟಿಕೆ 3

### ಮುಕ್ತ ಶೈಲಿಯಲ್ಲಿ ಚಿತ್ರ ಬಿಡಿಸುವುದು

#### ಕಲಿಕಾ ಸಾಮಗ್ರಿಗಳು

ಸೀಮೆಸುಣ್ಣಗಳು

#### ಸೂಚನೆಗಳು

1. ತರಗತಿಯಲ್ಲಿರುವ ಕಪ್ಪುಹಲಗೆಯ ಜಾಗವನ್ನು ಪ್ರತಿಯೊಂದು ಮಗುವಿಗೂ ಹಂಚಿ ಅವರಿಗೆ ಸೀಮೆಸುಣ್ಣವನ್ನು ಕೊಡುವುದು.
2. ಅವರಿಗೆ ಇಷ್ಟವಾದದ್ದನ್ನು ಬರೆಯಲು ಹೇಳುವುದು.
3. ಪ್ರತಿಯೊಂದು ಮಗುವಿನ ಬಳಿಯೂ ಹೋಗಿ ಅದು ಏನು ಬರೆದಿದೆ ಎಂದು ಕೇಳಿ ಅದರ ಬಗ್ಗೆ ಮಾತನಾಡಲು ಮಗುವನ್ನು ಪ್ರೋತ್ಸಾಹಿಸುವುದು.





Scanned with CamScanner

ಚಟುವಟಿಕೆ 1

## ಚಿತ್ರಬಂಧವನ್ನು ಪೂರ್ತಿ ಮಾಡುವುದು

### ಕಲಿಕಾ ಸಾಮಗ್ರಿಗಳು

ಹಿಂದಿನ ಹಾಳೆಯ ಉಪವಿಷಯಗಳಲ್ಲಿ ರಟ್ಟಿನಿಂದ ಮಾಡಿದ ಚಿತ್ರಬಂಧಗಳು. 4 ಅಥವಾ 5 ತುಂಡುಗಳಿರುವ ವಾಹನಗಳ ವಿವಿಧ ಚಿತ್ರಬಂಧಗಳು. ಚೌಕಾಕಾರವಾಗಿ ಕತ್ತರಿಸಿದ್ದರೆ 6 ತುಂಡುಗಳ ಚಿತ್ರಬಂಧ.

### ಸೂಚನೆಗಳು

1. ಮಕ್ಕಳನ್ನು ಸಣ್ಣ ಗುಂಪುಗಳಾಗಿ ವಿಂಗಡಿಸಿ ಪ್ರತಿಯೊಂದು ಗುಂಪಿಗೂ ಎರಡು ಮೂರು ಜೊತೆ ಚಿತ್ರಬಂಧಗಳನ್ನು ಕೊಡುವುದು.
2. ಗುಂಪಿನಲ್ಲಿರುವ ಎಲ್ಲರೂ ಸೇರಿ ಚಿತ್ರಗಳನ್ನು ಪೂರ್ತಿ ಮಾಡಲು ಹೇಳುವುದು.
3. ಪೂರ್ತಿ ಮಾಡಿದ ಮೇಲೆ ತಮ್ಮ ಚಿತ್ರಬಂಧವನ್ನು ಇತರ ಗುಂಪುಗಳ ಜೊತೆ ವಿನಿಮಯ ಮಾಡಿಕೊಳ್ಳಲು ಹೇಳುವುದು.
4. ಮಕ್ಕಳು ಚಟುವಟಿಕೆಯನ್ನು ಮುಗಿಸಿದ ಮೇಲೆ ಚಿತ್ರಬಂಧಗಳನ್ನು ಸ್ವಸ್ಥಾನದಲ್ಲಿ ಇಡಲು ಹೇಳುವುದು.

ಚಟುವಟಿಕೆ 2

## ಜೊತೆಗಾರರನ್ನು ಹುಡುಕುವುದು

### ಕಲಿಕಾ ಸಾಮಗ್ರಿಗಳು

**ಮಿಂಚುಪಟ್ಟಿಗಳು (F6.3.3)**: ಸಂತೋಷ, ದುಃಖ, ಅಳು ಮತ್ತು ಕೋಪ ಮೊದಲಾದ ಪ್ರತಿಯೊಂದು ಭಾವನೆಗಳ ಎರಡು ಜೊತೆ. ಶಿಕ್ಷಕರು ಇಂತಹ ಹೆಚ್ಚಿನ ವಿವಿಧ ಭಾವನೆಗಳ ಕಾರ್ಡ್‌ಗಳನ್ನು ವಾಹನಗಳು ಮತ್ತು ಪ್ರಾಣಿಗಳ ಚಿತ್ರಗಳನ್ನು ಉಪಯೋಗಿಸಿ ಮಾಡಬಹುದು.

### ಸೂಚನೆಗಳು

1. ಎರಡು ಜೊತೆ ಮಿಂಚುಪಟ್ಟಿಗಳನ್ನು ಮಧ್ಯದಲ್ಲಿ ಮುಖ ಕೆಳಗೆ ಮಾಡಿ ಇಡುವುದು.
2. ಮಕ್ಕಳಿಗೆ ಸದ್ದನ್ನು (ಉದಾ-ಚಪ್ಪಾಳೆ) ಅನುಸರಿಸುತ್ತಾ ವೃತ್ತಾಕಾರವಾಗಿ ಸುತ್ತಲು ಹೇಳುವುದು.
3. ಸದ್ದು ನಿಂತ ತಕ್ಷಣ ಮಧ್ಯದಲ್ಲಿರುವ ಒಂದೊಂದು ಕಾರ್ಡನ್ನು ತೆಗೆದುಕೊಳ್ಳಲು ಮಕ್ಕಳಿಗೆ ಹೇಳುವುದು.
4. ಆ ಕಾರ್ಡನ್ನು ಯಾರಿಗೂ ತೋರಿಸದಿರಲು ಹೇಳುವುದು.
5. ಆ ಕಾರ್ಡಿನಲ್ಲಿರುವ ಭಾವನೆಯನ್ನು ತಮ್ಮ ಮುಖದಲ್ಲಿ ತೋರಿಸುತ್ತಾ ಚಲಿಸಲು ಹೇಳುವುದು.
6. ಅದೇ ಭಾವನೆಯನ್ನು ತಮ್ಮ ಮುಖದಲ್ಲಿ ತೋರಿಸುತ್ತಿರುವ ಇನ್ನೊಂದು ಮಗುವನ್ನು ಹುಡುಕಿ ಅದರ ಜೊತೆ ಜೋಡಿಯಾಗಲು ಈ ಮಗುವಿಗೆ ಹೇಳುವುದು.



Scanned with CamScanner

ಚಟುವಟಿಕೆ 3

## ಶಬ್ದ ಮತ್ತು ನಾಯಕನನ್ನು ಅನುಸರಿಸುವುದು

ಶಬ್ದಗಳು ಮತ್ತು ತಪ್ಪಿದ ತಾಳಗಳನ್ನೊಳಗೊಂಡ ಮಾದರಿಯ ಮೂಲಕ ಕೆಳಗೆ ವಿವರಿಸಿದಂತೆ ಮಕ್ಕಳಿಗೆ ತೋರಿಸಿಕೊಡುವುದು.

1. ಚಪ್ಪಾಳೆ (ಒಂದು, ಎರಡು) ಎಣಿಕೆ ಮಾಡುವುದು (ಒಂದು, ಎರಡು) ಚಪ್ಪಾಳೆ (ಒಂದು, ಎರಡು). ಮಕ್ಕಳಿಗೆ ಈ ಮಾದರಿಯನ್ನು ಅನುಸರಿಸಲು ಹೇಳುವುದು. ಮಕ್ಕಳು ಒಂದು, ಎರಡು ಎಂದು ಹೇಳುತ್ತಾ ಎರಡು ಬಾರಿ ಚಪ್ಪಾಳೆ ತಟ್ಟುತ್ತಾರೆ ಮತ್ತು ಒಂದು, ಎರಡು ಎಂದು ಜೋರಾಗಿ ಎಣಿಕೆ ಮಾಡುತ್ತಾರೆ. ಮತ್ತೆ ಎರಡು ಬಾರಿ ಚಪ್ಪಾಳೆ ತಟ್ಟುತ್ತಾರೆ. ಮೊದಲು ನಿಮ್ಮ ಜೊತೆ ಜೊತೆಗೆ ಇದನ್ನು ಮಾಡಲು ಹೇಳಿ. ನಂತರ ಅವರು ಮೊದಲು ಜೋರಾಗಿ ನಂತರ ತಮ್ಮ ಮನಸ್ಸಿನಲ್ಲೇ ಎಣಿಕೆ ಮಾಡಲು ಬಿಡಿ.
2. ಮಕ್ಕಳು ಒಂದು ಬಾರಿ ಈ ಮಾದರಿಯನ್ನು ಮಾಡಲು ಕಲಿತ ತಕ್ಷಣ ಬೇರೊಂದು ಮಾದರಿಗೆ ಬದಲಿಸುವುದು. ಚಪ್ಪಾಳೆ-ಚಪ್ಪಾಳೆ-ಅಂತರ/ಚಪ್ಪಾಳೆ-ಚಪ್ಪಾಳೆ-ಅಂತರ/ಚಪ್ಪಾಳೆ-ಚಪ್ಪಾಳೆ-ಅಂತರ. ಈ ಬಾರಿ ಜೋರಾಗಿ ಎಣಿಕೆ ಮಾಡದಂತೆ ಮಾದರಿಯನ್ನು ಅನುಸರಿಸಲು ಹೇಳುವುದು. ನಂತರ ಮಾದರಿಯನ್ನು ನೀವು ಹೇಳುವವರೆಗೆ ನಿಲ್ಲಿಸದಂತೆ ಮಕ್ಕಳಿಗೆ ಮುಂದುವರೆಸಲು ಹೇಳುವುದು.
3. ನಂತರ ಸ್ವಲ್ಪ ಸಂಕೀರ್ಣ ಮಾದರಿಯನ್ನು ತೋರಿಸಿ-ಉದಾಹರಣೆಗೆ-ಚಪ್ಪಾಳೆ-ಅಂತರ/ಚಪ್ಪಾಳೆ-ಚಪ್ಪಾಳೆ-ಅಂತರ/ಚಪ್ಪಾಳೆ-ಅಂತರ/ಚಪ್ಪಾಳೆ-ಚಪ್ಪಾಳೆ-ಅಂತರ/. ಮಕ್ಕಳು ಅದನ್ನು ಅನುಸರಿಸಲು ಅವಕಾಶ ಮಾಡಿಕೊಡುವುದು. ಆಮೇಲೆ ಅದೇ ಲಯವನ್ನು ಮುಂದುವರೆಸಲು ಬಿಡುವುದು.
4. ಒಮ್ಮೆ ಈ ಚಟುವಟಿಕೆಯನ್ನು ಮಕ್ಕಳು ಅವರೇ ಸರಾಗವಾಗಿ ಮಾಡಲು ಸಮರ್ಥರಾದಾಗ ಬೇರೆ ಬೇರೆ ಕ್ರಿಯೆಗಳನ್ನು ಮಾಡಲು ಅವರಿಗೆ ಮಾರ್ಗದರ್ಶನ ನೀಡಿ. ಉದಾಹರಣೆಗೆ ಮೊಣಕಾಲು ತಟ್ಟಿಕೊಂಡು ಶಬ್ದಮಾಡುವುದು, ಮುಂತಾದವು.

ಚಟುವಟಿಕೆ 4

## ಬೋಗಿಯನ್ನು ಹೊಂದಿಸುವುದು

### ಕಲಿಕಾ ಸಾಮಗ್ರಿಗಳು

**ಮಿಂಚು ಪಟ್ಟಿಗಳು F6.3.4:** ವಿವಿಧ ಮಟ್ಟದಲ್ಲಿ ಸಾಮಾನನ್ನು ಹೊತ್ತುಕೊಂಡಿರುವ 6 ಬೋಗಿಗಳು (5 ಜೊತೆಯ 30 ಕಾರ್ಡ್‌ಗಳು). ಪ್ರತಿಯೊಂದು ಬೋಗಿಯೂ ಒಂದೊಂದು ಭಾವನೆಯನ್ನು ತನ್ನ ಮುಖದ ಮೇಲೆ ತೋರ್ಪಡಿಸುತ್ತದೆ. ತಾವು ಹೊತ್ತ ಸಾಮಾನಿನ ಭಾರಕ್ಕೆ ಅನುಗುಣವಾಗಿರುವ 1. ಅಳುಮುಖ 2. ದುಃಖಭರಿತ ಜೋಲುಮುಖ 3. ಮಾಮೂಲಾಗಿರುವ ಯಾವುದೇ ಭಾವನೆಯಿಲ್ಲದ ಮುಖ 4. ಮಂದಹಾಸ. 5. ನಗುಮುಖಗಳು 6. ಜೋರಾಗಿ ನಗುತ್ತಿರುವ ಮುಖ.

### ಸೂಚನೆಗಳು

1. ಮಿಂಚುಪಟ್ಟಿಗಳನ್ನು ಮಧ್ಯದಲ್ಲಿಟ್ಟು ಮಕ್ಕಳಿಗೆ ಒಂದೊಂದು ಮಿಂಚುಪಟ್ಟಿಯನ್ನು ತೆಗೆದುಕೊಳ್ಳಲು ಹೇಳುವುದು.
2. ಮಕ್ಕಳಿಗೆ ಯಾವ ಆಧಾರದ ಮೇಲೆ ಗುಂಪುಗಳಾಗಿ ಒಂದುಗೂಡಬೇಕೆಂದು ಸೂಚನೆಯನ್ನು ಕೊಡದೇ ಅವರೇ ವಿವಿಧ ಗುಂಪುಗಳಾಗಿ ಸೇರಲು ಹೇಳುವುದು.
3. ಅವರು ಸಾಮಾನಿನ ಪ್ರಮಾಣದ ಮೇಲೆ ಗುಂಪುಗಳಾಗಿ ಸೇರಿದ್ದಾರಾ? ಅಥವಾ ಭಾವನೆಯ ಆಧಾರದ ಮೇಲೆ ಗುಂಪುಗಳಾಗಿ ಸೇರಿದ್ದಾರಾ ಎಂದು ನೋಡುವುದು.
4. ಅವರು ಯಾವ ಆಧಾರದ ಮೇಲೆ ಗುಂಪಾಗಿ ಸೇರಿದ್ದಾರೆ? ಎಂದು ಚರ್ಚಿಸುವುದು.
5. ಈ ಬೋಗಿಯು ಯಾವ ರೀತಿ ಭಾವನೆಯನ್ನು ತೋರ್ಪಡಿಸುತ್ತಿದೆ? ಏಕೆ? ಎಂದು ಕೇಳುವುದು.
6. ಮಕ್ಕಳು ಬೋಗಿಯು ಹೊತ್ತಿರುವ ಸಾಮಾನಿನ ಪ್ರಮಾಣಕ್ಕೆ ಅದನ್ನು ಸಂಬಂಧೀಕರಿಸುತ್ತಿದ್ದಾರೆಯೇ? ಎಂದು ನೋಡುವುದು.
7. ಒಮ್ಮೆ ಈ ಚಟುವಟಿಕೆ ಮುಗಿದ ನಂತರ ಯಾವುದೇ ನಾಲ್ಕು ಕಾರ್ಡುಗಳನ್ನು ಅನುಕ್ರಮವಾಗಿ ಜೋಡಿಸಲು ಹೇಳುವುದು.



Scanned with CamScanner

ಚಟುವಟಿಕೆ 1

## ಒಂದು ನೇರಗೆರೆಯ ಮೇಲೆ ಮುಂದಕ್ಕೆ-ಹಿಂದಕ್ಕೆ ನಡೆಯುವುದು

### ಕಲಿಕಾ ಸಾಮಗ್ರಿಗಳು

ರಂಗೋಲಿ ಪುಡಿ



### ಸೂಚನೆಗಳು

1. ಒಂದು ಕಡ್ಡಿಯಿಂದ ರಂಗೋಲಿ ಪುಡಿ ಅಥವಾ ನೀರಿನಿಂದ ಒಂದು ಉದ್ದ ಗೆರೆಯನ್ನು ಎಳೆಯುವುದು.
2. ಒಂದು ವಸ್ತುವನ್ನು ಗೆರೆಯ ಕೊನೆಯಲ್ಲಿ ಇಡುವುದು.
3. ಪ್ರತಿಯೊಂದು ಮಗುವಿಗೂ ಆ ಗೆರೆಯ ಮೇಲೆ ಮುಂದಕ್ಕೆ ನಡೆದು ಕೊನೆಯಲ್ಲಿ ಇಟ್ಟ ವಸ್ತುವನ್ನು ತೆಗೆದುಕೊಂಡು ಹಿಂದಕ್ಕೆ ನಡೆದುಕೊಂಡು ಬರಲು ಹೇಳುವುದು.
4. 3 ವರ್ಷದ ಮಕ್ಕಳಿಗೆ ಗೆರೆಯ ಮೇಲೆ ನಡೆಯಲು ಹೇಳುವುದು.
5. 4 ವರ್ಷದ ಮಕ್ಕಳು ಕೈಯಲ್ಲಿ ಒಂದು ವಸ್ತುವನ್ನು ಹಿಡಿದು ಸಮತೋಲನ ಮಾಡುತ್ತಾ ಗೆರೆಯ ಮೇಲೆ ಮುಂದಕ್ಕೆ ಹಿಂದಕ್ಕೆ ನಡೆಯಬಲ್ಲರು.

ಚಟುವಟಿಕೆ 2

## ಚೆಂಡು ದಾಟಿಸುವುದು

### ಕಲಿಕಾ ಸಾಮಗ್ರಿಗಳು:

ಚೆಂಡು

### ಸೂಚನೆಗಳು

1. ಮಕ್ಕಳನ್ನು ವೃತ್ತಾಕಾರದಲ್ಲಿ ನಿಲ್ಲುವಂತೆ ಹೇಳುವುದು.
2. ಚೆಂಡನ್ನು ದಾಟಿಸುವ ಆಟವನ್ನು ಪ್ರಾರಂಭಿಸಲು ಹೇಳುವುದು. ಸಂಗೀತ ನಿಂತಾಗ ಯಾವ ಮಗುವಿನ ಬಳಿ ಚೆಂಡು ಇರುತ್ತದೆಯೋ, ಆ ಮಗುವಿಗೆ ರಸ್ತೆಯ ಮೇಲೆ ಚಲಿಸುವ ವಾಹನವನ್ನು ಹೆಸರಿಸಿ ಅದು ಹೇಗೆ ಚಲಿಸುತ್ತದೆ ಎಂದು ಶಬ್ದ ಮಾಡುತ್ತಾ ಅಭಿನಯಿಸಲು ಹೇಳುವುದು.
3. ಇದೇ ರೀತಿ ನೀರು, ರೈಲು ಕಂಬಿ ಮತ್ತು ಆಕಾಶದಲ್ಲಿ ಚಲಿಸುವ ವಾಹನಗಳನ್ನು ಹೆಸರಿಸುವಂತೆ ಹೇಳುವುದು.
4. ಎಲ್ಲಾ ಮಕ್ಕಳಿಗೂ ಅವಕಾಶ ಸಿಗುವ ಹಾಗೆ ನೋಡಿಕೊಳ್ಳುವುದು. ಒಂದು ಸಲ ಪರಿಚಿತವಾದ ಮೇಲೆ ಮಕ್ಕಳಿಗೆ ಈ ಚಟುವಟಿಕೆಯನ್ನು ಅವರೇ ನಡೆಸುವಂತೆ ಹೇಳುವುದು. ಅಗತ್ಯವಿದ್ದಾಗ ಸಹಾಯ ಮಾಡುವುದು.



Scanned with CamScanner

## ಸಂಚಾರ ನಿಯಮಗಳು

1. Stand in the bus stop
2. Look for the bus
3. Stop the bus

1. Stand in the bus stop
2. Look for the bus
3. Stop the bus

1. Stand in the bus stop
2. Look for the bus
3. Stop the bus

1. Climb inside
2. Buy a ticket
3. Take a seat

1. Climb inside
2. Buy a ticket
3. Take a seat

1. Climb inside
2. Buy a ticket
3. Take a seat

Say

gesture

model

1. Stand in the bus stop
2. Look for the bus
3. Stop the bus
4. Climb inside
5. Buy a ticket
6. Take a seat

1. Take a seat
2. Stop the bus
3. Climb inside
4. Buy a ticket
5. Look for the bus
6. Stand in the bus stop



Scanned with CamScanner










# ಶಬ್ದ, ಸ್ಥಳ ಮತ್ತು ದಿಕ್ಕು
# ಪರಿಕಲ್ಪನೆ ಮತ್ತು ನಿರ್ವಹಣೆ

Scanned with CamScanner

# ಕಲಿಕಾ ಫಲಿತಗಳು

## ಶಬ್ದ, ಸ್ಥಳ ಮತ್ತು ದಿಕ್ಕುಗಳ ಪರಿಕಲ್ಪನೆ ಮತ್ತು ನಿರ್ವಹಣೆ

### 3–4 ವರ್ಷಗಳು

1. ತಮ್ಮ ಸುತ್ತಮುತ್ತಲಿನ ಪರಿಸರದಲ್ಲಿನ ಸಾಮಾನ್ಯ ಶಬ್ದಗಳನ್ನು ಗುರುತಿಸುವುದು
2. ಜೋರಾದ ಮತ್ತು ಮೆಲು ಶಬ್ದಗಳಲ್ಲಿನ ವ್ಯತ್ಯಾಸಗಳನ್ನು ಪತ್ತೆಹಚ್ಚುವುದು
3. ಸ್ಥಳಕ್ಕೆ ಅನುಗುಣವಾಗಿ ಶಬ್ದಗಳನ್ನು ಗುರುತಿಸುವುದು (ದೂರ ಅಥವಾ ಸಮಯದ ಆಧಾರದ ಮೇಲೆ ಅಳತೆ ಮಾಡಿರುವಂತಹವುಗಳು)
4. ಶಬ್ದಗಳನ್ನು ಪರಿಚಿತ ಮತ್ತು ಸ್ಥಳಕ್ಕೆ ಅನುಗುಣವಾಗಿ ವಿಂಗಡಿಸಿ ಹೆಸರಿಸುವುದು ಪರಿಚಿತಗಳಿಗನುಗುಣವಾಗಿ ಶಬ್ದಗಳನ್ನು ಅನುಕ್ರಮವಾಗಿ ಹೇಳುವುದು
5. ಶಬ್ದದ ಪರಿಚಿತದಲ್ಲಿನ ಬದಲಾವಣೆ ಮತ್ತು ಬಿಟ್ಟು ಬಿಟ್ಟು ಮುಂದುವರಿದ ತಾಳಗಳನ್ನು ಉಪಯೋಗಿಸಿಕೊಂಡು ಒಂದು ಸರಳವಾದ ಅನುಕ್ರಮ/ಶಬ್ದಗಳ ಮಾದರಿಯನ್ನು ಪುನರಾವರ್ತಿಸುವುದು
6. ಪರಿಚಿತ ವ್ಯಕ್ತಿಗಳ ಧ್ವನಿಯನ್ನು ಉದಾಹರಣೆಗೆ, ಶಿಕ್ಷಕರ, ಸಹಪಾಠಿಗಳ ಮತ್ತು ನೆರೆಹೊರೆಯವರ ಧ್ವನಿಗಳನ್ನು ಗುರುತಿಸುವುದು
7. ಸ್ಥಳ/ ದೂರಗಳಿಗೆ ಸಂಬಂಧಿಸಿದ ಸರಳ ಸಮಸ್ಯೆಗಳನ್ನು ಬಿಡಿಸುವುದು

### 4–5 ವರ್ಷಗಳು

1. ತಮ್ಮ ಸುತ್ತಮುತ್ತಲಿನ ಪರಿಸರದಲ್ಲಿನ ಸಾಮಾನ್ಯ ಶಬ್ದಗಳನ್ನು ಗುರುತಿಸುವುದು
2. ಜೋರಾದ ಮತ್ತು ಮೆಲು ಶಬ್ದಗಳಲ್ಲಿನ ವ್ಯತ್ಯಾಸಗಳನ್ನು ಪತ್ತೆಹಚ್ಚುವುದು
3. ಸ್ಥಳಕ್ಕೆ ಅನುಗುಣವಾಗಿ ಶಬ್ದಗಳನ್ನು ಗುರುತಿಸುವುದು (ದೂರ ಅಥವಾ ಸಮಯದ ಆಧಾರದ ಮೇಲೆ ಅಳತೆ ಮಾಡಿರುವಂತಹವುಗಳು)
4. ಶಬ್ದಗಳನ್ನು ಪರಿಚಿತ ಮತ್ತು ಸ್ಥಳಕ್ಕೆ ಅನುಗುಣವಾಗಿ ವಿಂಗಡಿಸಿ ಹೆಸರಿಸುವುದು ಪರಿಚಿತಗಳಿಗನುಗುಣವಾಗಿ ಶಬ್ದಗಳನ್ನು ಅನುಕ್ರಮವಾಗಿ ಹೇಳುವುದು
5. ಶಬ್ದದ ಪರಿಚಿತದಲ್ಲಿನ ಬದಲಾವಣೆ ಮತ್ತು ಬಿಟ್ಟು ಬಿಟ್ಟು ಮುಂದುವರಿದ ತಾಳಗಳನ್ನು ಉಪಯೋಗಿಸಿಕೊಂಡು ಒಂದು ಸರಳವಾದ ಅನುಕ್ರಮ/ಶಬ್ದಗಳ ಮಾದರಿಯನ್ನು ಪುನರಾವರ್ತಿಸುವುದು
6. ಪರಿಚಿತ ವ್ಯಕ್ತಿಗಳ ಧ್ವನಿಯನ್ನು ಉದಾಹರಣೆಗೆ, ಶಿಕ್ಷಕರ, ಸಹಪಾಠಿಗಳ ಮತ್ತು ನೆರೆಹೊರೆಯವರ ಧ್ವನಿಗಳನ್ನು ಗುರುತಿಸುವುದು
7. ಸ್ಥಳ/ ದೂರಗಳಿಗೆ ಸಂಬಂಧಿಸಿದ ಸರಳ ಸಮಸ್ಯೆಗಳನ್ನು ಬಿಡಿಸುವುದು

### 5–6 ವರ್ಷಗಳು

1. ಶಬ್ದದ ಮೂಲವನ್ನು / ದಿಕ್ಕನ್ನು ಗುರುತಿಸಿ ಬೆರಳಿಟ್ಟು ತೋರಿಸುವುದು (ಎದುರಿನಿಂದ ಅಥವಾ ಹಿಂದಿನಿಂದ ಬರುತ್ತಿದೆ ಇತ್ಯಾದಿ)
2. ಶಬ್ದ ಅಥವಾ ದಿಕ್ಕಿನ ಆಧಾರದ ಮೇಲೆ ವಿಂಗಡಿಸುವುದು ಅಥವಾ ಹೋಲಿಸುವುದು
3. ಶಬ್ದ ಮತ್ತು ಆವರಿಸಿದ ಸ್ಥಳದ ಆಧಾರದ ಮೇಲೆ (ಖಾಲಿ, ಅರ್ಧ ತುಂಬಿದ, ಪೂರ್ತಿ ತುಂಬಿದ ಪ್ರಮಾಣ) ಅಥವಾ ಅಂತರದ ಆಧಾರದ ಮೇಲೆ ಅನುಕ್ರಮವಾಗಿ ಹೇಳುವುದು
4. ದಿಕ್ಕು ಮತ್ತು ಶಬ್ದಗಳನ್ನೊಳಗೊಂಡ ಕೆಲವು ಮಾದರಿಗಳನ್ನು ಪುನರಾವರ್ತಿಸುವುದು
5. ಧ್ವನಿಯ ಪರಿಚಿತ ಅಥವಾ ಸ್ವರದ ಆಧಾರದ ಮೇಲೆ ಸರಳ ಸಮಸ್ಯೆಗಳನ್ನು ಬಿಡಿಸುವುದು

Scanned with CamScanner

# ಪರಿಕಲ್ಪನೆ ಹಾಗೂ ನಿರ್ವಹಣೆ



## ಕಲಿಕಾ ಉದ್ದೇಶಗಳು

**ಈ ಅವಧಿಯ ಕೊನೆಯಲ್ಲಿ ಮಕ್ಕಳು ಈ ಕೆಳಗಿನವುಗಳನ್ನು ಅರಿತಿರಬೇಕು.**

- ತಮ್ಮ ಸುತ್ತಮುತ್ತಲಿನ ಪರಿಸರದಲ್ಲಿನ ಸಾಮಾನ್ಯ ಶಬ್ದಗಳನ್ನು ಗುರುತಿಸುವುದು.
- ಜೋರಾದ ಮತ್ತು ಮೆಲು ಶಬ್ದಗಳಲ್ಲಿನ ವ್ಯತ್ಯಾಸಗಳನ್ನು ಪತ್ತೆಹಚ್ಚುವುದು.
- ಸ್ಥಳಕ್ಕೆ ಅನುಗುಣವಾಗಿ ಶಬ್ದಗಳನ್ನು ಗುರುತಿಸುವುದು. (ದೂರ ಅಥವಾ ಹತ್ತಿರದ ಆಧಾರದ ಮೇಲೆ ಅಳತೆ ಮಾಡಿರುವಂತಹವುಗಳು)
- ಶಬ್ದಗಳನ್ನು ಏರಿಳಿತ ಮತ್ತು ಸ್ಥಳಕ್ಕೆ ಅನುಗುಣವಾಗಿ ವಿಂಗಡಿಸಿ ಹೆಸರಿಸುವುದು.
- ಧ್ವನಿಯ ಏರಿಳಿತಗಳಿಗನುಗುಣವಾಗಿ ಶಬ್ದಗಳನ್ನು ಅನುಕ್ರಮವಾಗಿ ಹೇಳುವುದು.
- ಶಬ್ದದ ಏರಿಳಿತದಲ್ಲಿನ ಬದಲಾವಣೆ ಮತ್ತು ಬಿಟ್ಟುಬಿಟ್ಟು ಮುಂದುವರಿದ ತಾಳಗಳನ್ನು ಉಪಯೋಗಿಸಿಕೊಂಡು ಒಂದು ಸರಳವಾದ ಅನುಕ್ರಮ/ಶಬ್ದಗಳ ಮಾದರಿಯನ್ನು ಪುನರಾವರ್ತಿಸುವುದು.
- ಪರಿಚಿತ ವ್ಯಕ್ತಿಗಳ ಧ್ವನಿಯನ್ನು ಉದಾಹರಣೆಗೆ ಶಿಕ್ಷಕರ, ಸಹಪಾಠಿಗಳ ಮತ್ತು ನೆರೆಹೊರೆಯವರ ಧ್ವನಿಗಳನ್ನು ಗುರುತಿಸುವುದು.
- ಸ್ಥಳ/ದೂರಗಳಿಗೆ ಸಂಬಂಧಿಸಿದ ಸರಳ ಸಮಸ್ಯೆಗಳನ್ನು ಬಿಡಿಸುವುದು.



Scanned with CamScanner

## ಸಿದ್ಧತಾ ಚಟುವಟಿಕೆಗಳು

### ಕಲಿಕಾ ಫಲಿತಗಳು

- ಶಬ್ದಗಳು ಮತ್ತು ಆಲಿಸುವಿಕೆಯ ಪ್ರಾಮುಖ್ಯತೆಯನ್ನು ತಾರ್ಕಿಕವಾಗಿ ಊಹಿಸುವುದು.

### ಚಟುವಟಿಕೆ 1: ಶಬ್ದಗಳ ಪ್ರಾಮುಖ್ಯತೆಯನ್ನು ಮಕ್ಕಳು ತಾರ್ಕಿಕವಾಗಿ ಊಹಿಸುವುದು.

1. ನಾವು ಈಗ ಒಂದು ಚಟುವಟಿಕೆ ಮಾಡೋಣ ಎಂದು ಹೇಳಿ. 2 ಮೊಬೈಲ್ ಫೋನ್‌ಗಳನ್ನು ಬಳಸಿಕೊಳ್ಳಿ. ಒಂದರಿಂದ ನಿಮ್ಮ ಮೊಬೈಲ್‌ಗೆ ಕರೆ ಮಾಡಿ. ಅದು ಕರೆಗಂಟೆಯ ಶಬ್ದ ಮಾಡಿದಾಗ ನಾನು ಏನು ಮಾಡುವೆನು? ಎಂದು ಕೇಳಿ. (ನೀವು ಅದನ್ನು ಎತ್ತಿ ಹಲೋ ಎಂದು ಹೇಳುವಿರಿ ಅಥವಾ ಕರೆಗೆ ಉತ್ತರಿಸುವಿರಿ ಎಂದು ಹೇಳುವ ಸಾಧ್ಯತೆಗಳಿರುತ್ತವೆ).
2. ಈಗ ಫೋನನ್ನು ನಿಶ್ಶಬ್ದ ಸ್ಥಿತಿಯಲ್ಲಿರಿಸಿ ಮತ್ತೆ ಕರೆ ಮಾಡಿರಿ. "ಈಗ ನಾನು ಏನು ಮಾಡುವೆನು? ಕರೆಯನ್ನು ಸ್ವೀಕರಿಸುವೆನೇ, ಇಲ್ಲವೇ? ಈಗ ಏನು ವ್ಯತ್ಯಾಸವಾಗುತ್ತದೆ? ಈಗ ಶಬ್ದ ಕೇಳಿಸದಿರುವುದರಿಂದ ಈ ವ್ಯತ್ಯಾಸವಾಗಿದೆ (ಕರೆಯನ್ನು ಸ್ವೀಕರಿಸದಿರುವುದು)" ಎಂದು ವಿವರಿಸಲು ಮಕ್ಕಳಿಗೆ ಅವಕಾಶ ಮಾಡಿಕೊಡಿ. ನಾನು ಯಾವುದನ್ನು ಕೇಳಿಸಿಕೊಳ್ಳಲಾಗುತ್ತಿಲ್ಲ? ನಮಗೆ ಏನನ್ನಾದರೂ ಮಾಡಬೇಕೆಂದು ಹೇಳಲು ಶಬ್ದಗಳ ಅವಶ್ಯಕತೆಯಿದೆ ಎಂಬ ಚರ್ಚೆಯನ್ನು ಮುನ್ನಡೆಸಿ.

---

### ಚಟುವಟಿಕೆ 2: ಸಂವಹನ ಸಾಧನಗಳಾಗಿ ಕಲಿಕಾ ಸಾಮಗ್ರಿಗಳು



### ಕಲಿಕಾ ಸಾಮಗ್ರಿಗಳು

**ವಸ್ತುಗಳ ಚಿತ್ರಗಳ ಮಿಂಚು ಪಟ್ಟಿಗಳು (flash cards) CF6.1-1 – CF6.1-10**

1. ಅಲಾರಾಂ ಗಡಿಯಾರ 3. ಶಾಲೆಯ ಗಂಟೆ 4. ಒಬ್ಬರು ಬಾಗಿಲು ಬಡಿಯುತ್ತಿರುವುದು 5. ಅಳುತ್ತಿರುವ ಮಗು 8. ಸೈಕಲ್ ಗಂಟೆ 9. ರೈಲು ಎಂಜಿನ್ 10. ಚಪ್ಪಾಳೆ ತಟ್ಟುತ್ತಿರುವ ಕೈಗಳು.

### ಸೂಚನೆಗಳು

ಮಿಂಚು ಪಟ್ಟಿಗಳನ್ನು ತೆಗೆದುಕೊಂಡು ಮಕ್ಕಳಿಗೆ ತೋರಿಸುತ್ತಾ ಇವುಗಳನ್ನು ಎಲ್ಲಿ ಬಳಸುವಿರಿ ಎಂದು ಪ್ರಶ್ನಿಸಿ ಆಲೋಚಿಸಿ ಉತ್ತರಿಸಲು ಅವಕಾಶ ನೀಡುವುದು.

1. ಒಂದು ಅಲಾರಾಂ ಗಡಿಯಾರ – (ಎದ್ದೇಳು)
2. ಒಂದು ಮೊಬೈಲ್‌ನ ಕರೆಗಂಟೆ – (ಯಾರೋ ನನ್ನೊಡನೆ ಮಾತನಾಡಲು ಬಯಸುತ್ತಿದ್ದಾರೆ)
3. ಶಾಲೆಯ ಗಂಟೆ – (ಈಗ ಶಾಲೆಯ ಸಮಯ)
4. ಬಾಗಿಲು ಬಡಿಯುತ್ತಿರುವುದು (ಬಾಗಿಲು ತೆರೆ)
5. ಒಂದು ಮಗು ಅಳುತ್ತಿರುವುದು (ನನಗೆ ಹಸಿವಾಗಿದೆ)
6. ಶ್ ಶ್ (ಸುಮ್ಮನಿರಿ)
7. ಒಂದು ಹಾರ್ನ್‌ನ ಶಬ್ದ (ನಾನು ಕಾಯುತ್ತಿದ್ದೇನೆ/ದಾರಿ ಬಿಡು)
8. ಒಂದು ಸೈಕಲ್ ಗಂಟೆ (ದಾರಿ ಕೊಡು)
9. ಒಂದು ರೈಲು ಎಂಜಿನ್ (ರೈಲು ಹೊರಡಲು ತಯಾರಾಗಿದೆ)
10. ಚಪ್ಪಾಳೆ (ಒಳ್ಳೆ ಕೆಲಸ ಮಾಡಿರುವೆ/ಬೇಷ್/ಪ್ರೋತ್ಸಾಹ)

ಅಲಾರಂ ತುಂಬಾ ಮೆಲುವಾಗಿದ್ದರೆ ಏನಾಗುತ್ತದೆ? ಅಥವಾ ಶಾಲೆಯ ಗಂಟೆಯು ತುಂಬಾ ಮೆಲುವಾಗಿದ್ದರೆ? ಮಕ್ಕಳಿಗೆ ಇದನ್ನು ವಿವರಿಸಲು ಹೇಳಿ. ಶಬ್ದವನ್ನು ಕೇಳಿಸಿಕೊಳ್ಳದಿದ್ದರೆ ಅಗತ್ಯವಾದ ಕೆಲಸ ಮಾಡುವುದು ಸಾಧ್ಯವಿಲ್ಲ. (ಮಕ್ಕಳೇ ಇದನ್ನು ತಾರ್ಕಿಕವಾಗಿ ಊಹಿಸಲಿ, ನೀವೇ ಉತ್ತರವನ್ನು ಕೊಡಬೇಡಿ)



Scanned with CamScanner

## ಸಿದ್ಧತಾ ಚಟುವಟಿಕೆಗಳು

### ಚಟುವಟಿಕೆ 3: ನೋಡುವುದು ಅಸಾಧ್ಯವಾದಾಗ ಶಬ್ದವು ಮುಖ್ಯವಾಗುತ್ತದೆ

ಮೂರು ಮಕ್ಕಳನ್ನು ಮುಂದಕ್ಕೆ ಕರೆಯಿರಿ. ನೀವು ಮಾಡುವ ಒಂದು ಕ್ರಿಯೆಯನ್ನು ಅವರು ಅನುಸರಿಸಬೇಕೆಂದು ಹೇಳಿ. ಮಕ್ಕಳಿಗೆ ಕುಳಿತುಕೊಳ್ಳುವಂತೆ ಅಥವಾ ನಿಂತುಕೊಳ್ಳುವಂತೆ ಸನ್ನೆ ಮಾಡಿ. ಮಕ್ಕಳು ನಿಮ್ಮ ಸನ್ನೆಗಳನ್ನು ಪಾಲಿಸಲು ಬಿಡಿ. ಈಗ ಮಕ್ಕಳಿಗೆ ಬೆನ್ನು ತಿರುಗಿಸಿ ನಿಮ್ಮಿಂದ ವಿಮುಖವಾಗಿ ನಿಲ್ಲಲು ಹೇಳಿ. ಅದೇ ಸನ್ನೆಗಳನ್ನು ಮಾಡಿ. ಅವರು ಯಾಕೆ ಪ್ರತಿಕ್ರಿಯಿಸುತ್ತಿಲ್ಲವೆಂದು ಕೇಳಿ. ಏನು ವ್ಯತ್ಯಾಸ? (ಅವರಿಗೆ ನಿಮ್ಮನ್ನು ನೋಡಲು ಆಗುತ್ತಿಲ್ಲ ಎಂದು ಉತ್ತರಿಸಲು ಅವಕಾಶ ಕೊಡಿ) ನಿಮ್ಮ ಸೂಚನೆಗಳನ್ನು ಅವರು ಪಾಲಿಸಲು ನೀವು ಈಗ ಏನು ಮಾಡಬೇಕು ಎಂದು ಕೇಳಿ. ಅಗತ್ಯವಿರುವುದನ್ನು ನೋಡಲು ಸಾಧ್ಯವಾಗದಿದ್ದಾಗ ಶಬ್ದವು ಹೆಚ್ಚು ಮುಖ್ಯವಾಗುತ್ತದೆ ಎಂದು ವಿವರಿಸಿ.

---

### ಚಟುವಟಿಕೆ 4: ಶಬ್ದ ಮತ್ತು ಸ್ಥಳದ ನಡುವಿನ ಸಂಬಂಧ



ಮೂರು ಜನ ಸ್ನೇಹಿತರು
Three Friends

#### ಕಲಿಕಾ ಸಾಮಗ್ರಿಗಳು

ಕಥೆ ಪುಸ್ತಕ.

#### ಸೂಚನೆ

ಕಥೆಯನ್ನು ಹೇಳಿ.

#### ಮೂರು ಜನ ಸ್ನೇಹಿತರು

ಮೂರು ಜನ ಸ್ನೇಹಿತರು ತಾವು ಖರೀದಿಸಿದ ವಸ್ತುಗಳೊಂದಿಗೆ ಸಂತೆಯಿಂದ ಹಿಂತಿರುಗುತ್ತಿದ್ದರು. ಒಬ್ಬನ(ಬಿಂದಿಗೆ) ಪಾತ್ರೆಯ ತುಂಬ ಹಾಲು, ಎರಡನೆಯವನ ಪಾತ್ರೆಯಲ್ಲಿ ಅರ್ಧದಷ್ಟು ಮೊಸರು ಇತ್ತು. ಆದರೆ ಮೂರನೆಯವನು ಆ ದಿನ ಯಾವುದೇ ಹಣ ಸಂಪಾದಿಸದ ಕಾರಣ ಎರಡು ಖಾಲಿ ಪಾತ್ರೆಗಳನ್ನು ಹಿಡಿದುಕೊಂಡು ಬರುತ್ತಿದ್ದನು. ಈ ಮೂವರು ಸ್ನೇಹಿತರಾಗಿದ್ದರು. ಆದ್ದರಿಂದ ಒಬ್ಬರಿಗೊಬ್ಬರು ಸಹಾಯ ಮಾಡುತ್ತಿದ್ದರು. ಯಾವಾಗ ಪಾತ್ರೆಗಳು ಭಾರವೆನ್ನಿಸುತ್ತಿತ್ತೋ ಆಗ ಸರದಿಯಂತೆ ಭಾರದ ಪಾತ್ರೆಯನ್ನು ಹೊತ್ತುಕೊಳ್ಳುತ್ತಿದ್ದರು. ಅದು ತುಂಬಾ ದೂರದ ದಾರಿಯಾದ್ದರಿಂದ, ಬಾಯಾರಿಕೆಯಾದಾಗ ಮೊದಲನೆಯ ಸ್ನೇಹಿತ ತನ್ನ ಪಾತ್ರೆಯಲ್ಲಿದ್ದ ಹಾಲನ್ನು ಇತರ ಸ್ನೇಹಿತರೊಡನೆ ಹಂಚಿಕೊಂಡನು. ಅವರಿಗೆ ಹಸಿವೆಯಾದಾಗ ಎರಡನೇ ಸ್ನೇಹಿತ ತನ್ನಲ್ಲಿದ್ದ ಮೊಸರನ್ನು ಹಂಚಿಕೊಂಡನು. ಮೂರನೆಯ ಸ್ನೇಹಿತನಿಗೆ ತನ್ನಲ್ಲಿ ಹಂಚಿಕೊಳ್ಳಲು ಏನೂ ಇಲ್ಲವೆಂದು ಬೇಸರವಾಯಿತು. ಆದರೆ ಅವನ ಸ್ನೇಹಿತರು ಒಳ್ಳೆಯವರಾಗಿದ್ದರು. ಅವರು ಅವನ ಬಳಿ ಏನನ್ನೂ ಕೇಳಲಿಲ್ಲ.

ಮೂರೂ ಜನ ಸ್ನೇಹಿತರು ದಟ್ಟ ಕಾಡಿನ ಮಧ್ಯದಲ್ಲಿದ್ದಾಗ ಇದ್ದಕ್ಕಿದ್ದಂತೆ ಘರ್ಜನೆ ಕೇಳಿಸಿತು."ಹತ್ತಿರದಲ್ಲೇ ಸಿಂಹವಿದೆ. ಈಗ ನಾವೇನು ಮಾಡುವುದು?" ಎಂದು ಒಬ್ಬರನ್ನೊಬ್ಬರು ಕೇಳಿದರು."ನಾವು ಏನಾದರೂ ಶಬ್ದಮಾಡಿ ಸಿಂಹವನ್ನು ಹೆದರಿಸಿ ಓಡಿಸೋಣ" ಎಂದುಕೊಂಡರು. ಇಬ್ಬರು ಸ್ನೇಹಿತರು ಕೋಲಿನಿಂದ ತಮ್ಮ ಪಾತ್ರೆಗೆ ಬಡಿದರು. ಆದರೆ ಅದರಿಂದ ಜೋರಾದ ಶಬ್ದ ಮಾಡಲು ಸಾಧ್ಯವಾಗಲಿಲ್ಲ. ಸಿಂಹವು ಅವರನ್ನು ಸಮೀಪಿಸುತ್ತಿತ್ತು. ಮೂರನೆಯವನು ತನ್ನಲ್ಲಿದ್ದ ಎರಡು ಖಾಲಿ ಪಾತ್ರೆಗಳನ್ನು ಒಂದಕ್ಕೊಂದನ್ನು ಜೋರಾಗಿ ಹೊಡೆದನು. ಈ ಶಬ್ದ ಎಷ್ಟು ಜೋರಾಗಿತ್ತೆಂದರೆ ಸಿಂಹವು ಇದಕ್ಕೆ ಹೆದರಿ ಓಡಿಹೋಯಿತು. ಮೂರೂ ಜನ ಸ್ನೇಹಿತರು ಮನೆ ತಲುಪುವವರೆಗೂ ಎರಡು ಖಾಲಿ ಪಾತ್ರೆಗಳನ್ನು ಬಡಿಯುತ್ತಾ ಕಾಡಿನಲ್ಲಿ ಸುರಕ್ಷಿತವಾಗಿ ನಡೆದರು.

**ಕಾಡಿನಲ್ಲಿರುವ ಮೂರು ಸ್ನೇಹಿತರ ಕತೆಯನ್ನು ಹೇಳಿ:**

ಚಿತ್ರಗಳನ್ನು ತೋರಿಸಿ ಖಾಲಿ ಮತ್ತು ಭರ್ತಿಯಾಗಿರುವುದರ ಬಗೆಗೆ ಹಾಗೂ ಅವು ಮಾಡುವ ಶಬ್ದದ ಬಗೆಗಿನ ಪರಿಕಲ್ಪನೆಗಳನ್ನು ಚರ್ಚಿಸಿ. ಮಕ್ಕಳು ಎರಡು ಖಾಲಿ ಅಥವಾ ಅರ್ಧ ನೀರು ತುಂಬಿದ ಲೋಟಗಳನ್ನು ಒಂದಕ್ಕೊಂದು ಬಡಿಯುವ ಪ್ರಯೋಗವನ್ನು ಮಾಡಲು ಅನುವು ಮಾಡಿಕೊಡಿ. ಖಾಲಿ ಮತ್ತು ಭರ್ತಿಯಾಗಿರುವುದರ ವ್ಯತ್ಯಾಸವನ್ನು ಮಕ್ಕಳು ಹೇಳಬೇಕು (ಆವರಿಸಿದ ಸ್ಥಳ ಮತ್ತು ಲಭ್ಯವಿರುವ ಖಾಲಿ ಸ್ಥಳದ ಆಧಾರದ ಮೇಲೆ ಖಾಲಿ, ಅರ್ಧ ತುಂಬಿದೆ ಅಥವಾ ಭರ್ತಿಯಾಗಿದೆ ಎಂದು ಹೇಳಬೇಕು).

## ಕಲಿಕಾ ಫಲಿತಗಳು

- ಮಕ್ಕಳ ಬಾಹ್ಯ ಪ್ರಪಂಚದಲ್ಲಿ ಇರುವ ಸ್ಥಳ ಮತ್ತು ಶಬ್ದದೊಡನೆ ಇರುವ ಸಂಬಂಧವನ್ನು ಅರಿಯುವುದು.

## ಕಲಿಕಾ ಸಾಮಗ್ರಿಗಳು

ಹೊರಾಂಗಣ ಸ್ಥಳಗಳು

## ಶಿಕ್ಷಕರ ಪೂರ್ವಸಿದ್ಧತೆ

ಚಟುವಟಿಕೆಯ ಬಗ್ಗೆ ಅರ್ಥಮಾಡಿಕೊಳ್ಳುವುದು ಮತ್ತು ತರಗತಿಯಲ್ಲಿ ಅದನ್ನು ನಿರ್ವಹಿಸುವುದರ ಬಗ್ಗೆ ಯೋಜನೆ ಹಾಕಿಕೊಳ್ಳುವುದು.

---

### ಚಟುವಟಿಕೆ 1: ನಾನು ಏನನ್ನು ಕೇಳಿಸಿಕೊಂಡೆನು?

ಮಕ್ಕಳನ್ನು ಹೊರಗಡೆ ಕರೆದುಕೊಂಡು ಹೋಗಿ ಅವರ ಪರಿಸರದಲ್ಲಿ ಅವರಿಗೆ ಕೇಳಿಸುವ ಎಲ್ಲಾ ಶಬ್ದಗಳನ್ನು ಜಾಗ್ರತೆಯಿಂದ ಆಲಿಸುವಂತೆ ತಿಳಿಸಿ. ಉದಾಹರಣೆಗೆ: ಪಕ್ಷಿಗಳ ಚಿಲಿಪಿಲಿ (ಕಲರವ), ನಾಯಿಯೊಂದರ ಬೊಗಳುವಿಕೆ, ಶಾಲಾ ಘಂಟೆ ಬಾರಿಸುವುದು, ಸೈಕಲ್‌ನ ಘಂಟೆ, ವಾಹನದ ಹಾರ್ನ್ ಶಬ್ದ. ಈ ಚಟುವಟಿಕೆಯ ಅವಧಿಯಲ್ಲಿ ಅವರು ಕಣ್ಣು ಮುಚ್ಚಿಕೊಂಡಿರಬೇಕು. (5 ನಿಮಿಷಗಳ ಕಾಲಾವಧಿ).

ಮಕ್ಕಳು ತಾವು ಯಾವ ಶಬ್ದಗಳನ್ನು ಕೇಳಿಸಿಕೊಂಡೆವೆಂದು ಹೇಳುವುದು ಮತ್ತು ಅದನ್ನು ಗುರುತಿಸುವುದು.

---

### ಚಟುವಟಿಕೆ 2: ಅದು ಎಷ್ಟು ದೂರದಲ್ಲಿದೆ?

ಇದು ಕೂಡಾ ಮೇಲಿನ ಚಟುವಟಿಕೆಯಂತೆಯೇ ಆದರೆ ಇಲ್ಲಿನ ವ್ಯತ್ಯಾಸವೆಂದರೆ ಶಬ್ದ ಮತ್ತು ಕೇಳಿಸಿಕೊಳ್ಳುವವರ ನಡುವಿನ ದೂರವನ್ನು ಗಮನಿಸುವುದು.

ಮಕ್ಕಳನ್ನು ಹೊರಗಡೆ ಕರೆದುಕೊಂಡು ಹೋಗಿ ಅವರಿಗೆ ಕಣ್ಣು ಮುಚ್ಚಿಕೊಳ್ಳಲು ಹೇಳಿ, ಜಾಗರೂಕತೆಯಿಂದ ಶಬ್ದಗಳನ್ನು ಆಲಿಸಲು ಹೇಳಿ ಹಾಗೂ ಎರಡು ಶಬ್ದಗಳನ್ನು-ಒಂದು ಹತ್ತಿರದಿಂದ ಕೇಳಿಸುವಂತೆ ಇರುವುದು. ಮತ್ತೊಂದು ದೂರದಿಂದ ಕೇಳಿಸುವಂತಿರುವುದರ ಬಗ್ಗೆ ಗಮನವಿಡುವಂತೆ ಹೇಳಿ. ಮಕ್ಕಳು ಅದನ್ನು ಕೇಳಿಸಿಕೊಂಡ ಕೂಡಲೇ ಅದನ್ನು ಹೆಸರಿಸುವಂತೆ ತಿಳಿಸಿ. ಉಳಿದವರೂ ಇದನ್ನು ಕೇಳಿಸಿಕೊಳ್ಳಲು ಸಾಧ್ಯವಾಗದಿರುವುದು ಏಕೆ ಎನ್ನುವುದನ್ನು ಕೇಳಿ. ಹಲವು ಮಕ್ಕಳಿಗೆ ಅದೇ ರೀತಿಯ ಶಬ್ದಗಳನ್ನು ಕೇಳಿಸುವುದು. (ಹೊರಾಂಗಣದಲ್ಲಿನ ಶಬ್ದಗಳನ್ನು ಕೇಳಿಸಿಕೊಳ್ಳಲು ಮಕ್ಕಳಿಗೆ ಕೆಲವು ಮಿತಿಗಳಿರುತ್ತವೆ)

ಸ್ವಲ್ಪ ಸಮಯದ ನಂತರ ಶಿಕ್ಷಕರು ಉಳಿದ ಮಕ್ಕಳ ಗಮನವನ್ನು ಸೆಳೆದು – ಮರದ ಎಲೆಗಳ ಶಬ್ದ ಕೇಳಿಸುತ್ತಿದೆಯೇ? ಅದು ಹತ್ತಿರದಲ್ಲಿದೆಯೆ? ಹಾರ್ನ್ ಕೇಳಿಸುತ್ತಿದೆಯೇ? ಎಂದು ಕೇಳಬೇಕು.






Scanned with CamScanner

## ಪರಿಶೋಧನಾತ್ಮಕ ಚಟುವಟಿಕೆಗಳು

### ಚಟುವಟಿಕೆ 3: ನನ್ನ ದೇಹದ ಭಾಗಗಳು; ಅವುಗಳಿಂದ ಮಾಡಬಹುದಾದ ಶಬ್ದಗಳು (ಪಾದಗಳು, ಬಾಯಿ, ಕೈಗಳು)

ಮಕ್ಕಳನ್ನು ಮೂರು ಗುಂಪುಗಳಾಗಿ ವಿಂಗಡಿಸಿ. ಪ್ರತಿಯೊಂದು ಗುಂಪಿಗೂ ದೇಹದ ವಿವಿಧ ಭಾಗಗಳಿಂದ ಶಬ್ದ ಮಾಡುವಂತೆ ತಿಳಿಸಿ. ಮೊದಲನೆಯ ಗುಂಪಿನವರು ಕೈಗಳನ್ನು ಉಪಯೋಗಿಸುತ್ತಾರೆ. (ಚಪ್ಪಾಳೆ, ಚಿಟಿಕಿ ಹೊಡೆಯುವುದು, ತಟ್ಟುವುದು)



ಎರಡನೆಯ ಗುಂಪಿನವರು ಪಾದಗಳನ್ನು ಉಪಯೋಗಿಸುತ್ತಾರೆ. (ತುಳಿಯುವುದು, ಎಳೆಯುವುದು, ಮೆಲ್ಲನೆ ತಟ್ಟುವುದು, ವಸ್ತುವೊಂದನ್ನು ಒದೆಯುವುದು)

ಮೂರನೆಯ ಗುಂಪಿನವರು ಬಾಯಿಯನ್ನು ಉಪಯೋಗಿಸುತ್ತಾರೆ. (ಊದುವುದು, ಶಿಳ್ಳೆ ಹೊಡೆಯುವುದು, ನಗುವುದು, ಅಳುವುದು, ಕೆಮ್ಮುವುದು)

ಉದಾಹರಣೆಯನ್ನು ಆಧರಿಸಿ ಚಟುವಟಿಕೆಯನ್ನು ಮಾಡಲು ಮಕ್ಕಳಿಗೆ ಹೇಳುವುದು ಮತ್ತು ಅವುಗಳನ್ನು ಮಾಡದಿದ್ದರೆ ಇತರ ಕೆಲವು ಚಟುವಟಿಕೆಗಳನ್ನು ಸೇರಿಸುವುದು. ಈಗ ಒಂದು ಮಗುವಿಗೆ ಶಬ್ದ ಮಾಡಲು ತಿಳಿಸಿ ಉಳಿದ ಮಕ್ಕಳು ಕಣ್ಣು ಮುಚ್ಚಿಕೊಂಡು ಇದನ್ನು ಆಲಿಸಿ ಆ ಮಗುವು ಏನು ಮಾಡಿತು ಎಂದು ಊಹಿಸಲು ತಿಳಿಸುವುದು.

---

### ಚಟುವಟಿಕೆ 4: ಶಬ್ದ ಎಷ್ಟು ದೂರದಿಂದ ಕೇಳಿಸುತ್ತಿದೆ? (ಶಬ್ದ ಮತ್ತು ಸ್ಥಳವನ್ನು ತಿಳಿದುಕೊಳ್ಳುವುದು)

ಈ ಮೇಲಿನಂತೆ ಮಕ್ಕಳನ್ನು ಮೂರು ಗುಂಪುಗಳಾಗಿ ವಿಂಗಡಿಸಿ ಒಂದು ಆಟವನ್ನು ಆಡಿಸಿ. 2ನೆಯ ಗುಂಪು ಗೋಡೆಯಿಂದ ಬೇರೆ ಬೇರೆ ದೂರದಲ್ಲಿದ್ದಾಗ ಒಂದನೇ ಗುಂಪು ಗೋಡೆಗೆ ಮುಖ ಮಾಡಿರುತ್ತದೆ ಮತ್ತು ಮೂರನೇ ಗುಂಪು ವೀಕ್ಷಕರಾಗಿರುತ್ತಾರೆ. ಊಹಿಸುವ ಗುಂಪಿನಿಂದ ಬೇರೆ ಬೇರೆ ದೂರದಲ್ಲಿರುವ ಗುಂಪು ಕೆಮ್ಮುವ ಅಥವಾ ಚಪ್ಪಾಳೆ ಮೂಲಕ ಹೊಡೆಯುವ ಶಬ್ದವನ್ನು ಮಾಡುತ್ತದೆ. ಯಾವ ಮಗುವಿಗೆ ಹೇಳುತ್ತೀರೋ ಆ ಮಗುವು ಮಾತ್ರ ಶಬ್ದವನ್ನು ಮಾಡಲು ಸೂಚಿಸಿ. ಗೋಡೆಯ ಕಡೆ ಮುಖ ಮಾಡಿರುವ ಮಕ್ಕಳಿಗೆ ಸರದಿಯಂತೆ, ಅವರ ಮತ್ತು ಶಬ್ದದ ಮೂಲದ ನಡುವಿನ ದೂರವನ್ನು ಊಹಿಸಲು ಹೇಳಿ. ಶಬ್ದ ಮಾಡುವವರು ದೂರದಲ್ಲಿದ್ದಾರೆಯೇ? ಮಧ್ಯದಲ್ಲಿದ್ದಾರೆಯೇ? ಅಥವಾ ನನ್ನ ಹತ್ತಿರವಿದ್ದಾರೆಯೇ? ಎಂದು ಪ್ರಶ್ನಿಸಿ. ಮಗು ಸರಿಯಾಗಿ ಉತ್ತರಿಸಿದರೆ ವೀಕ್ಷಕ ಗುಂಪು ಚಪ್ಪಾಳೆ ಹೊಡೆಯುತ್ತದೆ.




Scanned with CamScanner

## ವಿಸ್ತರಣಾ ಚಟುವಟಿಕೆ

## ವರ್ಗೀಕರಿಸುವುದು, ವಿಂಗಡಿಸುವುದು ಮತ್ತು ಹೋಲಿಸುವುದು

### ಕಲಿಕಾ ಫಲಿತಗಳು

- ಜೋರಾಗಿ-ಮೆಲ್ಲನೆ, ಹತ್ತಿರ-ದೂರ ಇವುಗಳ ಆಧಾರದ ಮೇಲೆ ಶಬ್ದಗಳನ್ನು ವಿಂಗಡಿಸಿ, ವರ್ಗೀಕರಿಸಲು ಮಕ್ಕಳಿಗೆ ಸಹಾಯ ಮಾಡುವುದು.




### ಚಟುವಟಿಕೆ 1: ಶಿಶುಗೀತೆ

### ಕಲಿಕಾ ಸಾಮಗ್ರಿಗಳು

ಶಿಶುಗೀತೆ ಕಾರ್ಡ್

ಪ್ರತಿ ಚರಣದ 3ನೇ ಸಾಲನ್ನು – ಘು/ ಟಪ್/ ಘುರ್/ಟ್ರ್ ಮೆಲುದನಿಯಲ್ಲಿ ಪ್ರಾರಂಭಿಸಿ ನಿಧಾನವಾಗಿ ಹೇಳುತ್ತಾ ಕೊನೆಗೆ ಎತ್ತರದ ಧ್ವನಿಯಲ್ಲಿ ಕೊನೆಗೊಳಿಸುವುದು. ಮಕ್ಕಳಿಗೆ ಸ್ವರಗಳ ಏರಿಳಿತಗಳಲ್ಲಿನ ಈ ವ್ಯತ್ಯಾಸವು ಸ್ಪಷ್ಟವಾಗಿ ತಿಳಿಯುವ ರೀತಿಯಲ್ಲಿ ಧ್ವನಿ ವ್ಯತ್ಯಾಸ ಮಾಡಬೇಕು. ಮಕ್ಕಳಿಗೆ ಧ್ವನಿಯಲ್ಲಿನ ವ್ಯತ್ಯಾಸ ತಿಳಿಯುವಂತೆ ಏರಿಳಿತಗಳು ಸ್ಪಷ್ಟವಾಗಿರುವಂತೆ ಮಾಡಿ. ಧ್ವನಿಯಲ್ಲಿ ಏರಿಳಿತ ಮಾಡಿಕೊಂಡು ಆ ಶಬ್ದಗಳನ್ನು ಮಾಡಲು ಮಕ್ಕಳಿಗೆ ಸಹಾಯ ಮಾಡಿ. ಮೆಲು ದನಿಯಿಂದ ಜೋರಾದ ಸ್ತರಕ್ಕೆ ಹೋಗುತ್ತಿರುವುದರ ಬಗ್ಗೆ ಅವರ ಗಮನ ಸೆಳೆಯಿರಿ.

ಮಕ್ಕಳು ಈ ಮೇಲಿನ ಚಟುವಟಿಕೆಯನ್ನು ಮಾಡಲು ಸಾಧ್ಯವಾದ ಮೇಲೆ ಗೀತೆಯ ಪಲ್ಲವಿಯನ್ನು ಹಾಡುವ ವೇಗವನ್ನು ಬದಲಾಯಿಸುತ್ತಾ, ಸ್ತರವನ್ನು ಹೆಚ್ಚಿಸುತ್ತಾ ಹೋಗಲು ಹೇಳಿ. ಹೀಗೆ ಮಾಡುವಾಗ ಪ್ರತಿ ಬಾರಿಯೂ ಮೊದಲಿಗಿಂತ ವೇಗವಾಗಿ ಎರಡು 'ಘುರ್' ಅಥವಾ 'ಘು' ಗಳ ನಡುವಿನ ಅಂತರ ಕಡಿಮೆಯಾಗುತ್ತಾ ಹೋಗುವಂತೆ ಹಾಡಬೇಕು.






Scanned with CamScanner

## ಚಟುವಟಿಕೆ 2: ಜೊತೆಯಾಗಿ ಆಡುವುದು

### ಕಲಿಕಾ ಸಾಮಗ್ರಿಗಳು

ತರಗತಿಯಲ್ಲಿನ ಕಲಿಕಾ ಸಾಮಗ್ರಿಗಳು. (ಘನಾಕೃತಿಗಳು, ಆಟಿಕೆಯ ಅಡುಗೆ ಪಾತ್ರೆಗಳು, ನಾಣ್ಯಗಳು, ಖಂಜರ, ಡೋಲು, ಸೀಟಿ, ಮರಳು ತುಂಬಿದ ಪೆಟ್ಟಿಗೆ, ಚಿಕ್ಕ ಕಲ್ಲುಗಳು ತುಂಬಿದ ಪೆಟ್ಟಿಗೆ)

### ಸೂಚನೆಗಳು

ಎಲ್ಲಾ ಮಕ್ಕಳನ್ನು ವೃತ್ತಾಕಾರದಲ್ಲಿ ಕುಳಿತುಕೊಳ್ಳಲು ಹೇಳುವುದು ಮತ್ತು ಪ್ರತಿಯೊಬ್ಬರಿಗೂ ಒಂದೊಂದು ಸಂಗೀತ ವಾದ್ಯವನ್ನು/ಚಮಚ/ತಟ್ಟೆ/ಘನಾಕೃತಿ (Blocks) ಇತ್ಯಾದಿಗಳನ್ನು ಕೊಡುವುದು. ಶಿಕ್ಷಕರು ಒಂದು ಸ್ಥಿರವಾದ ತಾಳವನ್ನು ಬಾರಿಸುವುದು. ಮಕ್ಕಳೆಲ್ಲ ಒಬ್ಬೊಬ್ಬರಾಗಿ ಅವರವರ ವಾದ್ಯಗಳನ್ನು ಬಾರಿಸುತ್ತಾ ಶಿಕ್ಷಕರ ಜೊತೆ ಸೇರಬೇಕು.

---

## ಚಟುವಟಿಕೆ 3: ಧ್ವನಿ ಪೆಟ್ಟಿಗೆಗಳನ್ನು ಧ್ವನಿ ಪೆಟ್ಟಿಗೆ(Sound Box)ಗಳನ್ನು ಹೊಂದಿಸುವುದು

### ಕಲಿಕಾ ಸಾಮಗ್ರಿಗಳು

ಧ್ವನಿ ಪೆಟ್ಟಿಗೆಗಳು (6 ಕಾಗದದ ಚೆಂಡುಗಳು ಅಥವಾ 6 ತಗಡಿನ ಡಬ್ಬಗಳು ಅಥವಾ 6 ಪ್ಲಾಸ್ಟಿಕ್ ಚೆಂಡುಗಳು) ಅವುಗಳಲ್ಲಿ ಒಂದು ರಂಧ್ರ ಮಾಡಿ ಒಂದು ಕಾಳು ಅಥವಾ ಒಂದು ಕಲ್ಲನ್ನು ಹಾಕಿ ರಂಧ್ರವನ್ನು ಮುಚ್ಚಿರಿ. ಈಗ ಮೂರು ಜೊತೆ ಧ್ವನಿ ಪೆಟ್ಟಿಗೆಗಳು ಮೂರು ವಿವಿಧ ಶಬ್ದಗಳನ್ನು ಮಾಡುತ್ತವೆ. ಹಾಗೂ ಒಂದು ಜೊತೆ ಧ್ವನಿ ಪೆಟ್ಟಿಗೆಗಳು ಒಂದೇ ರೀತಿಯ ಶಬ್ದ ಮಾಡುತ್ತವೆ.

### ಸೂಚನೆಗಳು

ತರಗತಿಯಲ್ಲಿನ ಮಕ್ಕಳನ್ನು ಮೂರು ಗುಂಪುಗಳಾಗಿ ವಿಭಾಗಿಸಿ. ಮಕ್ಕಳನ್ನು ಈ ಮೂರು ಬೇರೆ ಬೇರೆ ಶಬ್ದಗಳನ್ನು ಮಾಡುವಂತೆ ತಿಳಿಸಿ. ಅಂದರೆ ಪ್ರತಿಯೊಬ್ಬರೂ ಅವರವರ ಪೆಟ್ಟಿಗೆಗಳಲ್ಲಿ ಬರುವ ಶಬ್ದಕ್ಕೆ ಹೊಂದುವ ಶಬ್ದ ಮಾಡುವ ಪೆಟ್ಟಿಗೆ ಇರುವ ವಿದ್ಯಾರ್ಥಿಯ ಜೊತೆಯಾಗಬೇಕು.

---

## ಚಟುವಟಿಕೆ 4: ಸರಿಹೊಂದುವಂತೆ ಜೋಡಿಯಾಗಿಸುವುದು

### ಕಲಿಕಾ ಸಾಮಗ್ರಿಗಳು

ಕಾಗದದ ಹಾಳೆಗಳು ಅಥವಾ ಕಾಗದದ ಪೆಟ್ಟಿಗೆಗಳು, ಬೀಜಗಳು ಮತ್ತು ಕಲ್ಲಿನ ಹರಳುಗಳು.



### ಸೂಚನೆಗಳು

1. ಮಕ್ಕಳಿಗೆ ಕಾಗದವನ್ನು ಕೊಟ್ಟು ಅವುಗಳಿಂದ ಕಾಗದದ ಶಂಕುವಿನ ಆಕಾರ ಅಥವಾ ಪೆಟ್ಟಿಗೆಗಳನ್ನು ಮಾಡಿ ಅವುಗಳಲ್ಲಿ ಬೀಜಗಳು ಅಥವಾ ಕಲ್ಲಿನ ಹರಳುಗಳನ್ನು ತುಂಬಲು ಹೇಳಿ.
2. ಎಲ್ಲಾ ಪೆಟ್ಟಿಗೆಗಳನ್ನು ಮಧ್ಯದಲ್ಲಿಟ್ಟು ಒಬ್ಬೊಬ್ಬರಿಗೆ ಒಂದೊಂದು ಪೆಟ್ಟಿಗೆ ತೆಗೆದುಕೊಳ್ಳಲು ಹೇಳಿ.
3. ನಂತರ ಅವರು ಆ ಪೆಟ್ಟಿಗೆ ಮಾಡುವ ಶಬ್ದವನ್ನು ಪುನರುಚ್ಚರಿಸಲು ಹೇಳುವುದು.





Scanned with CamScanner

ವಿಸ್ತರಣಾ ಚಟುವಟಿಕೆ

## ಹೋಲಿಸುವುದು ಮತ್ತು ಅನುಕ್ರಮವಾಗಿ ಜೋಡಿಸುವುದು

### ಕಲಿಕಾ ಫಲಿತಗಳು

ಧ್ವನಿಯ ಏರಿಳಿತಗಳಿಗನುಗುಣವಾಗಿ (ಜೋರು ಮತ್ತು ಮೆಲುದನಿ) ಧ್ವನಿಪೆಟ್ಟಿಗೆಗಳನ್ನು ಹೋಲಿಸಿ ಅನುಕ್ರಮವಾಗಿ ಜೋಡಿಸುವುದು.

### ಕಲಿಕಾ ಸಾಮಗ್ರಿಗಳು

ಈ ಮೊದಲಿನ ಚಟುವಟಿಕೆಯಲ್ಲಿ ಮಕ್ಕಳು ತಯಾರಿಸಿದ ಸಲಕರಣೆಗಳು.

### ಶಿಕ್ಷಕರ ಪೂರ್ವಸಿದ್ಧತೆ

ಶಬ್ದಗಳು ವ್ಯತ್ಯಾಸವಾಗದಿರುವಂತೆ ಎಲ್ಲಾ ಪೆಟ್ಟಿಗೆಗಳ ಒಳಗಿರುವ ವಸ್ತುಗಳು ಚೆಲ್ಲಿ ಹೋಗದಂತೆ ರಂಧ್ರಗಳು ಸರಿಯಾಗಿ ಮುಚ್ಚಿವೆ ಎಂದು ಖಚಿತಪಡಿಸಿಕೊಳ್ಳಿ.

---

## ಚಟುವಟಿಕೆ 1: ಜೋರಾದ ಶಬ್ದದಿಂದ ಪ್ರಾರಂಭವಾಗಿ ಮೆಲುದನಿಯವರೆಗೆ ಇರುವಂತೆ ಅನುಕ್ರಮವಾಗಿ ಜೋಡಿಸುವುದು

### ಗುಂಪು ಚಟುವಟಿಕೆ

ಎಲ್ಲಾ ಧ್ವನಿಪೆಟ್ಟಿಗೆಗಳನ್ನು ಮಧ್ಯದಲ್ಲಿರಿಸಿರಿ. ಮಕ್ಕಳು ಜೋಡಿಯಾಗಿ ಬಂದು ಯಾವುದಾದರೂ ಮೂರು ಪೆಟ್ಟಿಗೆಗಳನ್ನು ತೆಗೆದುಕೊಂಡು ತಮ್ಮ ತಮ್ಮ ಜಾಗಕ್ಕೆ ಹೋಗಲು ಹೇಳಿ. ಪ್ರತಿಯೊಬ್ಬರಿಗೂ ಮೂರು ಪೆಟ್ಟಿಗೆಗಳು ಸಿಗುವವರೆಗೆ ಈ ಚಟುವಟಿಕೆಯನ್ನು ಮುಂದುವರಿಸಿ. ಈಗ ಪೆಟ್ಟಿಗೆಗಳನ್ನು ಅಲ್ಲಾಡಿಸಿ ಶಬ್ದವನ್ನು ಕೇಳಿಸಿಕೊಂಡು, ಜೋರಾದ ಶಬ್ದದಿಂದ ಪ್ರಾರಂಭಿಸಿ ಮೆಲುಶಬ್ದದವರೆಗೆ ಅನುಕ್ರಮವಾಗಿ ಜೋಡಿಸಲು ಹೇಳಿ. ಈ ಚಟುವಟಿಕೆಯನ್ನು ಪೂರ್ತಿಗೊಳಿಸಿದ ಮೇಲೆ ವೃತ್ತಾಕಾರದಲ್ಲಿ ಒಬ್ಬೊಬ್ಬರಾಗಿ ಅದೇ ರೀತಿ ತೋರಿಸುತ್ತಿರಲಿ ಉಳಿದವರು ಅದು ಸರಿಯೇ ತಪ್ಪೇ ಎಂದು ಹೇಳಬೇಕು.

---

## ಚಟುವಟಿಕೆ 2: ಮೆಲುದನಿಯಿಂದ ಪ್ರಾರಂಭವಾಗಿ ಜೋರಾದ ಶಬ್ದದವರೆಗೆ ಅನುಕ್ರಮವಾಗಿ ಜೋಡಿಸುವುದು

### ವೈಯಕ್ತಿಕ ಚಟುವಟಿಕೆ

ಮೇಲಿನ ಚಟುವಟಿಕೆಯನ್ನು ಪುನರಾವರ್ತಿಸಿರಿ. ಈ ಬಾರಿ ಪ್ರತಿಯೊಂದು ಮಗುವಿಗೂ ಯಾವುದಾದರೂ ಮೂರು ಪೆಟ್ಟಿಗೆಗಳನ್ನು ಆಯ್ದುಕೊಂಡು ತನ್ನ ಸ್ಥಾನಕ್ಕೆ ಹಿಂದಿರುಗಲು ಹೇಳಿ. ಈಗ ಪ್ರತಿಯೊಂದು ಮಗುವೂ ಮೆಲುದನಿಯಿಂದ ಪ್ರಾರಂಭಿಸಿ ಜೋರಾದ ಶಬ್ದದವರೆಗೆ ಅನುಕ್ರಮವಾಗಿ ತೋರಿಸುತ್ತಾ ಪೆಟ್ಟಿಗೆಗಳನ್ನು ಜೋಡಿಸಬೇಕು ಮತ್ತು ಇತರರು ಅದು ಸರಿಯೇ ತಪ್ಪೇ ಎಂದು ಹೇಳಬೇಕು.



Scanned with CamScanner

ವಿಸ್ತರಣಾ ಚಟುವಟಿಕೆ

## ಮಾದರಿ ತಯಾರಿಕೆ

### ಕಲಿಕಾ ಫಲಿತಗಳು

ತಾಳಗಳು ಮತ್ತು ನಿಶ್ಶಬ್ದಗಳನ್ನೊಳಗೊಂಡ ಶಬ್ದದ ಒಂದು ಮಾದರಿಯನ್ನು ಮಕ್ಕಳು ಅನುಸರಿಸಿ, ನಿರ್ವಹಿಸಿ, ವಿಸ್ತರಿಸುವುದು.

### ಕಲಿಕಾ ಸಾಮಗ್ರಿಗಳು

- ಶಿಶುಗೀತೆಗಳು, ಹಾಡು(ತಟ್ಟು ಚಪ್ಪಾಳೆ).
- ತರಗತಿಯಲ್ಲಿನ ಸಂಗೀತ ಸಾಧನಗಳು. (ಖಂಜರ, ಡೋಲು, ಸೀಟಿ, ಮರಳು ತುಂಬಿದ ಡಬ್ಬ, ಸಣ್ಣ ಕಲ್ಲುಗಳು ತುಂಬಿದ ಡಬ್ಬ)

### ಶಿಕ್ಷಕರ ಪೂರ್ವಸಿದ್ಧತೆ

ಅನುಸರಿಸಬೇಕಾದ ಶಬ್ದದ ಮಾದರಿಯನ್ನು ಅರ್ಥ ಮಾಡಿಕೊಳ್ಳಲು ಅಗತ್ಯವಾದ ಸೂಚನಾ ಪಟ್ಟಿಯನ್ನು ತಯಾರಿಸಿಕೊಳ್ಳುವುದು.

---

### ಚಟುವಟಿಕೆ 1: ನಾಯಕನನ್ನು ಅನುಸರಿಸುವುದು: ವಿವಿಧ ಶಬ್ದಗಳ ಮಾದರಿಯನ್ನು ತೋರಿಸಿಕೊಡುವುದು

ಶಿಕ್ಷಕರು ಮಾಡುವ ಒಂದು ಶಬ್ದವನ್ನು (ಚಪ್ಪಾಳೆ/ಕಾಲಿನಿಂದ ನೆಲವನ್ನು ತಟ್ಟುವುದು/ಚಿಟಿಕೆ ಹೊಡೆಯುವುದು) ವಿದ್ಯಾರ್ಥಿಗಳು ಅನುಕರಿಸಬೇಕು. ನಂತರ ಶಿಕ್ಷಕರು ಎರಡು ಶಬ್ದಗಳನ್ನು ಒಟ್ಟಿಗೇ ಮಾಡುವುದರ ಮೂಲಕ (ಚಪ್ಪಾಳೆ ಮತ್ತು ಕಾಲು ತಟ್ಟುವುದು) ಚಟುವಟಿಕೆಯ ಸಂಕೀರ್ಣತೆಯನ್ನು ಹೆಚ್ಚಿಸುವುದು. ಆಮೇಲೆ ಮೂರು ಶಬ್ದಗಳನ್ನು ಕ್ರಮವಾಗಿ ಮಾಡುವುದು, ವಿದ್ಯಾರ್ಥಿಗಳು ಅದನ್ನು ಅನುಸರಿಸುವಂತೆ ಹೇಳುವುದು.

---

### ಚಟುವಟಿಕೆ 2: ನಾಯಕನನ್ನು ಅನುಸರಿಸುವುದು: ಶಬ್ದದ ಏರಿಳಿತಗಳು ಮತ್ತು ತೀವ್ರತೆಯ ಮಾದರಿ

ಮಕ್ಕಳು ಕಣ್ಣು ಮುಚ್ಚಿ ಕುಳಿತುಕೊಳ್ಳುವುದು. ಶಿಕ್ಷಕರು ಚಪ್ಪಾಳೆ ಮೂಲಕ ಕೆಳಗೆ ಕೊಟ್ಟಿರುವ ಮಾದರಿಯನ್ನು ಮಾಡುವುದು. ಮಕ್ಕಳು ಶಿಕ್ಷಕರು ತೋರಿಸಿದ ಮಾದರಿಯನ್ನು ಸರಿಯಾಗಿ ಮಾಡಲು ಪ್ರಾರಂಭಿಸುತ್ತಿದ್ದಂತೆಯೇ ಶಿಕ್ಷಕರು ತಾವು ಮಾಡುತ್ತಿರುವುದನ್ನು ನಿಲ್ಲಿಸಿ ವಿದ್ಯಾರ್ಥಿಗಳು ಮುಂದುವರಿಸುವಂತೆ ಅನುವು ಮಾಡಿಕೊಡುವುದು.

- ಮೆಲ್ಲನೆ–ಜೋರಾಗಿ/ಮೆಲ್ಲನೆ–ಜೋರಾಗಿ/ಮೆಲ್ಲನೆ–ಜೋರಾಗಿ.
- ಜೋರಾಗಿ–ಜೋರಾಗಿ–ಮೆಲ್ಲನೆ/ಜೋರಾಗಿ–ಜೋರಾಗಿ–ಮೆಲ್ಲನೆ/ಜೋರಾಗಿ–ಜೋರಾಗಿ–ಮೆಲ್ಲನೆ.
- ಜೋರಾಗಿ–ಮೆಲ್ಲನೆ–ಜೋರಾಗಿ/ಜೋರಾಗಿ–ಜೋರಾಗಿ– ಜೋರಾಗಿ/ಮೆಲ್ಲನೆ– ಮೆಲ್ಲನೆ– ಮೆಲ್ಲನೆ.



Scanned with CamScanner


ವಿಸ್ತರಣಾ ಚಟುವಟಿಕೆ

## ಮಾದರಿ ತಯಾರಿಕೆ

### ಚಟುವಟಿಕೆ 3: ವಿವಿಧ ಸಾಧನಗಳನ್ನು ಉಪಯೋಗಿಸಿ ಮಾದರಿಯನ್ನು ಅನುಸರಿಸುವುದು

#### ಕಲಿಕಾ ಸಾಮಗ್ರಿಗಳು

ತರಗತಿಯಲ್ಲಿನ ಸಂಗೀತ ಸಾಧನಗಳು. (ಖಂಜರ, ಡೋಲು, ಸೀಟಿ, ಮರಳು ತುಂಬಿದ ಡಬ್ಬ, ಸಣ್ಣ ಕಲ್ಲುಗಳು ತುಂಬಿದ ಡಬ್ಬ)



#### ಸೂಚನೆಗಳು

ಶಿಕ್ಷಕರು ಒಂದು ಸಂಗೀತ ಸಾಧನವನ್ನು ಉಪಯೋಗಿಸಿ ಯಾವುದಾದರೊಂದು ಶಬ್ದದ ಮಾದರಿಯನ್ನು ತೋರಿಸಿಕೊಡುವುದು. ನಂತರ ಮಕ್ಕಳಿಗೆ ವಿವಿಧ ಸಂಗೀತ ಸಾಧನಗಳನ್ನು ಕೊಡುವುದು. ಆ ಸಾಧನಗಳನ್ನು ಉಪಯೋಗಿಸಿಕೊಂಡು ಮಕ್ಕಳು ಮೇಲೆ ತೋರಿಸಿದ ಮಾದರಿಯನ್ನು ಅನುಸರಿಸುವುದು.

---

### ಚಟುವಟಿಕೆ 4: ಶಬ್ದಗಳು ಮತ್ತು ತಪ್ಪಿದ ತಾಳಗಳ (ಸ್ಥಳಗಳ) ಮಾದರಿಯ ಮೂಲಕ ನಾಯಕನನ್ನು ಅನುಸರಿಸುವುದು

ಶಬ್ದಗಳು ಮತ್ತು ತಪ್ಪಿದ ತಾಳಗಳನ್ನೊಳಗೊಂಡ ಮಾದರಿಯ ಮೂಲಕ ಕೆಳಗೆ ವಿವರಿಸಿದಂತೆ ಮಕ್ಕಳಿಗೆ ತೋರಿಸಿಕೊಡುವುದು.

- ಚಪ್ಪಾಳೆ (ಒಂದು, ಎರಡು), ಎಣಿಕೆ ಮಾಡುವುದು (ಒಂದು, ಎರಡು), ಚಪ್ಪಾಳೆ (ಒಂದು, ಎರಡು). ಮಕ್ಕಳಿಗೆ ಈ ಮಾದರಿಯನ್ನು ಅನುಸರಿಸಲು ಹೇಳುವುದು. ಮಕ್ಕಳು ಒಂದು, ಎರಡು ಎಂದು ಹೇಳುತ್ತಾ ಎರಡು ಬಾರಿ ಚಪ್ಪಾಳೆ ತಟ್ಟುತ್ತಾರೆ ಮತ್ತು ಒಂದು, ಎರಡು ಎಂದು ಜೋರಾಗಿ ಎಣಿಕೆ ಮಾಡುತ್ತಾರೆ. ಮತ್ತೆ ಎರಡು ಬಾರಿ ಚಪ್ಪಾಳೆ ತಟ್ಟುತ್ತಾರೆ. ಮಕ್ಕಳಿಗೆ ಮೊದಲು ಜೋರಾಗಿ ನಂತರ ತಮ್ಮ ಮೆಲುದನಿಯಲ್ಲಿ ಎಣಿಕೆ ಮಾಡಲು ಹೇಳುವುದು.

ಮಕ್ಕಳು ಒಂದು ಬಾರಿ ಈ ಮಾದರಿಯನ್ನು ಮಾಡಲು ಕಲಿತ ತಕ್ಷಣ ಬೇರೊಂದು ಮಾದರಿಗೆ ಬದಲಿಸುವುದು. ಚಪ್ಪಾಳೆ–ಚಪ್ಪಾಳೆ–ಅಂತರ/ಚಪ್ಪಾಳೆ–ಚಪ್ಪಾಳೆ–ಅಂತರ/ಚಪ್ಪಾಳೆ–ಚಪ್ಪಾಳೆ–ಅಂತರ. ಈ ಬಾರಿ ಎಣಿಕೆ ಮಾಡದೆಯೇ ಮಾದರಿಯನ್ನು ಅನುಸರಿಸಲು ಹೇಳುವುದು. ನಂತರ ಮಾದರಿಯನ್ನು ನೀವು ಹೇಳುವವರೆಗೆ ನಿಲ್ಲಿಸದಂತೆ ಮಕ್ಕಳಿಗೆ ಮುಂದುವರೆಸಲು ಹೇಳುವುದು.

ನಂತರ ಸ್ವಲ್ಪ ಸಂಕೀರ್ಣ ಮಾದರಿಯನ್ನು ತೋರಿಸಿ–ಉದಾಹರಣೆಗೆ–ಚಪ್ಪಾಳೆ–ಅಂತರ/ಚಪ್ಪಾಳೆ–ಚಪ್ಪಾಳೆ–ಅಂತರ/ಚಪ್ಪಾಳೆ–ಅಂತರ/ಚಪ್ಪಾಳೆ–ಚಪ್ಪಾಳೆ–ಅಂತರ/ಮಕ್ಕಳು ಅದನ್ನು ಅನುಸರಿಸಲು ಅವಕಾಶ ಮಾಡಿಕೊಡುವುದು. ಆಮೇಲೆ ಅದೇ ಲಯವನ್ನು ಮುಂದುವರೆಸಲು ಬಿಡುವುದು.





Scanned with CamScanner

ವಿಸ್ತರಣಾ ಚಟುವಟಿಕೆ

## ಅನ್ವಯಿಸುವಿಕೆ

### ಕಲಿಕಾ ಫಲಿತಗಳು

- ಶಬ್ದಗಳ ಏರಿಳಿತಗಳು ಅಥವಾ ಶಬ್ದದ ದಿಕ್ಕಿನ ಆಧಾರಿತ ಸರಳ ಸಮಸ್ಯೆಗಳನ್ನು ಬಿಡಿಸುವುದು.

### ಶಿಕ್ಷಕರ ಪೂರ್ವಸಿದ್ಧತೆ

ಪ್ರತಿಯೊಂದು ಚಟುವಟಿಕೆ ಮತ್ತು ಸೂಚನೆಗಳ ಬಗ್ಗೆ ಪರಿಚಯ ಮಾಡಿಕೊಳ್ಳುವುದು.

---

### ಚಟುವಟಿಕೆ 1: ಧ್ವನಿಯನ್ನು ಪತ್ತೆ ಹಚ್ಚುವುದು ಮತ್ತು ಗುರುತಿಸುವುದು

ಮಕ್ಕಳಿಗೆ– "ನೀವು ಹೊರಗಡೆ ಆಟವಾಡುತ್ತಿದ್ದೀರಿ ಎಂದು ತಿಳಿದುಕೊಳ್ಳಿ, ಯಾರಾದರೂ ನಿಮ್ಮನ್ನು ಮನೆಗೆ ಬರುವಂತೆ ಕರೆದರೆ, ನಿಮಗೆ ಕರೆದವರು ನಿಮ್ಮ ತಾಯಿಯೋ?, ಅಜ್ಜಿಯೋ ಅಥವಾ ನಿಮ್ಮ ತಂಗಿಯೋ/ಅಕ್ಕನೋ ಎಂದು ಹೇಗೆ ಗೊತ್ತಾಗುತ್ತದೆ?" ಎಂದು ಪ್ರಶ್ನೆ ಮಾಡುವುದು. ಮಕ್ಕಳು ತಮಗೆ ಗೊತ್ತಾದ ರೀತಿಯಲ್ಲಿ ಉತ್ತರಿಸಲು/ವಿವರಿಸಲು ಅವಕಾಶ ಮಾಡಿ ಕೊಡುವುದು. ನಂತರ ಪ್ರತಿಯೊಬ್ಬರಿಗೂ ತಮ್ಮದೇ ಆದ ವಿಶಿಷ್ಟವಾದ ಧ್ವನಿ ಇರುತ್ತದೆ. ಇದರಿಂದ ನಾವು ಜನರನ್ನು ಗುರುತಿಸಬಹುದು ಎಂದು ವಿವರಿಸುವುದು. ಅವರು ಆಲೋಚಿಸಬಹುದಾದ ಯಾವುದಾದರೂ ಒಂದು ಸನ್ನಿವೇಶದಲ್ಲಿ ವ್ಯಕ್ತಿಯೊಬ್ಬ ಕಾಣಿಸದೇ ಬರೀ ಅವನ/ಅವಳ ಧ್ವನಿ ಕೇಳಿಸುತ್ತಿರುವ ಬಗ್ಗೆ ಚರ್ಚೆ ಮಾಡುವುದು. ದೈನಂದಿನ ಜೀವನದಲ್ಲಿ ಧ್ವನಿಯ ಗುರುತು ಹಿಡಿಯುವುದು ಏಕೆ ಬಹಳ ಮುಖ್ಯ? ಎಂದು ಚರ್ಚೆ ಮಾಡುವುದು.

---

### ಚಟುವಟಿಕೆ 2: ಬಾಗಿಲಲ್ಲಿರುವವರು ಯಾರು?

ಮಕ್ಕಳನ್ನು ಅರ್ಧ ವೃತ್ತಾಕಾರವಾಗಿ ಕೂರಿಸಿ ಅವರಲ್ಲಿ ಒಬ್ಬರನ್ನು ನಾಯಕನನ್ನಾಗಿ ಮಾಡುವುದು. ಆ ಮಗು ಮಕ್ಕಳಿಗೆ ಬೆನ್ನು ತೋರಿಸಿ ನಿಂತುಕೊಳ್ಳಬೇಕು. ಶಿಕ್ಷಕರು ಯಾವುದಾದರೊಂದು ಮಗುವಿನ ಬೆನ್ನನ್ನು ತಟ್ಟುವುದು. ಆ ಮಗು ನಿಂತುಕೊಂಡು ತನ್ನ ಬಳಿಯಿರುವ ಕೋಲನ್ನು ನೆಲಕ್ಕೆ ಬಡಿಯುವುದು. ಆಗ ನಾಯಕನಾಗಿರುವ ಮಗು "ಬಾಗಿಲಲ್ಲಿರುವವರು ಯಾರು?" ಎಂದು ಕೇಳುತ್ತದೆ. ನೆಲಕ್ಕೆ ಕೋಲಿನಿಂದ ಬಡಿದ ಮಗು (ಭೇಟಿಗೆ ಬಂದವ) "ನಾನು! ದಯವಿಟ್ಟು ಬಾಗಿಲು ತೆರೆ" ಎಂದು ಹೇಳುತ್ತದೆ. ಆ ಮಗುವಿನ ಧ್ವನಿಯನ್ನು ನಾಯಕನಾಗಿರುವ ಮಗು ಗುರುತಿಸಬೇಕು. ಕೊಟ್ಟ ಮೂರು ಅವಕಾಶಗಳಲ್ಲಿ ಊಹಿಸಲು ಸಾಧ್ಯವಾಗದಿದ್ದರೆ, ಕದ ತಟ್ಟಿದ ಮಗು ನಾಯಕನಾಗುತ್ತಾನೆ/ಳೆ.

---

### ಚಟುವಟಿಕೆ 3: ದೂರ/ಸ್ಥಳಕ್ಕೆ ಅನುಗುಣವಾಗಿ ಮಾತನಾಡುವವರು ತಮ್ಮ ಧ್ವನಿಯ ಏರಿಳಿತವನ್ನು ಹೊಂದಿಸಿಕೊಳ್ಳುವುದು

ಸನ್ನಿವೇಶಕ್ಕೆ ಅನುಗುಣವಾಗಿ ತಮ್ಮ ಧ್ವನಿಯ ಏರಿಳಿತವನ್ನು ಹೊಂದಿಸಿಕೊಳ್ಳುವುದು ಬಹಳ ಮುಖ್ಯ ಎಂಬುದರ ಬಗ್ಗೆ ಮಕ್ಕಳೊಡನೆ ಚರ್ಚೆ ಮಾಡುವುದು, ನೀವು ಯಾರ ಕಿವಿಯಲ್ಲಾದರೂ ಗುಟ್ಟು ಹೇಳಬೇಕೆಂದಿದ್ದರೆ ಎಷ್ಟು ಜೋರಾಗಿ ಹೇಳುವಿರಿ? ನಿಮ್ಮಿಂದ ಕೆಲವು ಅಡಿಗಳ ದೂರದಲ್ಲಿರುವವರ ಜೊತೆ ಮತ್ತು ತುಂಬಾ ದೂರದಲ್ಲಿರುವವರ ಜೊತೆ ಎಷ್ಟು ಜೋರಾಗಿ ಮಾತನಾಡಬೇಕು ಎಂದು ಚರ್ಚೆ ಮಾಡುವುದು.

---


### ಚಟುವಟಿಕೆ 4: ದೂರ ಮತ್ತು ಹತ್ತಿರ ಇರುವ ಜೋಡಿಗಳು

ಮಕ್ಕಳೆಲ್ಲಾ ಎದಿರು–ಬದಿರಾಗಿ ಎರಡು ಸಾಲಿನಲ್ಲಿ ನಿಲ್ಲುವುದು. ಪ್ರತಿಯೊಂದು ಮಗುವೂ ಇನ್ನೊಂದು ಮಗುವಿನ ಎದಿರು ಇರಬೇಕು. ಈ ಮಕ್ಕಳ ಜೋಡಿಯು ಒಬ್ಬರು ಇನ್ನೊಬ್ಬರಿಗೆ ಅವರು ಶಾಲೆಗೆ ಹೇಗೆ ಬಂದರೆಂದು ಹೇಳಬೇಕು. ಈಗ ಎರಡು ಸಾಲಿನಲ್ಲಿರುವ ಮಕ್ಕಳನ್ನು ಹತ್ತು ಹೆಜ್ಜೆ ಹಿಂದಕ್ಕೆ ಹೋಗಲು ತಿಳಿಸುವುದು. ಎರಡು ಸಾಲಿನ ಅಂತರವು ಹೆಚ್ಚಾಗುತ್ತದೆ. ಮಕ್ಕಳ ಜೋಡಿಯ ಒಂದು ಮಗುವು ಇನ್ನೊಂದು ಮಗುವಿಗೆ ತನಗೆ ಇಷ್ಟವಾದ ಪ್ರಾಣಿ ಯಾವುದೆಂದು ಹೇಳಬೇಕು. ನಂತರ ಮಕ್ಕಳು ಇನ್ನೂ ಹಿಂದಕ್ಕೆ ಹೋಗಿ ತರಗತಿಯ ಕೊನೆಗೆ ತಲುಪುವುದು ಮತ್ತು ತಮ್ಮ ಜೊತೆಗಾರರಿಗೆ ತಾವು ಹೇಳಬೇಕೆಂದಿರುವ ವಿಷಯವನ್ನು ತಲುಪಿಸಲು ಪ್ರಯತ್ನಿಸುವುದು. ಎಲ್ಲಾ ಮಕ್ಕಳೂ ಒಟ್ಟಿಗೇ ಮಾತನಾಡುತ್ತಿರುವುದರಿಂದ ಗದ್ದಲವಾಗುತ್ತದೆ. ತಮ್ಮ ಜೊತೆಗಾರರು ಹೇಳುತ್ತಿರುವುದನ್ನು ಗಮನವಿಟ್ಟು ಕೇಳಬೇಕಾಗುತ್ತದೆ ಮತ್ತು ಕೇಳಿದ ಶಬ್ದವನ್ನು ಅರ್ಥೈಸಿಕೊಳ್ಳಬೇಕಾಗುತ್ತದೆ.




Scanned with CamScanner


# ಶಿಕ್ಷಕರ ಕೈಪಿಡಿ - 4 ರಿಂದ 5 ವರ್ಷದವರಿಗೆ


















Printed for

ಸಮಗ್ರ ಶಿಕ್ಷಣ ಕರ್ನಾಟಕ

**Department of Primary & Secondary Education, Samagra Shikshana Karnataka**
New Public Offices, Annexe Building, Nrupathunga Road, Sampangi Rama Nagar, Bengaluru - 560001, Karnataka

Designed by: Zinc & Broccoli, www.zandb.in

Printed at: SCPL, www.scpl.net

Scanned with CamScanner